ಕೇರಳ ತಲುಪಿದ ತಜ್ಞರ ತಂಡ

ತಿರುವನಂತಪುರದ ವಿಮಾನ ನಿಲ್ದಾಣದಲ್ಲಿ ಜೂನ್ 14ರಿಂದ ಕೆಟ್ಟು ನಿಂತಿರುವ 'ಯುಕೆ ಎಫ್–35ಬಿ' ಯುದ್ಧ ವಿಮಾನವನ್ನು ದುರಸ್ತಿ ಮಾಡಲು ಬ್ರಿಟನ್‌ನಿಂದ 14 ಜನರ ತಜ್ಞರ ತಂಡವು ಇಲ್ಲಿಗೆ ತಲುಪಿದೆ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ಶೋಷಿತರ ಸಮಾವೇಶ ಜಾತೀಯತೆಯಲ್ಲ' 6

50 ಸಾವಿರ ಬ್ಯಾಂಕ್ ಸಿಬ್ಬಂದಿ ನೇಮಕ 10



ಆನ್‌ಲೈನ್ ಬೆಟ್ಟಿಂಗ್‌ಗೆ ಅಂಕುಶ

'ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ' ಸಿದ್ಧ

● ಮುಂಬರುವ ವಿಧಾನ ಮಂಡಲದ ಅಧಿವೇಶನದಲ್ಲಿ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆನ್‌ಲೈನ್ ಬೆಟ್ಟಿಂಗ್‌ಗೆ (ಜೂಜಾಟ) ನಿಷೇಧ ಹೇರಲು ಮತ್ತು ಕೌಶಲ ಆಧಾರಿತ ಆಟಗಳಿಗೆ (ಗೇಮ್ ಆಫ್ ಸ್ಕಿಲ್) ಪರವಾನಗಿ ನೀಡಲು ಸರ್ಕಾರ ನಿರ್ಧರಿಸಿದೆ.

ಈ ಉದ್ದೇಶದಿಂದ 'ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ–2025'ರ ಕರಡು ಸಿದ್ಧಗೊಂಡಿದೆ. ವಿಧಾನಮಂಡಲದ ಮುಂಬರುವ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲು ಸರ್ಕಾರ ಮುಂದಾಗಿದೆ.

'ಕರ್ನಾಟಕ ಪೊಲೀಸ್ ಕಾಯ್ದೆ –1963'ಕ್ಕೆ ತಿದ್ದುಪಡಿ ಮಾಡುವ ಮೂಲಕ ಆನ್‌ಲೈನ್ ಬೆಟ್ಟಿಂಗ್ ಮೇಲೆ ಸಂಪೂರ್ಣವಾಗಿ ನಿಯಂತ್ರಣ ಹೇರಲು ಈ ಮಸೂದೆಯನ್ನು ಸರ್ಕಾರ ರೂಪಿಸಿದೆ. ಜೊತೆಗೆ, ರಾಜ್ಯ ಸರ್ಕಾರ 'ಕರ್ನಾಟಕ ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ನಿಯಂತ್ರಣ ಪ್ರಾಧಿಕಾರ' ರಚಿಸಲು ಕೂಡಾ ಈ ಮಸೂದೆ ಅವಕಾಶ ಕಲ್ಪಿಸಲಿದೆ. ಈ ಪ್ರಾಧಿಕಾರದಿಂದ ಪರವಾನಗಿ ಪಡೆದು ನಡೆಸುವ 'ಕೌಶಲ ಆಟ'ಗಳಿಗೆ ನಿಷೇಧದಿಂದ ವಿನಾಯಿತಿ ಸಿಗಲಿದೆ.

ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ತೊಡಗಿರುವ ಮತ್ತು ಪ್ರಾಧಿಕಾರದಿಂದ ಪರವಾನಗಿ ಪಡೆಯದೆ 'ಕೌಶಲ ಆಟ'ಗಳ ಆನ್‌ಲೈನ್ ವೇದಿಕೆ ನಡೆಸುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯವರಿಗೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲು ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಆನ್‌ಲೈನ್ ಬೆಟ್ಟಿಂಗ್‌ಗೆ ಕುಮ್ಮಕ್ಕು, ಪ್ರೋತ್ಸಾಹ ನೀಡುವವರಿಗೆ, ಸಹಾಯ ಮಾಡುವವರಿಗೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹10 ಸಾವಿರವರೆಗೆ ವಿಸ್ತರಿಸಬಹುದಾದ ದಂಡ ವಿಧಿಸುವ ಪ್ರಸ್ತಾವವೂ ಇದೆ.

ಕರಡು ಮಸೂದೆಯಲ್ಲಿ ಏನಿದೆ?: ಉದ್ದೇಶಿತ ತಿದ್ದುಪಡಿ ಮಸೂದೆಯಲ್ಲಿ, ನಗದು, ಟೋಕನ್‌ಗಳು, ವರ್ಚುವಲ್ ಕರೆನ್ಸಿ ಅಥವಾ ಡಿಜಿಟಲ್ ಸ್ವರೂಪದ ಹಣ ಬಳಕೆಯ 'ಅದೃಷ್ಟ ಆಟ'ಗಳನ್ನು ಒಳಗೊಂಡ ಎಲ್ಲ ರೀತಿಯ ಆನ್‌ಲೈನ್ ಬೆಟ್ಟಿಂಗ್ ಅಥವಾ ಜೂಜಾಟವನ್ನು ನಿಷೇಧಿಸುವ ಪ್ರಸ್ತಾವವಿದೆ. ರಾಜ್ಯ ಸರ್ಕಾರ ಅಥವಾ ಗೊತ್ತುಪಡಿಸಿದ ಪ್ರಾಧಿಕಾರವು ನಿರ್ಧರಿಸಿದಂತೆ ಪರವಾನಗಿ ಪಡೆಯುವ ಮತ್ತು ಅಂತಹ ಪ್ರಾಧಿಕಾರದ ನಿಯಂತ್ರಣಕ್ಕೆ ಒಳಪಡುವ ಷರತ್ತಿನ 'ಕೌಶಲ ಆಟ'ಗಳು ಈ ನಿಷೇಧದಿಂದ ವಿನಾಯಿತಿ ಪಡೆಯಲಿವೆ.


ಇಂಟರ್‌ನೆಟ್, ಮೊಬೈಲ್ ಆ್ಯಪ್‌ಗಳು ಅಥವಾ ಇತರ ಡಿಜಿಟಲ್ ವೇದಿಕೆಗಳ ಮೂಲಕ ನಡೆಸುವ ಆಟ, ಕಾರ್ಯಕ್ರಮ ಅಥವಾ ಚಟುವಟಿಕೆಯ ಫಲಿತಾಂಶದ ಮೇಲೆ ಹಣ, ಟೋಕನ್‌ಗಳು, ವರ್ಚುವಲ್ ಕರೆನ್ಸಿ ಅಥವಾ ಡಿಜಿಟಲ್ ಸ್ವರೂಪದ ಹಣವನ್ನು ಪಣಕ್ಕಿಟ್ಟು ಆಡುವುದು 'ಆನ್‌ಲೈನ್ ಬೆಟ್ಟಿಂಗ್' ಆಗಿದ್ದು, ಇಲ್ಲಿ ಫಲಿತಾಂಶವು ಆಕಸ್ಮಿಕವಾಗಿ ನಿರ್ಧಾರವಾಗುತ್ತದೆ ಎಂದು ಈ ಕರಡು ಮಸೂದೆಯಲ್ಲಿ ವಿವರಿಸಲಾಗಿದೆ.

▶10

ರಾಜ್ಯದಲ್ಲಿ ಆನ್‌ಲೈನ್ ಬೆಟ್ಟಿಂಗ್ ಪ್ರಕರಣ

ವರ್ಷ	ಪ್ರಕರಣ
2023	492
2024	382
2025	23

(ಮಾರ್ಚ್‌ವರೆಗೆ)



ತಿದ್ದುಪಡಿ ಕಾಯ್ದೆ ಜಾರಿ ಹೇಗೆ?

- ಸೈಬರ್ ಅಪರಾಧ ಶಾಖೆ ಸೇರಿದಂತೆ ರಾಜ್ಯದ ಪೊಲೀಸರಿಗೆ ಅಕ್ರಮ ಆನ್‌ಲೈನ್ ಬೆಟ್ಟಿಂಗ್ ವೇದಿಕೆಗಳು ಮತ್ತು ನಿರ್ವಾಹಕರ ವಿರುದ್ಧ ತನಿಖೆ ನಡೆಸಲು ಮತ್ತು ಕಠಿಣ ಕ್ರಮ ಕೈಗೊಳ್ಳಲು ಅಧಿಕಾರ ಸಿಗಲಿದೆ
- ಅಕ್ರಮ ಆನ್‌ಲೈನ್ ಬೆಟ್ಟಿಂಗ್ ಅನ್ನು ನೇರವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸುವ ವಿಷಯವನ್ನು ಇಂಟರ್‌ನೆಟ್ ಸೇವಾ ಪೂರೈಕೆದಾರರು, ನೆಟ್‌ವರ್ಕ್ ಸೇವಾ ಪೂರೈಕೆದಾರರು ಮತ್ತು ಸರ್ಚ್ ಎಂಜಿನ್‌ಗಳು ಪೋಸ್ಟ್ ಮಾಡಬಾರದು ಅಥವಾ ಪ್ರಚಾರ ಮಾಡಬಾರದು

'ಪ್ರಾಧಿಕಾರ'ದ ಕೆಲಸವೇನು?

- ಕೋರ್ಟ್ ತೀರ್ಪುಗಳು ಮತ್ತು ಉದ್ಯಮ ಮಾನದಂಡಗಳ ಆಧಾರದಲ್ಲಿ 'ಕೌಶಲ ಆಟ'ಗಳು ಮತ್ತು 'ಅದೃಷ್ಟದ ಆಟ'ಗಳ ವ್ಯತ್ಯಾಸ ಗುರುತಿಸಬೇಕು
- ನೋಂದಾಯಿಸದ ಆನ್‌ಲೈನ್ ವೇದಿಕೆಗಳು ಮತ್ತು ಅಕ್ರಮ ಬೆಟ್ಟಿಂಗ್ ಚಟುವಟಿಕೆ ಮೇಲೆ ನಿಗಾ
- ಆನ್‌ಲೈನ್ ಬೆಟ್ಟಿಂಗ್‌ನ ಅಪಾಯಗಳ ಬಗ್ಗೆ ಅರಿವು ಮೂಡಿಸಲು ಕ್ರಮ
- ಕೌಶಲ ಆಧಾರಿತ ಗೇಮಿಂಗ್ ವೇದಿಕೆಗಳನ್ನು ನಿರ್ವಹಿಸುವವರಿಗೆ ಪರವಾನಗಿ
- ಮಾಹಿತಿ ತಂತ್ರಜ್ಞಾನ ಇಲಾಖೆ ಮತ್ತು ರಾಜ್ಯ ಪೊಲೀಸ್ ಸೈಬರ್ ಅಪರಾಧ ವಿಭಾಗದ ಜೊತೆ ಸೇರಿ ವೆಬ್‌ಸೈಟ್‌ಗಳು, ಮೊಬೈಲ್ ಆ್ಯಪ್‌ಗಳು, ಡಿಜಿಟಲ್ ಸೇವೆಗಳನ್ನು ಒಳಗೊಂಡಂತೆ ನೋಂದಾಯಿಸದ ಆನ್‌ಲೈನ್ ಬೆಟ್ಟಿಂಗ್ ವೇದಿಕೆಗಳನ್ನು ನಿರ್ಬಂಧಿಸಲು ತಂತ್ರಜ್ಞಾನ ಅಭಿವೃದ್ಧಿಪಡಿಸಬೇಕು
- ಪ್ರಾಧಿಕಾರದ ಅಧಿಸೂಚನೆಯ ನಂತರ ನೋಂದಾಯಿಸದ ಆನ್‌ಲೈನ್ ವೇದಿಕೆಗಳನ್ನು ನಿರ್ಬಂಧಿಸಬೇಕು
- ಅಕ್ರಮ ಬೆಟ್ಟಿಂಗ್ ವೇದಿಕೆಗಳ ಹಣಕಾಸು ವಹಿವಾಟು ನಿಷೇಧಿಸಬೇಕು
- ಅಕ್ರಮ ಬೆಟ್ಟಿಂಗ್ ವೇದಿಕೆಗಳಿಗೆ ಪ್ರವೇಶ ನಿರ್ಬಂಧಿಸಲು ಜಿಯೋ ಫೆನ್ಸಿಂಗ್ ಮತ್ತು ಐಪಿ ಬ್ಲಾಕಿಂಗ್ ತಂತ್ರಜ್ಞಾನಗಳ ಬಳಕೆ ಕಡ್ಡಾಯಗೊಳಿಸಬೇಕು
- ಬೆಟ್ಟಿಂಗ್‌ಗೆ ಸಂಬಂಧಿಸಿದ ವ್ಯಸನ ಅಥವಾ ಆರ್ಥಿಕ ತೊಂದರೆಗೆ ಒಳಗಾದವರಿಗೆ ಸಹಾಯವಾಣಿ ಮತ್ತು ಬೆಂಬಲ ಕಾರ್ಯವಿಧಾನ ಆರಂಭಿಸಬೇಕು
- ಅಕ್ರಮ ಆನ್‌ಲೈನ್ ಬೆಟ್ಟಿಂಗ್ ನಡೆಸುವವರ ಬಗ್ಗೆ ಮಾಹಿತಿ ನೀಡುವ ವ್ಯಕ್ತಿ ಅಥವಾ ಘಟಕಕ್ಕೆ ರಕ್ಷಣೆ ಮತ್ತು ಸೂಕ್ತ ಬಹುಮಾನ

'ಕೌಶಲ ಆಟ'ಕ್ಕೆ ಪರವಾನಗಿ

ಯಾವುದೇ ಆಟ, ಸ್ಪರ್ಧೆ ಅಥವಾ ಚಟುವಟಿಕೆಯ ಫಲಿತಾಂಶವು ಸ್ಪರ್ಧಿಸುವವರ ಕೌಶಲ, ತಿಳಿವಳಿಕೆ, ತರಬೇತಿ ಅಥವಾ ಪರಿಣತಿಯನ್ನು ಅವಲಂಬಿಸಿದ್ದರೆ ಅದನ್ನು 'ಕೌಶಲ ಆಟ' (ಗೇಮ್ ಆಫ್ ಸ್ಕಿಲ್) ಎಂದು ಕರೆಯಲಾಗಿದೆ. ತಿದ್ದುಪಡಿ ಮಸೂದೆಯಲ್ಲಿ ಅಂತಹ ಆನ್‌ಲೈನ್ ಆಟಗಳಿಗೆ ವಿನಾಯಿತಿ ನೀಡಲಾಗಿದೆ.

ಕೌಶಲ ಆಧಾರಿತ ಗೇಮಿಂಗ್ ಪ್ಲಾಟ್‌ಫಾರ್ಮ್ ನಿರ್ವಹಿಸಲು ಇಚ್ಛಿಸುವವರು ಪರವಾನಗಿ ಪಡೆಯಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬೇಕು. ಗ್ರಾಹಕರ ವಿಳಾಸ ದೃಢೀಕರಣ (ಕೆವೈಸಿ) ದಾಖಲೆ ಪರಿಶೀಲಿಸಬೇಕು ಮತ್ತು ಹಣ ವರ್ಗಾವಣೆ ವಿರೋಧಿ ಕ್ರಮ ಸೇರಿದಂತೆ ಅರ್ಹತಾ ಮಾನದಂಡಗಳನ್ನು ಪ್ರಾಧಿಕಾರ ನಿಗದಿಪಡಿಸಬೇಕು. ಆಟದಲ್ಲಿ ಭಾಗವಹಿಸುವವರಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಅತಿಯಾದ ಜಾಹೀರಾತು ಅಥವಾ ನೀಡಲು ಸಾಧ್ಯವಾಗದ ಬಹುಮಾನಗಳನ್ನು ಘೋಷಿಸಿ ಬಳಕೆದಾರರನ್ನು ಆಕರ್ಷಿಸುವಂತಹ ಕ್ರಮಗಳಿಗೆ ಪ್ರಾಧಿಕಾರ ನಿರ್ಬಂಧ ವಿಧಿಸಲಿದೆ. ಪರವಾನಗಿ ಅವಧಿ ಮೂರು ವರ್ಷ. ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಿದ ನಂತರ ಪರವಾನಗಿ ನವೀಕರಿಸಲು ಅವಕಾಶವಿದೆ.

ಎಜ್‌ಬಾಸ್ಟನ್‌ನಲ್ಲಿ ಭಾರತಕ್ಕೆ ಚಾರಿತ್ರಿಕ ಜಯ

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಭಾರತ ಕ್ರಿಕೆಟ್ ತಂಡವು ಇದೇ ಮೊದಲ ಬಾರಿ ಟೆಸ್ಟ್ ಕ್ರಿಕೆಟ್ ಪಂದ್ಯ ಗೆದ್ದು ಚಾರಿತ್ರಿಕ ಸಾಧನೆ ಮೆರೆಯಿತು. ವೇಗಿ ಆಕಾಶ್ ದೀಪ್ ಅವರ ಅಮೋಘ ಬೌಲಿಂಗ್ ಬಲದಿಂದ ಭಾನುವಾರ ಇಲ್ಲಿ ಮುಕ್ತಾಯವಾದ ಪಂದ್ಯದಲ್ಲಿ ಭಾರತ ತಂಡವು ಇಂಗ್ಲೆಂಡ್ ಎದುರು ಬೃಹತ್ ಅಂತರದ ಜಯ ಸಾಧಿಸಿತು.

ಸ್ಕೋರು

ಮೊದಲ ಇನಿಂಗ್ಸ್

ಭಾರತ **587** (151 ಓವರ್‌ಗಳಲ್ಲಿ)

ಇಂಗ್ಲೆಂಡ್ **407** (89.3 ಓವರ್‌ಗಳಲ್ಲಿ)

ಎರಡನೇ ಇನಿಂಗ್ಸ್

ಭಾರತ 6ಕ್ಕೆ **427** ಡಿಕ್ಲೇರ್ಡ್ (83 ಓವರ್‌ಗಳಲ್ಲಿ)

ಇಂಗ್ಲೆಂಡ್ **271** (68.1 ಓವರ್‌ಗಳಲ್ಲಿ)

ಫಲಿತಾಂಶ: ಭಾರತ ತಂಡಕ್ಕೆ **336** ರನ್ ಜಯ

ಪಂದ್ಯಶ್ರೇಷ್ಠ: ಶುಭಮನ್ ಗಿಲ್

5 ಪಂದ್ಯಗಳ ಸರಣಿಯಲ್ಲಿ 1-1ರ ಸಮಬಲ

1692 ಈ ಪಂದ್ಯದಲ್ಲಿ ದಾಖಲಾದ ಒಟ್ಟು ರನ್‌ಗಳ ಮೊತ್ತ

ಆಕಾಶ್ ದೀಪ್

ಓವರ್; **21.1**

ಮೇಡನ್; **2**

ರನ್; **99**

ವಿಕೆಟ್; **6**

ವಿವರ ▶12

ಬಾಲ್ಯ ವಿವಾಹ ನಿಷೇಧ ಕಾಯ್ದೆ– 2006ಕ್ಕೆ ಕಾನೂನು ಬಲ

ನಿಶ್ಚಿತಾರ್ಥವೂ ಅಪರಾಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲ್ಯ ವಿವಾಹಗಳನ್ನು ಮಾಡಲು ಯತ್ನಿಸುವ, ಸಿದ್ಧತೆ ನಡೆಸುವ ಅಥವಾ ಚಿಕ್ಕ ವಯಸ್ಸಿನ ಬಾಲಕ- ಬಾಲಕಿ ನಡುವೆ ಮದುವೆ ಉದ್ದೇಶದಿಂದ ನಿಶ್ಚಿತಾರ್ಥ ಮಾಡುವವರ ವಿರುದ್ಧವೂ ಕ್ರಮ ತೆಗೆದುಕೊಳ್ಳುವ ಉದ್ದೇಶದಿಂದ 'ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಮಸೂದೆ– 2025' ಅನ್ನು ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಬಾಲ್ಯ ವಿವಾಹಗಳನ್ನು ಮಾಡಲು ಯತ್ನಿಸಿದರೆ, ಸಿದ್ಧತೆ ನಡೆಸಿದರೆ ಅಥವಾ ಚಿಕ್ಕ ವಯಸ್ಸಿನ ಹುಡುಗ- ಹುಡುಗಿಯರಿಗೆ ನಿಶ್ಚಿತಾರ್ಥ ಮಾಡಿದರೆ 2 ವರ್ಷಗಳ ವರೆಗೆ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಅಥವಾ ₹1 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಬಹುದು.

▶11

700 ಬಾಲ್ಯ ವಿವಾಹ



'ಈ ವರ್ಷ 700 ಬಾಲ್ಯ ವಿವಾಹಗಳು ನಡೆದಿವೆ. ಬಾಲ್ಯ ವಿವಾಹ ಆಗುವುದು ಜಿಲ್ಲಾಧಿಕಾರಿಗಳ ಗಮನಕ್ಕೆ ಏಕೆ ಬರುವುದಿಲ್ಲ? ಕೆಳಹಂತದ ಅಧಿಕಾರಿಗಳು ಈ ಬಗ್ಗೆ ವರದಿ ಮಾಡುವುದಿಲ್ಲವೇ?' ಎಂದು ಸಭೆಯಲ್ಲಿ ಮುಖ್ಯಮಂತ್ರಿ ಪ್ರಶ್ನಿಸಿದ್ದರು. ಈ ವೇಳೆ, ಬಾಲ್ಯ ವಿವಾಹ ನಡೆಯುವುದಕ್ಕೂ ಮೊದಲು ಬಾಲ್ಯ ವಿವಾಹ ನಡೆಸಲು ಯತ್ನಿಸುವವರ, ಸಿದ್ಧತೆ ಮಾಡುವವರ, ನಿಶ್ಚಿತಾರ್ಥ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಲು ಕಾಯ್ದೆಯಲ್ಲಿ ಅವಕಾಶ ಇಲ್ಲದಿರುವ ಬಗ್ಗೆ ಜಿಲ್ಲಾಧಿಕಾರಿಗಳು ಗಮನಸೆಳೆದಿದ್ದರು. ಈ ಕಾರಣಕ್ಕೆ ಈ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವೃದ್ಧರಿಗೆ ಕಾರ್ಡ್ ಇದೆ, ವಿಮೆ ಇಲ್ಲ

● ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ 'ಆಯುಷ್ಮಾನ್ ವಯೋ ವಂದನಾ' ಯೋಜನೆ ಜಾರಿಯಾಗದಿದ್ದರೂ 70 ವರ್ಷ ಮೇಲ್ಪಟ್ಟವರಿಗೆ ಆರೋಗ್ಯ ವಿಮೆಯ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ. ಈಗಾಗಲೇ 1.71 ಲಕ್ಷಕ್ಕೂ ಅಧಿಕ ವೃದ್ಧರು ಈ ಕಾರ್ಡ್ ಪಡೆದಿದ್ದಾರೆ. ಆದರೆ, ಆಸ್ಪತ್ರೆಗಳಲ್ಲಿ ಈ ಯೋಜನೆಯಡಿ ಚಿಕಿತ್ಸೆ ಸಿಗದ ಪರಿಣಾಮ ಗೊಂದಲಕ್ಕೆ ಒಳಗಾಗಿದ್ದಾರೆ.

'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ'ಯನ್ನು (ಎಬಿ–ಪಿಎಂಜೆಎವೈ) ಕಳೆದ ವರ್ಷ ವಿಸ್ತರಿಸಿದ ಕೇಂದ್ರ ಸರ್ಕಾರ, 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಅನ್ವಯವಾಗುವಂತೆ ಈ ಯೋಜನೆಯನ್ನು ಜಾರಿ ಮಾಡಿತ್ತು. ಯೋಜನೆಯಡಿ ನಿಗದಿತ ಅನುದಾನದ ಖಚಿತತೆ ಇಲ್ಲದ ಕಾರಣ ರಾಜ್ಯ ಸರ್ಕಾರ ಇನ್ನೂ ಈ ಯೋಜನೆಯನ್ನು ಅನುಷ್ಠಾನ ಮಾಡಿಲ್ಲ. ಆದರೆ, ಯೋಜನೆಯಡಿ ಕಾರ್ಡ್ ವಿತರಿಸುತ್ತಿರುವ ಕಾರಣ, ವೃದ್ಧರು ಉತ್ಸಾಹದಿಂದ ಈ ಕಾರ್ಡ್ ಪಡೆಯುತ್ತಿದ್ದಾರೆ.

▶4

ಯೋಜನೆಯಡಿ ಕಾರ್ಡ್ ವಿತರಣೆ ವಿವರ

1,76,477 ಕಾರ್ಡ್‌ಗೆ ಅರ್ಜಿ ಸಲ್ಲಿಸಿದವರು

1,71,549 ಕಾರ್ಡ್ ಪಡೆದವರು

4,927 ಅನುಮೋದನೆ ಬಾಕಿ ಇರುವ ಅರ್ಜಿಗಳು

13 ಕಾರ್ಡ್ ಪಡೆಯುವಿಕೆಯಲ್ಲಿ ರಾಜ್ಯದ ಸ್ಥಾನ

ನಾಗರ ವಿಗ್ರಹ ಕಿತ್ತ ಆರೋಪ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ರಾಗಿಗುಡ್ಡ ಸಮೀಪದ ಬಂಗಾರಪ್ಪ ಬಡಾವಣೆಯಲ್ಲಿ ಶನಿವಾರ ರಾತ್ರಿ ದೇವರ ವಿಗ್ರಹ ಕಿತ್ತ ಆರೋಪದಡಿ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಶೇಷಾದ್ರಿಪುರಂ ನಿವಾಸಿ ಸೈಯದ್ ಅಹಮದ್ (32) ಹಾಗೂ ಬಾಪೂಜಿ ನಗರದ ರಹಮತ್ (50) ಬಂಧಿತರು.

'ಬಡಾವಣೆಯಲ್ಲಿನ ನಿರ್ಮಾಣ ಹಂತದ ಕಟ್ಟಡವೊಂದರ ಎದುರು ಖಾಲಿ ಜಾಗ ಇತ್ತು. ಅಲ್ಲಿ ಕಟ್ಟೆ ನಿರ್ಮಿಸಿ ಗಣಪತಿ ಮತ್ತು ನಾಗರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದೆವು. ಈ ಕಟ್ಟಡದ ನೆಲ ಮಹಡಿಯಲ್ಲಿ ವ್ಯಕ್ತಿಯೊಬ್ಬರು ನೆಲಸಿದ್ದು, ಶನಿವಾರ ಇವರ ಸ್ನೇಹಿತರು ಸ್ಥಳಕ್ಕೆ ಬಂದು ನಾಗರ ವಿಗ್ರಹ ಕಿತ್ತು ಹಾಕಿದ್ದಾರೆ' ಎಂದು ಸ್ಥಳೀಯರು ಆರೋಪಿಸಿದ್ದರು. ಪೊಲೀಸರು ಭಾನುವಾರ ಸ್ಥಳ ಪರಿಶೀಲನೆ ನಡೆಸಿದ್ದರು.

'ಪ್ರಸ್ತುತ ರಾಗಿಗುಡ್ಡ ಶಾಂತವಾಗಿದೆ. ಇಲ್ಲಿ ಶಾಂತಿ ಪಡೆ ಸಕ್ರಿಯವಾಗಿದೆ. ಈ ಭಾಗದಲ್ಲಿ ಎಲ್ಲ ಧರ್ಮದವರೂ ಇದ್ದು ಕೆಲವರು ಸಮಾಜದ ಸ್ವಾಸ್ಥ್ಯ ಕೆಡಿಸಲು ಅಪಪ್ರಚಾರ ಮಾಡುತ್ತಿದ್ದಾರೆ. ಬೇರೆ ಕಡೆಯಿಂದ ಬಂದ ವ್ಯಕ್ತಿಗಳಿಂದ ಈ ಕೃತ್ಯ ನಡೆದಿದೆ. ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಲಾಗಿದೆ' ಎಂದು ಶಾಂತಿನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಯದೇವಪ್ಪ ತಿಳಿಸಿದ್ದಾರೆ.

ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಾ.ಧನಂಜಯ ಸರ್ಜಿ, ರಾಷ್ಟ್ರ ಭಕ್ತರ ಬಳಗದ ಸಂಚಾಲಕ ಕೆ.ಎಸ್.ಈಶ್ವರಪ್ಪ, ಕೆ.ಈ.ಕಾಂತೇಶ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಕೆ.ಜಗದೀಶ್ ಸ್ಥಳಕ್ಕೆ ಭೇಟಿ ನೀಡಿದ್ದರು.

▶6



ಸಿಮೆಂಟ್ ಕಟ್ಟೆ ಮೇಲೆ ಪ್ರತಿಷ್ಠಾಪಿಸಿದ್ದ ನಾಗರ ವಿಗ್ರಹವನ್ನು ಕಿತ್ತಿರುವುದು

ತಪ್ಪಿತಸ್ಥರ ವಿರುದ್ಧ ಕ್ರಮ: ಎಸ್‌ಪಿ

'ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಸಿಮೆಂಟ್ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಿದ್ದ ನಾಗರ ವಿಗ್ರಹ ಕಿತ್ತಿರುವುದು ಕಂಡುಬಂದಿದೆ. ಈ ಸಂಬಂಧ ಇಬ್ಬರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದೇವೆ. ಬಡಾವಣೆಯಲ್ಲಿ ಶಾಂತ ಪರಿಸ್ಥಿತಿ ಇದ್ದು, ಸುಳ್ಳು ಸುದ್ದಿ ಹಬ್ಬಿಸಿ ಶಾಂತಿ ಕದಡಲು ಪ್ರಯತ್ನಿಸಿದರೆ ಕಠಿಣ ಕ್ರಮ ಜರುಗಿಸುತ್ತೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಎಚ್ಚರಿಸಿದ್ದಾರೆ.

'ಒಬಿಸಿ ಸಲಹಾ ಮಂಡಳಿ ಸದಸ್ಯರಲ್ಲಿ ಸಿದ್ದರಾಮಯ್ಯ ಒಬ್ಬರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಇತರ ಹಿಂದುಳಿದ ಜಾತಿ (ಒಬಿಸಿ) ಪಟ್ಟಿಯಲ್ಲಿರುವ ಸಮುದಾಯಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಪರಿಹಾರ ಒದಗಿಸುವ ಉದ್ದೇಶದಿಂದ ಎಐಸಿಸಿ ರಚಿಸಿರುವ ಒಬಿಸಿ ಸಲಹಾ ಮಂಡಳಿಯ ಸದಸ್ಯರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಒಬ್ಬರು ಎಂದು ಮುಖ್ಯಮಂತ್ರಿ ಸಚಿವಾಲಯ ಸ್ಪಷ್ಟನೆ ನೀಡಿದೆ.

ಸಲಹಾ ಮಂಡಳಿಯ ಸಭೆ ಇದೇ 15ರಂದು ಎಐಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾದ ಡಾ. ಅನಿಲ್ ಜೈಹಿಂದ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ. ಸಭೆಯ ಆತಿಥ್ಯವನ್ನು ಮುಖ್ಯಮಂತ್ರಿ ವಹಿಸಿಕೊಂಡಿದ್ದಾರೆ.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ಈ ಸಭೆ ನಡೆಯಲಿದೆ. ವಿವಿಧ ರಾಜ್ಯಗಳ ಪಕ್ಷದ ಮಾಜಿ ಮುಖ್ಯಮಂತ್ರಿಗಳು, ಹಾಲಿ ಮತ್ತು ಮಾಜಿ ಸಂಸದರು, ಶಾಸಕರು ಸೇರಿ 50 ಮಂದಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಮಂಡಳಿ ಅಧ್ಯಕ್ಷರಾಗಿ ಸಿದ್ದರಾಮಯ್ಯ ಅವರು ನೇಮಕಗೊಂಡಿದ್ದಾರೆ ಎನ್ನುವುದು ಸರಿಯಲ್ಲ. ಅಂತಹ ಯಾವುದೇ ನೇಮಕಾತಿ ಆಗಿಲ್ಲ ಎಂದು ಸಚಿವಾಲಯ ವಿವರಿಸಿದೆ.

ಹಣದ ಜತೆಗೆ ದಂಪತಿ ಪರಾರಿ

ಪ್ರಜಾವಾಣಿ ವಾರ್ತೆ

ಅಧಿಕ ಬಡ್ಡಿ ವಂಚನೆ

ಬೆಂಗಳೂರು: ರಾಮಮೂರ್ತಿನಗರದಲ್ಲಿ ಎ ಆ್ಯಂಡ್ ಎ ಚಿಟ್ ಫಂಡ್ ಮತ್ತು ಫೈನಾನ್ಸ್ ಹೆಸರಿನಲ್ಲಿ ಕೇರಳದ ದಂಪತಿ ಅಧಿಕ ಬಡ್ಡಿ ಆಸೆ ತೋರಿಸಿ ಹಲವರಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿ ಪರಾರಿಯಾಗಿರುವ ಘಟನೆ ನಡೆದಿದೆ.

ರಾಮಮೂರ್ತಿನಗರ ನಿವಾಸಿ, ಪಿ.ಟಿ.ಸ್ಯಾವಿಯೊ ಅವರ ದೂರಿನ ಮೇರೆಗೆ ಸಂಸ್ಥೆಯ ಮಾಲೀಕರಾದ ಎ.ವಿ.ಟಾಮಿ ಮತ್ತು ಅವರ ಪತ್ನಿ ಶಿನಿ ಟಾಮಿ ವಿರುದ್ಧ ಚಿಟ್ ಫಂಡ್ ಕಾಯ್ದೆ, ಬಿಎನ್‌ಎಸ್‌ನ ವಿವಿಧ ಕಲಂಗಳ ಅಡಿ ರಾಮಮೂರ್ತಿ ನಗರ ಪೊಲೀಸರು ಎಫ್‌ಐಆರ್ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಫೈನಾನ್ಸ್ ಸಂಸ್ಥೆ ನಡೆಸುತ್ತಿದ್ದ ಎ.ವಿ.ಟಾಮಿ ದಂಪತಿ, ಅಧಿಕ ಬಡ್ಡಿ ಆಸೆ ತೋರಿಸಿ ನನ್ನನ್ನು ಸೇರಿದಂತೆ ಹಲವರಿಂದ ಠೇವಣಿ ಮತ್ತು ಚೀಟಿ ರೂಪದಲ್ಲಿ ಹಣ ಸಂಗ್ರಹಿಸಿದ್ದಾರೆ. ನಾನು ಹಾಗೂ ನನ್ನ ಕುಟುಂಬ ಈವರೆಗೆ ಸುಮಾರು ₹70 ಲಕ್ಷ ಹಣವನ್ನು ಅವರು ಸೂಚಿಸಿದ ಬ್ಯಾಂಕ್ ಖಾತೆಗಳಿಗೆ ಹಾಕಿದ್ದೇವೆ. ಇದೇ ರೀತಿ ಹಲವರು ಕೋಟ್ಯಂತರ ರೂಪಾಯಿ ಹಣವನ್ನು ಈ ಸಂಸ್ಥೆಗೆ ಕಟ್ಟಿದ್ದಾರೆ' ಎಂದು ಸ್ಯಾವಿಯೊ ದೂರಿನಲ್ಲಿ ತಿಳಿಸಿದ್ದಾರೆ.

'ಇತ್ತೀಚೆಗೆ ಕಚೇರಿ ಬಂದ್ ಆಗಿರುವುದು ಗಮನಕ್ಕೆ ಬಂತು. ಅಕ್ಕಪಕ್ಕದವರನ್ನು ವಿಚಾರಿಸಿದಾಗ ದಂಪತಿ ಬಗ್ಗೆ ಯಾವುದೇ ಮಾಹಿತಿ ಸಿಗಲಿಲ್ಲ. ಇಬ್ಬರ ಮೊಬೈಲ್‌ಗಳು ಸ್ವಿಚ್ಡ್ ಆಫ್ ಆಗಿವೆ. ಪರಾರಿಯಾಗಿರುವ ದಂಪತಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಪ್ರಾಥಮಿಕ ತನಿಖೆ ಪ್ರಕಾರ ಟಾಮಿ ದಂಪತಿ ಅಂದಾಜು ₹14 ಕೋಟಿಗೂ ಅಧಿಕ ಹಣ ವಂಚಿಸಿರುವ ಸಾಧ್ಯತೆಯಿದೆ. ಸದ್ಯ ಇಬ್ಬರೂ ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಪೊಲೀಸರು ಶೋಧ ಕಾರ್ಯ ಕೈಗೊಂಡಿದ್ದಾರೆ. ಆರೋಪಿಗಳು ನೂರಕ್ಕೂ ಹೆಚ್ಚು ಮಂದಿಗೆ ವಂಚಿಸಿರುವ ಕಾರಣ, ಈ ಪ್ರಕರಣದ ತನಿಖೆಯನ್ನು ಕೇಂದ್ರ ಅಪರಾಧ ವಿಭಾಗಕ್ಕೆ (ಸಿಸಿಬಿ) ವರ್ಗಾಯಿಸುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಹಗುರ ಮಳೆ ಸಾಧ್ಯತೆ

ಪ್ರೆಸ್ಟೀಜ್‌ನಿಂದ ಖಾಸಗಿ ಮೇಲ್ಸೇತುವೆ

ಬೆಳ್ಳಂದೂರಿನಲ್ಲಿ ಹೊರ ವರ್ತುಲ ರಸ್ತೆಯಿಂದ ಟೆಕ್ ಪಾರ್ಕ್‌ವರೆಗೆ ನಿರ್ಮಾಣ • ಬಿಬಿಎಂಪಿ ಅನುಮತಿ


• ನವೀನ್ ಮಿನೇಜಸ್

ಬೆಂಗಳೂರು: ಬೆಳ್ಳಂದೂರಿನಲ್ಲಿ ಹೊರವರ್ತುಲ ರಸ್ತೆಯಿಂದ ಟೆಕ್ ಪಾರ್ಕ್‌ವರೆಗೆ 1.5 ಕಿ.ಮೀ. ಉದ್ದದ ಖಾಸಗಿ ಮೇಲ್ಸೇತುವೆ ನಿರ್ಮಾಣ ಮಾಡಲು ಪ್ರೆಸ್ಟೀಜ್ ಗ್ರೂಪ್ ಮುಂದಾಗಿದೆ. ಅದಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯಿಂದ ಅನುಮತಿ ಪಡೆದಿದೆ.

ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಮತ್ತು ಮಳೆ ನೀರು ಚರಂಡಿಯ ಮೇಲ್ಭಾಗದಲ್ಲಿ ಮೇಲ್ಸೇತುವೆ ನಿರ್ಮಾಣಗೊಳ್ಳಲಿದೆ. ಇದಕ್ಕೆ ಪ್ರತಿಯಾಗಿ ಕರಿಯಮ್ಮನ ಅಗ್ರಹಾರ ರಸ್ತೆ ವಿಸ್ತರಣೆಯ ವೆಚ್ಚವನ್ನು ಪ್ರೆಸ್ಟೀಜ್ ಗ್ರೂಪ್ ಭರಿಸಲಿದೆ.

ತನ್ನ ಕ್ಯಾಂಪಸ್ ಪ್ರವೇಶವನ್ನು ಸುಲಭಗೊಳಿಸಲು ಸಾರ್ವಜನಿಕ ಜಮೀನಿನಲ್ಲಿ ಯೋಜನೆ ರೂಪಿಸಿದ ಕೆಲವೇ ಖಾಸಗಿ ಕಂಪನಿಗಳ ಗುಂಪಿಗೆ ಪ್ರೆಸ್ಟೀಜ್ ಸೇರಲಿದೆ. ಹಿಂದೆ, ಮಾನ್ಯತಾ ಎಂಬೆಸಿ ಬ್ಯುಸಿನೆಸ್ ಪಾರ್ಕ್, ಹೊರ ವರ್ತುಲ ರಸ್ತೆಯಲ್ಲಿರುವ ಎತ್ತರದ ರಸ್ತೆಗೆ ನೇರ ಪ್ರವೇಶವನ್ನು ಒದಗಿಸಲು ಮೇಲ್ಸೇತುವೆ ನಿರ್ಮಿಸಿತ್ತು.

ಮುಖ್ಯಾಂಶಗಳು
- 1.5 ಕಿ.ಮೀ ಉದ್ದದ ಖಾಸಗಿ ಮೇಲ್ಸೇತುವೆ ನಿರ್ಮಾಣಕ್ಕೆ ಯೋಜನೆ
- 5,000 ಉದ್ಯೋಗಿಗಳು ಕೆಲಸ ಮಾಡುತ್ತಿರುವ ಪ್ರೆಸ್ಟೀಜ್ ಟೆಕ್ ಪಾರ್ಕ್
- ಪ್ರತಿಯಾಗಿ ಬಿಬಿಎಂಪಿ ರಸ್ತೆ ಅಭಿವೃದ್ಧಿಗೂ ಹಣ ಒದಗಿಸಲಿರುವ ಕಂಪನಿ



ಲುಲು ಮಾಲ್, ಸಾರ್ವಜನಿಕ ರಸ್ತೆಯ ಒಂದು ಭಾಗದಲ್ಲಿ ಸ್ಕೈ ಸೇತುವೆಯನ್ನು ನಿರ್ಮಿಸಿತ್ತು. ಅದೇ ರೀತಿ, ಬಾಗ್ಮನೆ ಗ್ರೂಪ್ ದೊಡ್ಡನೆಕ್ಕುಂದಿಯಲ್ಲಿರುವ ತನ್ನ ಕ್ಯಾಂಪಸ್‌ಗೆ 600 ಮೀಟರ್ ಉದ್ದದ ಮೇಲ್ಸೇತುವೆ ನಿರ್ಮಿಸಲು ಪ್ರಸ್ತಾವ ಸಲ್ಲಿಸಿದೆ.

ಪ್ರೆಸ್ಟೀಜ್ ಗ್ರೂಪ್ ಈ ಹಿಂದೆ 2022ರ ಆಗಸ್ಟ್‌ನಲ್ಲಿ ಮತ್ತು 2023ರ ನವೆಂಬರ್‌ನಲ್ಲಿ ಬಿಬಿಎಂಪಿ ಮುಂದೆ ಪ್ರಸ್ತಾವ ಇಟ್ಟಿತ್ತು. ಆದರೆ, ಅನುಮತಿ ಸಿಕ್ಕಿರಲಿಲ್ಲ.

ಹಳೆ ಏರ್‌ಪೋರ್ಟ್ ರಸ್ತೆ ಮತ್ತು ಕರಿಯಮ್ಮನ ಅಗ್ರಹಾರ ರಸ್ತೆಗಳು, ಪ್ರಸ್ತಾವಿತ ಪ್ರೆಸ್ಟೀಜ್ ಬೀಟಾ ಟೆಕ್ ಪಾರ್ಕ್ ಅನ್ನು ಸಂಪರ್ಕಿಸುತ್ತವೆ. ಈ ಎರಡೂ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಿದೆ. ಜೊತೆಗೆ ಈ ಕ್ಯಾಂಪಸ್‌ನಲ್ಲಿ 5000ಕ್ಕೂ ಅಧಿಕ ಉದ್ಯೋಗಿಗಳು ಇರುವುದರಿಂದ ಈ ದಟ್ಟಣೆ ಇನ್ನಷ್ಟು ಹೆಚ್ಚಾಗಿದೆ. ಹಾಗಾಗಿ ಮೇಲ್ಸೇತುವೆ ನಿರ್ಮಿಸಲು ಅವಕಾಶ ನೀಡಬೇಕು. ಕರಿಯಮ್ಮನ ಅಗ್ರಹಾರ ರಸ್ತೆಯನ್ನು ಅಭಿವೃದ್ಧಿಪಡಿಸಿಕೊಡಲಾಗುವುದು ಎಂದು ಈ ಬಾರಿ ಪ್ರೆಸ್ಟೀಜ್ ಗ್ರೂಪ್ ಪ್ರಸ್ತಾವದಲ್ಲಿ ತಿಳಿಸಿತ್ತು.

ಈ ವರ್ಷದ ಏಪ್ರಿಲ್‌ನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದ ಒಪ್ಪಿಗೆ ಪಡೆಯಲಾಗಿತ್ತು. ನಂತರ ಬಿಬಿಎಂಪಿ ಒಪ್ಪಿಗೆ ನೀಡಿದೆ ಎಂದು ತಿಳಿದುಬಂದಿದೆ.

ಸಾರ್ವಜನಿಕರಿಗೂ ಅವಕಾಶವಿರಲಿ

ಬೆಳ್ಳಂದೂರಿನಲ್ಲಿ ಮೇಲ್ಸೇತುವೆ ನಿರ್ಮಿಸುತ್ತಿರುವುದು ಸುತ್ತಮುತ್ತಲಿನ ರಸ್ತೆಗಳಲ್ಲಿನ ವಾಹನ ದಟ್ಟಣೆ ಕಡಿಮೆ ಮಾಡಲು ಸಹಾಯ ಮಾಡುವ ಜೊತೆಗೆ, ಸಾರ್ವಜನಿಕರಿಗೂ ಪ್ರವೇಶಾವಕಾಶ ಕಲ್ಪಿಸಿದರೆ ಮಾತ್ರ ಉಪಯೋಗವಾಗಲಿದೆ. ಹಾಗಾಗಿ ಈ ರಸ್ತೆ ಸಾರ್ವಜನಿಕರಿಗೂ ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಮಹದೇವಪುರ ಕಾರ್ಯಪಡೆಯ ಸದಸ್ಯ ಕ್ಲೆಮೆಂಟ್ ಜಯಕುಮಾರ್ ಒತ್ತಾಯಿಸಿದರು.

ಪ್ರಸ್ತುತ ಯೋಜನೆ ಪ್ರಕಾರ, 'ಮೇಲ್ಸೇತುವೆ ಟೆಕ್ ಪಾರ್ಕ್ ಒಳಗೆ ಇಳಿಯಲಿದೆ. ಇದರಿಂದ ಅಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಮಾತ್ರ ಪ್ರಯೋಜನವಾಗಲಿದೆ. ಮೇಲ್ಸೇತುವೆಯನ್ನು ಟೆಕ್ ಪಾರ್ಕ್‌ಗೂ ಹಾಗೂ ಸಾರ್ವಜನಿಕರಿಗೂ ಉಪಯೋಗವಾಗುವಂತೆ ವಿನ್ಯಾಸಗೊಳಿಸಬೇಕು' ಎಂದು ಅವರು ಆಗ್ರಹಿಸಿದರು.

ಸಾಮಾನ್ಯವಾಗಿ ದೊಡ್ಡ ಟೆಕ್ ಪಾರ್ಕ್‌ಗಳಿಗೆ ಅನುಮೋದನೆ ನೀಡುವ ಮೊದಲು ಸರಾಗವಾಗಿ ಪ್ರವೇಶವನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಆದರೆ, ಬೆಳ್ಳಂದೂರಿನಲ್ಲಿ 70 ಎಕರೆ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಟೆಕ್ ಪಾರ್ಕ್‌ಗಾಗಿ ಕಟ್ಟಡ ನಕ್ಷೆಯನ್ನು ಬಿಬಿಎಂಪಿ ಒಂದು ವರ್ಷದ ಹಿಂದೆಯೇ ಮಂಜೂರು ಮಾಡಿತ್ತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸೆಪ್ಟೆಂಬರ್ 2023 ರಲ್ಲಿ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಿತ್ತು. ಈಗ ಮೇಲ್ಸೇತುವೆ ನಿರ್ಮಿಸಲು ಅನುಮೋದನೆ ನೀಡಲಾಗಿದೆ.

ಬಿಬಿಎಂಪಿಯಿಂದ ಅನುಮೋದನೆ ನೀಡಿರುವುದನ್ನು ಬೆಂಗಳೂರು ಸ್ಮಾರ್ಟ್ 'ಇನ್ಫ್ರಾಸ್ಟ್ರಕ್ಚರ್' ಲಿಮಿಟೆಡ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ದೃಢಪಡಿಸಿದ್ದಾರೆ. 40 ಅಡಿ ಅಗಲದ ರಸ್ತೆಯ ನಿರ್ಮಾಣಕ್ಕೂ ಹಣ ನೀಡುವಂತೆ ಬಿಬಿಎಂಪಿಯು ಡೆವಲಪರ್‌ಗೆ ಷರತ್ತು ವಿಧಿಸಿದೆ ಎಂದೂ ತಿಳಿಸಿದ್ದಾರೆ.

ಹೊಸ ರಸ್ತೆಯು ಸಕ್ರಾ ಆಸ್ಪತ್ರೆ ರಸ್ತೆಗೆ ಪ್ರಯಾಣದ ದೂರವನ್ನು 2.5 ಕಿ.ಮೀ. ಕಡಿಮೆ ಮಾಡಲಿದೆ. ನಗರ ಮೂಲಸೌಕರ್ಯವನ್ನು ಹೆಚ್ಚಿಸಲು ನಾಗರಿಕ ಸಂಸ್ಥೆಯು ಅಂತಹ ಸಾರ್ವಜನಿಕ-ಖಾಸಗಿ ಸಹಭಾಗಿತ್ವವನ್ನು ಪ್ರೋತ್ಸಾಹಿಸುತ್ತದೆ ಎಂದು ಮಾಹಿತಿ ನೀಡಿದ್ದಾರೆ.

'ಸಂವಿಧಾನ: ಜಾತ್ಯತೀತ, ಸಮಾಜವಾದ ಅಂತರ್ಗತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಬರೆದಿರುವ ಸಂವಿಧಾನದಲ್ಲಿಯೇ ಸಮಾಜವಾದ ಮತ್ತು ಜಾತ್ಯತೀತತೆ ಅಂತರ್ಗತವಾಗಿದೆ ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ತಿಳಿಸಿದರು.

ಡಾ. ಅಂಬೇಡ್ಕರ್ ವಿಚಾರ ವೇದಿಕೆ ಆಯೋಜಿಸಿದ್ದ 'ಧರ್ಮಾಂತರ ಏಕೆ ಅತ್ಯವಶ್ಯ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆರೆಸ್ಸೆಸ್‌ನವರು ಸಮಾಜವಾದ ಮತ್ತು ಜಾತ್ಯತೀತ ಪದವನ್ನು ಸಂವಿಧಾನದ ಪ್ರಸ್ತಾವನೆಯಿಂದ ತೆಗೆಯಬೇಕು ಎಂದು ಹೇಳುತ್ತಿದ್ದಾರೆ. ಸಂವಿಧಾನದ 27ನೇ ವಿಧಿಯಿಂದ ಹಿಡಿದು ರಾಜ್ಯ ನಿರ್ದೇಶಕ ತತ್ವದವರೆಗೆ ಎಲ್ಲ ಕಡೆ ಸಮಾನತೆ ಇದೆ. ಹಾಗಿದ್ದಾಗ ಸಮಾಜವಾದ ಪ್ರಸ್ತಾವನೆಯಲ್ಲಿ ಇದ್ದ ಮಾತ್ರಕ್ಕೆ ಯಾಕೆ ತೆಗೆಯಬೇಕು. ಸಂವಿಧಾನದಲ್ಲಿರುವ ಎಲ್ಲದರ ಸತ್ವವೇ ಸಮಾಜವಾದ ಎಂದು ಪ್ರತಿಪಾದಿಸಿದರು.

ತುರ್ತುಪರಿಸ್ಥಿತಿಯ ಅವಧಿಯಲ್ಲಿ ಜಾತ್ಯತೀತತೆ ಮತ್ತು ಸಮಾಜವಾದವನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಿ ಪ್ರಧಾನಿ ಇಂದಿರಾ ಗಾಂಧಿ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅದಕ್ಕೆ ಮೆಚ್ಚುಗೆ ವ್ಯಕ್ತಪಡಿಸಬೇಕು ಎಂದರು.

ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಕಾಲದಲ್ಲಿ ಭಾರತದಲ್ಲಿ ಜಾತಿ ವ್ಯವಸ್ಥೆ ಹೇಗಿತ್ತೋ ಇಂದಿಗೂ ಹಾಗೆಯೇ ಇದೆ. ಏನೂ ಬದಲಾಗಿಲ್ಲ. ಈಗಲೂ ಕೂಡ ದಲಿತರಿಗೆ ಕ್ಷೌರ ಮಾಡುವುದಿಲ್ಲ. ದೇವಸ್ಥಾನ ಪ್ರವೇಶ ಮಾಡಲು ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿಯ ಪ್ರದಾನ ಸಂಚಾಲಕ ಮಾವಳ್ಳಿ ಶಂಕರ್, ಕವಿ ಸುಬ್ಬು ಹೊಲೆಯಾರ್, ಲೇಖಕ ಮಂಗ್ಳೂರು ವಿಜಯ, ಅಂಬೇಡ್ಕರ್ ವಿಚಾರ ವೇದಿಕೆಯ ಅಧ್ಯಕ್ಷ ಟಿ.ಗಜೇಂದ್ರ, ಅಶ್ವಿನಿ ಬೋಧ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ


ಅಕ್ಕಿ ಬೇಡ ಎಂದು ಹೇಳಿ, ರಸ್ತೆ ಮಾಡಿಸಿ ಕೊಡ್ತೀನಿ: ರಾಯರಡ್ಡಿ

ಕೊಪ್ಪಳ: 'ಅಕ್ಕಿ ಬೇಡ, ಏನೂ ಬೇಡ ಎಂದು ನೀವು ಹೇಳಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ಕೊಟ್ಟು ಬಿಡುವೆ. ಅದೇ ಹಣದಲ್ಲಿ ನಿಮ್ಮೂರಿಗೆ ರಸ್ತೆ ಮಾಡಿಸಿಕೊಡುವೆ' ಎಂದು ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಕುಕನೂರು ತಾಲ್ಲೂಕಿನ ರ‍್ಯಾವಣಕಿ ಗ್ರಾಮದಲ್ಲಿ ಶನಿವಾರ ನಡೆದ ಸರ್ಕಾರಿ ಶಾಲೆಯ ಕಾರ್ಯಕ್ರಮದಲ್ಲಿ ಮಾತನಾಡಿ ಗ್ರಾಮಸ್ಥರನ್ನು ಉದ್ದೇಶಿಸಿ 'ನಮ್ಮ ಜನ ಅಕ್ಕಿ ಬೇಡ ಎನ್ನಿದ್ದಾರೆ ಎಂದು ಸಿ.ಎಂ.ಗೆ ಹೇಳಲೇ' ಎಂದು ಪ್ರಶ್ನಿಸಿದರು. ಅದಕ್ಕೆ ಜನರು ಬೇಡ ಎಂದರು.

'ರಾಜ್ಯ ಸರ್ಕಾರದಿಂದ 1.24 ಕೋಟಿ ಮಹಿಳೆಯರಿಗೆ ತಲಾ ₹2000 ಕೊಡಲಾಗುತ್ತಿದೆ. ಇದಕ್ಕಾಗಿಯೇ ವಾರ್ಷಿಕ ₹30 ಸಾವಿರ ಕೋಟಿ ಖರ್ಚಾಗುತ್ತಿದೆ' ಎಂದು ಹೇಳಿಕೆ ನೀಡಿದ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವ್ಯಕ್ತಿಯೊಬ್ಬರು ಇದಕ್ಕೆ ಪ್ರತಿಕ್ರಿಯಿಸಿ, 'ಮಹಿಳೆಯರಿಗೆ ಮಾಸಿಕ ₹2000 ಕೊಡುತ್ತಿದ್ದೀರಿ. ನಮಗೆ ಹೊಲಕ್ಕೆ ಹೋಗಲು ಮೊದಲು ದಾರಿ ಮಾಡಿಕೊಡಿ' ಎಂದರು.

ಹೇಳಿಕೆ: ತಮ್ಮ ಹೇಳಿಕೆ ಬಗ್ಗೆ ಭಾನುವಾರ ಕೊಪ್ಪಳದಲ್ಲಿ ಪ್ರತಿಕ್ರಿಯೆ ನೀಡಿದ ರಾಯರಡ್ಡಿ ಅವರು 'ನಾನು ಆ ರೀತಿಯ ಹೇಳಿಕೆ ನೀಡಿಯೇ ಇಲ್ಲ. ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಒಂದಷ್ಟು ಕೆಲಸಗಳನ್ನು ಮಾಡಿಸಿಕೊಡಿ ಎಂದು ಬೇಡಿಕೆ ಇಟ್ಟಿದ್ದರು. ಅಕ್ಕಿಯನ್ನೂ ಕೊಟ್ಟಿದ್ದೇವೆ. ಅಭಿವೃದ್ಧಿ ಕೆಲಸವನ್ನೂ ಮಾಡಿ ಕೊಡುತ್ತೇನೆ ಎಂದು ಪ್ರತಿಕ್ರಿಯಿಸಿದ್ದೇನೆ' ಎಂದರು.



ಉಸ್ತುವಾರಿಯಿಂದ ಮತ್ತೆ ಅಭಿಪ್ರಾಯ ಸಂಗ್ರಹ ಇಂದಿನಿಂದ

ಬೆಂಗಳೂರು: ಪಕ್ಷ ಸಂಘಟನೆ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಬಿಡುಗಡೆ ಕುರಿತಂತೆ ಸೋಮವಾರದಿಂದ (ಜುಲೈ 7) ಮೂರು ದಿನ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಪಕ್ಷದ ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಲಿದ್ದಾರೆ.

ಈ ಬಾರಿ ಸುರ್ಜೇವಾಲಾ ಅವರು ಒಟ್ಟು 61 ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಈ ಅವಧಿಯಲ್ಲಿ ಕಲಬುರಗಿ, ಬೆಳಗಾವಿ, ರಾಯಚೂರು, ಯಾದಗಿರಿ, ಕೊಪ್ಪಳ, ದಾವಣಗೆರೆ, ಚಿತ್ರದುರ್ಗ, ಉತ್ತರ ಕನ್ನಡ, ತುಮಕೂರು ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳ ಶಾಸಕರೊಂದಿಗೆ ಅವರು ಸಭೆ ನಡೆಸಲಿದ್ದಾರೆ.

ಕಳೆದ ಎರಡು ವರ್ಷದಲ್ಲಿ ತಮ್ಮ ಕ್ಷೇತ್ರದಲ್ಲಿ ಮಾಡಿರುವ ಸಾಧನೆ, ಭವಿಷ್ಯದ ಯೋಜನೆಗಳು, ಕ್ಷೇತ್ರದಲ್ಲಿ ಕೆಲಸ ಮಾಡಲು ಉಂಟಾಗುತ್ತಿರುವ ಅಡ್ಡಿಗಳು, ಸರ್ಕಾರ ಹಾಗೂ ಉಸ್ತುವಾರಿ ಸಚಿವರ ಸ್ಪಂದನೆ, ಅಧಿಕಾರಿಗಳ ಸಹಕಾರದ ಬಗ್ಗೆ ಸಿದ್ಧ ಪ್ರಶ್ನಾವಳಿ ಮೂಲಕ ಸುರ್ಜೇವಾಲಾ ಅವರು ಮಾಹಿತಿ ಸಂಗ್ರಹಿಸಲಿದ್ದಾರೆ.

ಸರ್ಕಾರದ ಆಡಳಿತ ವೈಫಲ್ಯದ ಬಗ್ಗೆ ಶಾಸಕರಾದ ಬಿ.ಆರ್. ಪಾಟೀಲ ಮತ್ತು ರಾಜು ಕಾಗೆ ಅವರು ಬಹಿರಂಗವಾಗಿ ಆರೋಪ ಮಾಡಿದ ಬೆನ್ನಲ್ಲೇ ಹಲವು ಶಾಸಕರು ಅನುದಾನ ಕೊರತೆ, ಸಚಿವರ ಅಸಹಕಾರ, ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಅಸಮಾಧಾನ ತೋಡಿಕೊಂಡಿದ್ದರು. ಈ ಕಾರಣಕ್ಕೆ ರಾಜ್ಯಕ್ಕೆ ಬಂದಿದ್ದ ಸುರ್ಜೇವಾಲಾ ಜೂನ್ 30ರಿಂದ ಮೂರು ದಿನ 42 ಶಾಸಕರೊಂದಿಗೆ ಸಭೆ ನಡೆಸಿದ್ದರು.

ಬಹುರೂಪಿ ಫೌಂಡೇಷನ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಟ ಪ್ರಕಾಶ್ ರಾಜ್ ಅಭಿಮತ

'ಶಾಲಾ ಹಂತದಲ್ಲಿಯೇ ರಂಗ ಶಿಕ್ಷಣ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗ ಶಿಕ್ಷಣದಿಂದ ಮಕ್ಕಳಲ್ಲಿ ಸೃಜನಶೀಲತೆ ಅನಾವರಣವಾಗುವ ಜತೆಗೆ ಬೌದ್ಧಿಕ ಸಾಮರ್ಥ್ಯ ವಿಕಾಸವಾಗುತ್ತದೆ. ಆದ್ದರಿಂದ ಶಾಲಾ ಹಂತದಲ್ಲಿಯೇ ಈ ಶಿಕ್ಷಣ ನೀಡುವುದು ಉತ್ತಮ' ಎಂದು ನಟ ಪ್ರಕಾಶ್ ರಾಜ್ ಅಭಿಪ್ರಾಯಪಟ್ಟರು.

ಬಹುರೂಪಿ ಫೌಂಡೇಷನ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಮಕ್ಕಳ ಲೋಕಕ್ಕೆ 14 ಪುಸ್ತಕಗಳ ಅರ್ಪಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಮಕ್ಕಳು ಸಮಾಜದ ಒಂದು ಅಂಗವೆಂದು ನಾವು ಪರಿಗಣಿಸುತ್ತಿಲ್ಲ. ಮಕ್ಕಳ ಗ್ರಹಿಕೆ, ಕನಸು, ಗಮನಿಸುವ ರೀತಿಗಳನ್ನು ಅರ್ಥ ಮಾಡಿಕೊಂಡರೆ, ಮನುಕುಲದ ವಿಕಾಸ ಸಹಜವಾಗಿ ಆಗುತ್ತದೆ. ಅವರನ್ನು ಸ್ವಂತವಾಗಿ ಬೆಳೆಯಲು ಬಿಡಬೇಕು. ಅವರ ಕೂತುಹಲಗಳಿಗೆ ಬೆಲೆ ನೀಡಬೇಕು' ಎಂದು ಹೇಳಿದರು.

'ಪ್ರಕೃತಿಯಲ್ಲಿ ಮಕ್ಕಳನ್ನು ಬೆಳೆಸುತ್ತೇವೆ ಎನ್ನುವುದು ಅಹಂಕಾರ, ಬೆಳೆಯಲು ಬಿಡುತ್ತೇವೆ ಎನ್ನುವುದು ವಿನಯ. ಇದು ಸ್ನೇಹ, ದಾಂಪತ್ಯ ಸೇರಿ ಎಲ್ಲ ಸಂಬಂಧಗಳಿಗೂ ಅನ್ವಯಿಸುತ್ತದೆ. ಮಕ್ಕಳಿಗೆ ಈಗ ನಾವು ಕಲಿಸುವ ವಿಚಾರದ ಪ್ರಸ್ತುತತೆ ಹತ್ತು ವರ್ಷದ ಬಳಿಕ ಹೇಗಿರುತ್ತದೆ ಎಂಬುದನ್ನು ಯೋಚಿಸಬೇಕಿದೆ. ಇವತ್ತಿನ ಶಿಕ್ಷಣ, ಟ್ಯೂಷನ್ ಮಕ್ಕಳಲ್ಲಿ ಆತ್ಮಹತ್ಯೆ ಯಂತಹ ಯೋಚನೆ ಹುಟ್ಟಿಸುತ್ತದೆ. ಸಾಹಿತ್ಯ, ರಂಗಭೂಮಿ, ಸಿನಿಮಾ ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು' ಎಂದರು.

ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ ನೆಲ್ಲುಕುಂಟೆ ವೆಂಕಟೇಶಯ್ಯ, 'ಮಕ್ಕಳ ವಿಕಾಸಕ್ಕೆ ಬೇಕಾದ ವಾತಾವರಣ ಸಮಾಜದಲ್ಲಿ ಇಲ್ಲ. ಕಳೆದ ಹತ್ತು ಹದಿನೈದು ವರ್ಷಗಳಲ್ಲಿನ ಜಾಗತಿಕ ಬೆಳವಣಿಗೆ ಮಕ್ಕಳ ಮನಸ್ಸನ್ನು ಕೆಡಿಸಿದೆ. ಹೀಗಾಗಿ, ಅವರನ್ನು ಅರ್ಥೈಸಿಕೊಳ್ಳಲು ಮಕ್ಕಳ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿದೆ. ಮಹಿಳಾ ಹಕ್ಕುಗಳ ಬಗ್ಗೆ ನಡೆದಷ್ಟು ಹೋರಾಟ ಮಕ್ಕಳ ಹಕ್ಕುಗಳ ಬಗ್ಗೆ ನಡೆದಿಲ್ಲ' ಎಂದರು.

ಬಹುರೂಪಿ ಸಂಸ್ಥಾಪಕ ಜಿ.ಎನ್. ಮೋಹನ್, 'ಮಕ್ಕಳ ಸಾಹಿತ್ಯ ಪುಸ್ತಕಗಳ ಆಕಾರ, ಅದರಲ್ಲಿನ ಕ್ರಿಯಾಶೀಲತೆಯನ್ನು ಕಾನೂನು ಉಲ್ಲಂಘನೆ ಎಂದು ಗ್ರಂಥಾಲಯಗಳು ಭಾವಿಸುತ್ತಿವೆ. ಇಂಥ ಕ್ಷುಲ್ಲಕ ವಿಚಾರಕ್ಕೆ ಪುಸ್ತಕಗಳನ್ನೇ ಕೊಳ್ಳುವುದಿಲ್ಲ. ಇದು ಬದಲಾಗದಿದ್ದಲ್ಲಿ ಮಕ್ಕಳಲ್ಲಿ ಓದಿನ ಅಭಿರುಚಿ ಬೆಳೆಯುವುದು ಹೇಗೆ' ಎಂದು ಪ್ರಶ್ನಿಸಿದರು.



ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಲಕ್ಷ್ಮಿ ಕರುಣಾಕರನ್, ನೆಲ್ಲುಕುಂಟೆ ವೆಂಕಟೇಶಯ್ಯ, ಪ್ರಕಾಶ್ ರಾಜ್ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ಸಮಾನತೆ ಸೂಚ್ಯಂಕ: 4ನೇ ಸ್ಥಾನ

ನವದೆಹಲಿ (ಪಿಟಿಐ): 2011–12ರಿಂದ 2022–23ರ ನಡುವಿನ ಅವಧಿಯಲ್ಲಿ ಭಾರತದಲ್ಲಿ ಅಸಮಾನತೆಯು ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿದ್ದು, ಭಾರತವು ಈಗ ವಿಶ್ವದಲ್ಲಿ 'ಸಮಾನತೆಯು ಹೆಚ್ಚು ಇರುವ ರಾಷ್ಟ್ರಗಳ ಪಟ್ಟಿಯಲ್ಲಿ ನಾಲ್ಕನೆಯ ಸ್ಥಾನ ಪಡೆದಿದೆ' ಎಂದು ವಿಶ್ವ ಬ್ಯಾಂಕ್‌ನ ವರದಿಯೊಂದು ಹೇಳಿದೆ.

ಒಂದು ದಶಕದ ಅವಧಿಯಲ್ಲಿ ಕೈಗೊಂಡ ಹಲವು ಕ್ರಮಗಳು ಹಾಗೂ ಯೋಜನೆಗಳ ಪರಿಣಾಮವಾಗಿ ಅಸಮಾನತೆಯು ಕಡಿಮೆ ಆಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಸಮಾನತೆಯ ಸೂಚ್ಯಂಕದಲ್ಲಿ ಭಾರತಕ್ಕಿಂತ ಉತ್ತಮ ಸ್ಥಾನದಲ್ಲಿ ಇರುವ ಮೂರು ರಾಷ್ಟ್ರಗಳೆಂದರೆ ಸ್ಲೋವಾಕ್ ಗಣರಾಜ್ಯ, ಸ್ಲೊವೇನಿಯಾ ಮತ್ತು ಬೆಲಾರುಸ್. ಚೀನಾ, ಅಮೆರಿಕ ಮತ್ತು ಬ್ರಿಟನ್‌ಗಿಂತ ಭಾರತದ ಸ್ಥಿತಿ ಉತ್ತಮವಾಗಿದೆ.

'ಭಾರತವು ಸೂಚ್ಯಂಕದಲ್ಲಿ 25.5 ಅಂಕ ಗಳಿಸಿದೆ. ವಿಶ್ವದಲ್ಲಿ ಅತ್ಯಂತ ಹೆಚ್ಚು ಸಮಾನತೆ ಇರುವ ನಾಲ್ಕನೆಯ ದೇಶವಾಗಿದೆ' ಎಂದು ವಿಶ್ವ ಬ್ಯಾಂಕ್ ವರದಿ ಉಲ್ಲೇಖಿಸಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಸೂಚ್ಯಂಕದಲ್ಲಿ ಚೀನಾ 35.7 ಅಂಕ, ಅಮೆರಿಕ 41.8 ಅಂಕ ಪಡೆದಿವೆ.

ಬೆಟ್ಟಹಲಸೂರು ಕ್ರಾಸ್, ಚಿಕ್ಕಜಾಲ: ಮೆಟ್ರೊ ನಿಲ್ದಾಣಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹಾದು ಹೋಗುವ ನಮ್ಮ ಮೆಟ್ರೊ ನೀಲಿ ಮಾರ್ಗದಲ್ಲಿ ಬೆಟ್ಟಹಲಸೂರು ಕ್ರಾಸ್, ಚಿಕ್ಕಜಾಲದಲ್ಲಿ ಮೆಟ್ರೊ ನಿಲ್ದಾಣ ನಿರ್ಮಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ಮೆಟ್ರೊ ನಿಲ್ದಾಣ ನಿರ್ಮಾಣಕ್ಕಾಗಿ ಹೋರಾಟ ನಡೆಸುವ ಕುರಿತು ಹುಣಸಮಾರನಹಳ್ಳಿ ಬಳಿ ಸುತ್ತಮುತ್ತಲ ಗ್ರಾಮಸ್ಥರು ಸಭೆ ನಡೆಸಿದರು.


ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಎಚ್.ಸಿ.ತಮ್ಮೇಶ್ ಗೌಡ ಮಾತನಾಡಿ, 'ಬೆಂಗಳೂರು ವಿಮಾನ ನಿಲ್ದಾಣಕ್ಕೆ ತೆರಳುವ ಪ್ರಮುಖ ರಸ್ತೆ ಇದಾಗಿದ್ದು, ಸುತ್ತಮುತ್ತ 40 ಗ್ರಾಮಗಳಿವೆ. ಒಂದೂವರೆ ಲಕ್ಷ ಜನರು ಇಲ್ಲಿ ವಾಸಿಸುತ್ತಿದ್ದಾರೆ. ಹಾಗಾಗಿ ಈ ಭಾಗದಲ್ಲಿ ಮೆಟ್ರೊ ನಿಲ್ದಾಣ ಸ್ಥಾಪನೆ ಅತ್ಯವಶ್ಯಕ' ಎಂದರು.

'ಬೆಟ್ಟಹಲಸೂರು ಕ್ರಾಸ್‌ನಲ್ಲಿ ಮೆಟ್ರೊ ನಿಲ್ದಾಣ ನಿರ್ಮಿಸಲು ಬಿಎಂಆರ್‌ಸಿಎಲ್ ಸಿದ್ಧತೆ ಮಾಡಿಕೊಂಡಿತ್ತು. ಅದಕ್ಕಾಗಿ ರೈತರ ಜಮೀನನ್ನೂ ಸ್ವಾಧೀನಪಡಿಸಿಕೊಂಡಿತ್ತು. ಈಗ ದಿಢೀರ್ ಆಗಿ ಮೆಟ್ರೊ ನಿಲ್ದಾಣ ನಿರ್ಮಾಣವನ್ನು ಕೈಬಿಟ್ಟಿದೆ. ಇದರ ಹಿಂದೆ ಯಾವ ಕಾಣದ ಕೈಗಳು ಕೆಲಸ ಮಾಡಿವೆ ಎಂಬುದು ಬಹಿರಂಗವಾಗಬೇಕು' ಎಂದು ಆಗ್ರಹಿಸಿದರು.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಜುಲೈ 11ರಿಂದ ಪತ್ರ ಚಳವಳಿ ಆರಂಭಿಸಲಾಗುವುದು. ಒಂದು ವಾರದ ಒಳಗೆ ಪ್ರತಿಕ್ರಿಯೆ ಬಾರದಿದ್ದರೆ ಜುಲೈ 18ರಿಂದು ಹೆದ್ದಾರಿ ತಡೆ, ಸಚಿವರ ಮನೆಗೆ ಮುತ್ತಿಗೆ ಹಾಕಲಾಗುವುದು ಎಂದರು.

ಬ್ಯಾಟರಾಯನಪುರ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ದೊಡ್ಡಜಾಲ ಹನುಮಂತುಗೌಡ, ಕ.ರ.ವೇ. ರಾಜ್ಯ ಕಾರ್ಯದರ್ಶಿ ಸಾತನೂರು ಸುರೇಶ್ ಗೌಡ, ದಲಿತ ರೈತ ಸಂಘದ ರಾಜ್ಯಾಧ್ಯಕ್ಷ ಎಸ್.ಪಿ. ಮುನಿಯಪ್ಪ, ಮರಳುಕುಂಟೆ ನಾರಾಯಣಸ್ವಾಮಿ, ಹುಣಸಮಾರನಹಳ್ಳಿ ರಾಮು, ಹಸಿರೇ ಉಸಿರು ಸಂಘಟನೆಯ ಬೆಟ್ಟಹಲಸೂರು ಶ್ರೀನಿವಾಸಮೂರ್ತಿ, ಆಚಾರ್ಯ ಬಡಾವಣೆ ನಿವಾಸಿಗಳ ಸಂಘದ ಶರಣ ಪ್ರಕಾಶ್, ಎಂ.ವಿ. ಸೋಲರ್‌ರೈಸರ್‌ನ ದರ್ಶನ್, ಬೆಟ್ಟಹಲಸೂರು ಪ್ರಶಾಂತ್, ಪಿ.ಜಿ. ಓನರ್ಸ್ ಅಸೋಸಿಯೇಷನ್‌ನ ಮಹೇಶ್, ವಿದ್ಯಾಸಾಗರ್ ವೆಲ್ಫೇರ್ ಅಸೋಸಿಯೇಷನ್‌ನ ಕಿರಣ್, ಎಸ್.ಎಂ.ಆರ್. ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘದ ಕಿರಣ್, ಮಹಾವೀರ ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘದ ಪ್ರಸನ್ನ ಭಾಗವಹಿಸಿದ್ದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256



'ತುಕ್ಕು ಹಿಡಿದ ಕಬ್ಬಿಣದ ಕಂಬಗಳು'

ಕೊಡಿಗೆಹಳ್ಳಿ ಮುಖ್ಯ ರಸ್ತೆಯಲ್ಲಿರುವ ಮಾರುತಿನಗರ ಬಸ್ ನಿಲ್ದಾಣದ ಕಬ್ಬಿಣದ ಕಂಬಗಳು ತುಕ್ಕು ಹಿಡಿದಿವೆ. ಇದರಿಂದಾಗಿ ಭಯದಲ್ಲಿಯೇ ಈ ನಿಲ್ದಾಣದಲ್ಲಿ ಕುಳಿತುಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಮಳೆ ಬಂದಾಗ ಬಸ್ ನಿಲ್ದಾಣದಲ್ಲಿ ರಕ್ಷಣೆ ಪಡೆಯುವುದು ಅನಿವಾರ್ಯ. ಆದರೆ, ಎರಡೂ ಕಡೆ ಆಧಾರವಾಗಿರುವ ಕಂಬಗಳು ಬೀಳುವ ಸ್ಥಿತಿಯಲ್ಲಿವೆ. ಅನಾಹುತವಾಗುವ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು. ಕಂಬಗಳನ್ನು ಬದಲಾಯಿಸಲು ಕೂಡಲೇ ಕ್ರಮವಹಿಸಬೇಕು.

ಕಾ.ನಾ.ದೇವರಾಜು, ಸಹಕಾರನಗರ

'ರಸ್ತೆಯುದ್ದಕ್ಕೂ ಗುಂಡಿಗಳು'

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಜ್ಞಾನ ಭಾರತಿ ವಾರ್ಡ್‌ನ ಮಲ್ಲತ್ತಹಳ್ಳಿ ಕೆರೆ ರಸ್ತೆಯು ಗುಂಡಿಗಳಿಂದ ಕೂಡಿದೆ. ರಸ್ತೆಗೆ ಹಾಕಿದ್ದ ಡಾಂಬರು ಕಿತ್ತು ಹೋಗಿದ್ದು, ವಾಹನ ಸವಾರರು ಸಂಚರಿಸುವುದು ಕಷ್ಟವಾಗಿದೆ. ಮಾರುದ್ದದ ಗುಂಡಿಗಳು ಅಲ್ಲಲ್ಲಿ ಕಂಡು ಬರುತ್ತವೆ. ಇಲ್ಲಿನ ಸಂಚಾರ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಭಯದಲ್ಲೇ ಸಂಚರಿಸಬೇಕಾದ ದುಃಸ್ಥಿತಿ ಇದೆ. ಹಲವು ತಿಂಗಳಿಂದ ರಸ್ತೆ ಹಾಳಾಗಿದ್ದರೂ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಆದಷ್ಟು ಬೇಗ ರಸ್ತೆ ದುರಸ್ತಿ ಮಾಡಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.



ಟಿ.ತುಕಾರಾಮ್, ರಾಜರಾಜೇಶ್ವರಿನಗರ

'ರಸ್ತೆಯಲ್ಲೇ ಜಲ್ಲಿ ರಾಶಿ'



ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಎಂ.ಸಿ. ಲೇಔಟ್‌ನ ವಿಜಯನಗರ ಬಡಾವಣೆಯ ಒಂದನೇ ಮುಖ್ಯ ರಸ್ತೆಯಲ್ಲಿ ಜಲ್ಲಿ ರಾಶಿ ಹಾಕಲಾಗಿದೆ. ಈ ರಸ್ತೆಯಲ್ಲಿರುವ ನಿಸರ್ಗ ಹೆಣ್ಣುಮಕ್ಕಳ ವಸತಿ ನಿಲಯದ ಮುಂದೆ ಈ ಜಲ್ಲಿ ರಾಶಿ ಇದ್ದು, ವಾಹನ ಸವಾರರು ಹಾಗೂ ಪಾದಚಾರಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಹಲವು ದಿನಗಳಿಂದ ಈ ಜಲ್ಲಿ ರಾಶಿ ಹಾಗೇ ಉಳಿದಿದ್ದು, ಕಾಮಗಾರಿಯನ್ನು ಎಲ್ಲಿ ಮಾಡುತ್ತಿದ್ದಾರೆ ಎಂಬುದು ತಿಳಿಯದಾಗಿದೆ. ಜಲ್ಲಿ ಇಡೀ ರಸ್ತೆಯನ್ನು ಆವರಿಸಿಕೊಂಡಿದೆ. ಸಂಬಂಧಪಟ್ಟವರು ಈ ಬಗ್ಗೆ ಗಮನಿಸಿ, ಜಲ್ಲಿ ರಾಶಿ ತೆರವಿಗೆ ಕ್ರಮವಹಿಸಬೇಕು.

ಕುಮಾರಸ್ವಾಮಿ ಕೆ.ಎಸ್. ವಿಜಯನಗರ



'ಅರ್ಧಕ್ಕೆ ನಿಂತ ಒಳಚರಂಡಿ ಕಾಮಗಾರಿ'

ಕೊಡಿಗೆಹಳ್ಳಿ ಪ್ರದೇಶಕ್ಕೆ ಹೊಂದಿಕೊಂಡಿರುವ ಟಾಟಾ ನಗರದ 3ನೇ ಕ್ರಾಸ್‌ನಲ್ಲಿ ಒಳಚರಂಡಿಯ ಹೂಳೆತ್ತುವ ಕಾಮಗಾರಿ ಅರ್ಧಕ್ಕೆ ನಿಂತಿದೆ. ಚರಂಡಿ ಮೇಲಿನ ಸಿಮೆಂಟ್ ಹಾಸನ್ನು ಕಿತ್ತು, ಎಲ್ಲೆಂದರಲ್ಲಿ ಹಾಕಲಾಗಿದೆ. ಚರಂಡಿಯಲ್ಲಿದ್ದ ಕಸಕಡ್ಡಿ ಹಾಗೂ ಮಣ್ಣಿನ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಿಲ್ಲ. ನಾಲ್ಕೈದು ತಿಂಗಳಾದರೂ ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸಿಲ್ಲ. ಪಕ್ಕದಲ್ಲಿಯೇ ದೇವಸ್ಥಾನ ಹಾಗೂ ಉಪನೋಂದಣಾಧಿಕಾರಿ ಕಚೇರಿ ಇದೆ. ಇದರಿಂದಾಗಿ ಇಲ್ಲಿ ವಾಹನ ಸಂಚಾರ ದಟ್ಟಣೆ ಹಾಗೂ ಜನಜಂಗುಳಿಯೂ ಇರಲಿದೆ. ಕಾಮಗಾರಿ ಪೂರ್ಣಗೊಳಿಸದಿರುವುದರ ಬಗ್ಗೆ ಹಲವು ಬಾರಿ ಬಿಬಿಎಂಪಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳದಿರುವುದು ವಿಷಾದನೀಯ. ಪ್ರತಿನಿತ್ಯ ವಾಹನ ಸವಾರರು ಹಾಗೂ ಪಾದಚಾರಿಗಳು ಸಮಸ್ಯೆ ಎದುರಿಸುತ್ತಿದ್ದು, ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸಬೇಕು.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ

'ಬಸ್ ತಂಗುದಾಣ ದುರಸ್ತಿ ಮಾಡಿ'

ಕೆಂಗೇರಿ ಸ್ಯಾಟಲೈಟ್ ಟೌನ್‌ನ 1ನೇ ಮುಖ್ಯ ರಸ್ತೆಯಲ್ಲಿದ್ದ ಬಸ್ ತಂಗುದಾಣ ಸಂಪೂರ್ಣ ಹಾಳಾಗಿದೆ. ಇಲ್ಲಿ ಕುಳಿತುಕೊಳ್ಳಲು ಆಸನ ವ್ಯವಸ್ಥೆ, ಚಾವಣಿಯಿಲ್ಲ. ಇದರಿಂದ ಬಸ್ ತಂಗುದಾಣ ನಿಷ್ಪ್ರಯೋಜಕವಾಗಿದೆ. ಮಳೆ ಬಂದಲ್ಲಿ ರಕ್ಷಣೆ ಪಡೆಯಲು ಸಹ ಇಲ್ಲಿ ಸ್ಥಳಾವಕಾಶವಿಲ್ಲ. ಪಾದಚಾರಿ ಮಾರ್ಗ ಕೂಡ ಕಿತ್ತು ಹೋಗಿದ್ದು, ಇಲ್ಲಿ ಓಡಾಡುವುದು ಕಷ್ಟ. ಬಸ್ ತಂಗುದಾಣ ಇರುವ ಸ್ಥಳದ ಬಳಿಯೇ ಕಸವನ್ನು ಎಸೆಯಲಾಗುತ್ತಿದ್ದು, ದಿನದಿಂದ ದಿನಕ್ಕೆ ಕಸದ ರಾಶಿ ಬೆಳೆಯುತ್ತಿದೆ. ಆದ್ದರಿಂದ ಬಸ್ ತಂಗುದಾಣವನ್ನು ರಿಪೇರಿ ಮಾಡಿ, ಅಲ್ಲಿರುವ ಕಸವನ್ನು ವಿಲೇವಾರಿ ಮಾಡಬೇಕು.


ಬಿ.ಎಂ. ಪ್ರಕಾಶ್, ಸ್ಥಳೀಯ ನಿವಾಸಿ




ನಗರದಲ್ಲಿ ಇಂದು

ಪದವಿ ವಿಭಾಗದ ಉದ್ಘಾಟನೆ: ಅತಿಥಿ: ಶೋಭಾ, ಉಪಸ್ಥಿತಿ: ದೇವರಾಜ್, ಸುಜಾತ ದೇವರಾಜ್, ಲಕ್ಷ್ಮೀಶ್ ಹೆಗಡೆ, ಆಯೋಜನೆ ಮತ್ತು ಸ್ಥಳ: ರಾಯಲ್ ಪದವಿ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 10

ರಾಷ್ಟ್ರೀಯ ರೈತ ಸಮಾವೇಶ: ಉದ್ಘಾಟನೆ: ಜಗಜಿತ್ ಸಿಂಗ್ ದಲ್ಲೆವಾಲ, ಅಧ್ಯಕ್ಷತೆ: ಕುರುಬೂರು ಶಾಂತಕುಮಾರ್, ಉಪಸ್ಥಿತಿ: ಅಭಿಮನ್ಯು ಕೊಹರ್, ಹರ್‌ಪಾಲ್ ಚೌಧರಿ, ಸತನಾಮ್ ಸಿಂಗ್ ಬೇಹು, ಬಿ.ಆರ್. ಪಾಂಡ್ಯನ್, ವೆಂಕಟೇಶ್ವರ ರಾವ್, ಆಯೋಜನೆ: ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ), ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11



'ವಾರ್ಷಿಕ ಕಾರ್ಯಕ್ರಮಗಳ ಯೋಜನೆ' ಪುಸ್ತಕ ಬಿಡುಗಡೆ: ಪಿ.ಜಿ. ಆರ್. ಸಿಂಧ್ಯ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಸ್ಥಳ: ಪ್ರೆಸ್ ಕ್ಲಬ್ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30



'ನೈಸರ್ಗಿಕ ವಿಕೋಪ ಮತ್ತು ಮಾನವೀಯ ನಡೆ' ವಿಷಯದ ಬಗ್ಗೆ ಉಪನ್ಯಾಸ: ಸಾನ್ನಿಧ್ಯ: ತಿಪ್ಪೇರುದ್ರ ಸ್ವಾಮೀಜಿ, ಮುಖ್ಯ ಅತಿಥಿ: ಕುಸುಮಾ ಸಿ.ಆರ್., ಪ್ರಾಸ್ತಾವಿಕ ನುಡಿ: ಅರುಣಕುಮಾರ್ ಡಿ.ಟಿ., ಗೌರವ ಸಮರ್ಪಣೆ: ಸಿದ್ದಣ್ಣ ಆರ್. ಪಲ್ಲೇದ್, ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಗೋವಿಂದರಾಜನಗರ ವಾರ್ಡ್ ಪಾಲಿಕೆ ಸೌಧ, ವಿಜಯನಗರ, ಸಂಜೆ 4.30

ಗುರುಪೂರ್ಣಿಮೆ ಪ್ರಯುಕ್ತ ಧರ್ಮ ಜಾಗೃತಿ ಸಮಾರಂಭ: ಸಾನ್ನಿಧ್ಯ: ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸೂಗೂರೇಶ್ವರ ಶಿವಾಚಾರ್ಯ ಸ್ವಾಮೀಜಿ, ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಪ್ರಾಸ್ತಾವಿಕ ನುಡಿ: ಶಿವಲಿಂಗ ಸ್ವಾಮೀಜಿ, ಅತಿಥಿಗಳು: ಗಂಗಾಂಬಿಕೆ ಮಲ್ಲಿಕಾರ್ಜುನ್, ಬಿ.ಎಸ್. ಪುಟ್ಟರಾಜು, ಆಯೋಜನೆ: ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಷನ್, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

‘ಅಂಬೇಡ್ಕರ್ ಇಚ್ಛೆಗೆ ವಿರುದ್ಧ ನಡೆದ ನೆಹರೂ’

ಶ್ಯಾಮ ಪ್ರಸಾದ್ ಮುಖರ್ಜಿ ಜನ್ಮದಿನಾಚರಣೆಯಲ್ಲಿ ಛಲವಾದಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೆಹರೂ ಅವರು ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ದೂರ ವಿಟ್ಟು ತಮ್ಮ ಅವಶ್ಯಕತೆ ಮತ್ತು ಓಲೈಕೆ ರಾಜಕಾರಣಕ್ಕಾಗಿ ಸಂವಿಧಾನದಲ್ಲಿ 370 ನೇ ವಿಧಿಯನ್ನು ಸೇರಿಸಿದರು. ಮೂಲ ಸಂವಿಧಾನದಲ್ಲಿ 370ನೇ ವಿಧಿ ಇರಲಿಲ್ಲ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಭಾರತೀಯ ಜನಸಂಘದ ಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ ಅವರ ಜನ್ಮದಿನದ ಪ್ರಯುಕ್ತ ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಶ್ಯಾಮಪ್ರಸಾದ್ ಮುಖರ್ಜಿ ಮತ್ತು ಅಂಬೇಡ್ಕರ್ ಅವರು ಜೊತೆ ಜೊತೆಯಲ್ಲಿ ಕೆಲಸ ಮಾಡಿದವರು. ಅಂಬೇಡ್ಕರ್ ಮತ್ತು ಮುಖರ್ಜಿ ಕಾಂಗ್ರೆಸ್ಸೇತರ ಮುಖಂಡರು. ಮೊದಲ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. 370ನೇ ವಿಧಿ ಸೇರಿಸಿದ ದಿನದಿಂದಲೇ ಮುಖರ್ಜಿ ಅವರು ಅದರ ವಿರುದ್ಧ ಹೋರಾಟ ಆರಂಭಿಸಿದರು. ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಸಮರ್ಪಿಸಿದರು’ ಎಂದರು.

‘ಮುಖರ್ಜಿ ಆ ಕಾಲಘಟ್ಟದಲ್ಲಿ ಬಹುಮುಖ ಪ್ರತಿಭೆಯಾಗಿದ್ದರು. ಶಿಕ್ಷಣ ತಜ್ಞ, ಹೋರಾಟಗಾರ ಮತ್ತು ಸಮಾಜಸೇವಕರೂ ಆಗಿದ್ದರು. ಬ್ರಿಟಿಷರ ವಿರುದ್ಧ ನಡೆದ ಕ್ವಿಟ್ ಇಂಡಿಯಾ ಚಳವಳಿಯ ರೂವಾರಿಯಾಗಿ ದೊಡ್ಡ ಹೋರಾಟವನ್ನು ರೂಪಿಸಿದ್ದರು’ ಎಂದು ಅವರು ಹೇಳಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ‘ಮುಖರ್ಜಿ ಅವರು ದೇಶದ ಏಕತೆ, ಸಮಗ್ರತೆ ಮತ್ತು ಸಾಂಸ್ಕೃತಿಕ ಹಿರಿಮೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಶ್ರೇಷ್ಠ ರಾಷ್ಟ್ರೀಯ ನಾಯಕ. ನಮ್ಮ ಪಕ್ಷಕ್ಕೆ ಸೈದ್ಧಾಂತಿಕ ಅಡಿಪಾಯ ಹಾಕಿಕೊಟ್ಟ ಭಾರತೀಯ ಜನಸಂಘದ ಸ್ಥಾಪಕ’ ಎಂದು ಹೇಳಿದರು.

‘ದೇಶದ ರಾಜಕಾರಣದಲ್ಲಿ ಒಂದು ಬಲಿಷ್ಠ ರಾಷ್ಟ್ರೀಯವಾದಿ ಸಿದ್ಧಾಂತ ಇರುವ ರಾಜಕೀಯ ಪರಿವಾರಕ್ಕೆ ನಾಂದಿ ಹಾಡಿದವರು. 370ನೇ ವಿಧಿಯನ್ನು ವಿರೋಧಿಸಿ ಜಮ್ಮು ಮತ್ತು ಕಾಶ್ಮೀರವನ್ನು ಭಾರತದೊಂದಿಗೆ ಸಂಪೂರ್ಣವಾಗಿ ಒಗ್ಗೂಡಿಸಲು ಗಟ್ಟಿಯಾಗಿ ನಿಂತು, ಅದಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಧೀಮಂತ ನಾಯಕ’ ಎಂದು ತಿಳಿಸಿದರು.



ಶ್ಯಾಮ ಪ್ರಸಾದ್ ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಿ.ಎಸ್‌. ಯಡಿಯೂರಪ್ಪ, ಛಲವಾದಿ ನಾರಾಯಣಸ್ವಾಮಿ

‘ಎಲ್ಲರಿಗೂ ಗುಣಮಟ್ಟದ ಆರೋಗ್ಯ ಸಿಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿರುವ ಎಲ್ಲ ವರ್ಗದವರಿಗೂ ಕಡಿಮೆ ದರದಲ್ಲಿ ಗುಣಮಟ್ಟದ ಆರೋಗ್ಯ ಸೌಲಭ್ಯ ಸಿಗುವಂತಾಗಬೇಕು’ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅಭಿಪ್ರಾಯಪಟ್ಟರು.

ನಗರದ ಕುಶಾಲನಗರ ವಾರ್ಡ್‌ನ ಬಿಡಿಎ ಲೇಔಟ್‌ನಲ್ಲಿ ನಿರ್ಮಿಸಿರುವ ಅಂಗನವಾಡಿ ಕೇಂದ್ರ ಮತ್ತು ಮೆಡಿ ಹೆಲ್ತ್ ಕ್ಲಿನಿಕ್ ಅನ್ನು ಸ್ಥಳೀಯ ಶಾಸಕ ಎ.ಸಿ.ಶ್ರೀನಿವಾಸ್ ಅವರೊಂದಿಗೆ ಉದ್ಘಾಟಿಸಿ ಮಾತನಾಡಿದ ಅವರು, ‘ಬಡವ, ಶ್ರೀಮಂತ, ಜಾತಿ, ಧರ್ಮ ಮೀರಿ ಎಲ್ಲರಿಗೂ ಆರೋಗ್ಯ, ಶಿಕ್ಷಣದ ಸೌಲಭ್ಯ ದೊರೆಯಬೇಕು’ ಎಂದರು.

ಶಾಸಕ ಎ.ಸಿ.ಶ್ರೀನಿವಾಸ್ ಮಾತನಾಡಿ, ‘ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಶಿಕ್ಷಣ ಪಡೆದ ಅನೇಕರು, ವಿಜ್ಞಾನಿ, ವೈದ್ಯ, ಎಂಜಿನಿಯರ್, ಸಾಹಿತಿ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿ, ದೇಶಕ್ಕೆ ಕೊಡುಗೆ ನೀಡಿದ್ದಾರೆ. ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಂಡ ಅನೇಕ ಮಹನೀಯರು ಓದಿದ್ದು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ’ ಎಂದು ತಿಳಿಸಿದರು.

‘ಯಾವ ರಾಷ್ಟ್ರ ಶಿಕ್ಷಣ, ಆರೋಗ್ಯಕ್ಕೆ ಆದ್ಯತೆ ನೀಡುತ್ತದೆಯೋ ಅಲ್ಲಿ ಸುಸ್ಥಿರ ಅಭಿವೃದ್ಧಿ ಇರುತ್ತದೆ. ಆಸ್ತಿ, ಹಣ ಗಳಿಕೆ ಮುಖ್ಯವಲ್ಲ, ಸಮಾಜಮುಖಿ ಹಾಗೂ ನಾಯಕತ್ವ ಗುಣವುಳ್ಳ ಮಕ್ಕಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿ’ ಎಂದು ಸಲಹೆ ನೀಡಿದರು.



ಕುಶಾಲನಗರ ವಾರ್ಡ್‌ನ ಶಾಂಪುರ ಮುಖ್ಯರಸ್ತೆಯಲ್ಲಿ ಮೆಡಿಹೆಲ್ತ್ ಕ್ಲಿನಿಕ್ ಅನ್ನು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಶಾಸಕ ಎ.ಸಿ.ಶ್ರೀನಿವಾಸ್ ಉದ್ಘಾಟಿಸಿದರು

ಚಿತ್ರಾವಳಿ



ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್‌.ಶಿವಣ್ಣ ಮಳವಳ್ಳಿ ಅವರು ನಗರದಲ್ಲಿ ಪ್ರತಿಭಾವಂತ ಬಡ ಹನ್ನೊಂದು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದರು



ಜಯನಗರ 5ನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಭಾನುವಾರ ಆಷಾಢ ಶುದ್ಧ ಪ್ರಥಮ ‘ಏಕಾದಶಿ’ ಪ್ರಯುಕ್ತ ಮಂತ್ರಾಲಯದ ಸುಬುಧೇಂದ್ರತೀರ್ಥ ಸ್ವಾಮೀಜಿ ಅವರಿಂದ ಭಕ್ತರಿಗೆ ತಪ್ತ ಮುದ್ರಾಧಾರಣೆ ನೆರವೇರಿಸಲಾಯಿತು ಪ್ರಜಾವಾಣಿ ಚಿತ್ರ

ಅಗೆದ ಪಾದಚಾರಿ ಮಾರ್ಗ, ಕಿರಿದಾದ ರಸ್ತೆ!

ಮಂದಗತಿಯಲ್ಲಿ ಸಾಗಿದ ಕಾಮಗಾರಿ ಜಲಮಂಡಳಿ ಕೆಲಸದಿಂದ ಜನರು ಹೈರಾಣ

• ಖಲೀಲಅಹ್ಮದ ಶೇಖ

ಮುಖ್ಯಾಂಶಗಳು
- ಎರಡು ತಿಂಗಳಾದರೂ ಮುಗಿಯದ ಕಾಮಗಾರಿ
- ನಿತ್ಯ ದೂಳಿನ ಮಜ್ಜನ, ಹದಗೆಟ್ಟ ಆರೋಗ್ಯ

ಬೆಂಗಳೂರು: ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಶೇಷಾದ್ರಿಪುರದ ಪ್ಲಾಟ್‌ಫಾರ್ಮ್ ಮುಖ್ಯ ರಸ್ತೆಯ ಎರಡೂ ಬದಿಯನ್ನು ಒಳ ಚರಂಡಿ (ಯುಜಿಡಿ) ಕಾಮಗಾರಿಗಾಗಿ ಅಗೆಯಲಾಗಿದೆ. ಇಲ್ಲಿ ಕೆಲಸ ಕುಂಟುತ್ತಾ ಸಾಗಿದ್ದು, ವಾಹನ ಸಂಚಾರ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೀವ್ರ ತೊಡಕಾಗಿದೆ.

ಈ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಆರಂಭವಾಗಲಿದೆ. ಹೀಗಾಗಿ ಬೆಂಗಳೂರು ಜಲಮಂಡಳಿ ಎರಡು ತಿಂಗಳ ಹಿಂದೆಯೇ ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳನ್ನು ಅಗೆದು ಯುಜಿಡಿ ಕಾಮಗಾರಿ ಪ್ರಾರಂಭಿಸಿದೆ. ಕೆಲವು ಕಡೆ ಗುಂಡಿಗಳನ್ನು ತೆಗೆಯಲಾಗಿದೆ. ಒಳ ಚರಂಡಿಗೆ ಜೋಡಿಸುವ ಕೊಳವೆಗಳನ್ನು ಬೇಕಾಬಿಟ್ಟಿಯಾಗಿ ಇಡಲಾಗಿದೆ. ತೆರೆದ ಗುಂಡಿಗಳ ಸುತ್ತ-ಮುತ್ತ ಯಾವುದೇ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ರಾತ್ರಿ ವೇಳೆ ಈ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ.

ಈ ಮಾರ್ಗದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಜೀವವಿಮೆ ಕಚೇರಿ, ಅಪೊಲೊ ಆಸ್ಪತ್ರೆ ಹಾಗೂ ಜೆಡಿಎಸ್ ಕಚೇರಿ ಇದೆ. ಇಲ್ಲಿಗೆ ನಿತ್ಯ ನೂರಾರು ಜನ ಭೇಟಿ ನೀಡುತ್ತಾರೆ. ಪಾದಚಾರಿ ಮಾರ್ಗ ಅಧ್ವಾನಗೊಂಡಿರುವುದರಿಂದ ಸಾರ್ವಜನಿಕರು ರಸ್ತೆಯ ಮೂಲಕವೇ ಸಂಚರಿಸುತ್ತಿದ್ದು, ಅಪಘಾತಗಳು ಸಂಭವಿಸುವ ಅಪಾಯ ಎದುರಾಗಿದೆ.

ಯಶವಂತಪುರ, ಯಲಹಂಕ, ಮಲ್ಲೇಶ್ವರ, ಶೇಷಾದ್ರಿಪುರ, ಕುರುಬರ ಹಳ್ಳಿ, ರಾಜಾಜಿನಗರದಿಂದ ಬರುವ ಎಲ್ಲ ಬಿಎಂಟಿಸಿ ಬಸ್‌ಗಳು ಪ್ಲಾಟ್‌ಫಾರ್ಮ್ ರಸ್ತೆಯ ಮೂಲಕ ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ತೆರಳುತ್ತವೆ. ಯುಜಿಡಿ ಕಾಮಗಾರಿಗಾಗಿ ಕಿರಿದಾದ ರಸ್ತೆಯನ್ನು ಅಗೆದ ಪರಿಣಾಮ ನಿತ್ಯ ದಟ್ಟಣೆಯ ಅವಧಿಯಲ್ಲಿ ಓಕಳಿಪುರದ ಮಿಲ್ ಜಂಕ್ಷನ್‌ನಿಂದ ಮಂತ್ರಿ ಸ್ಕ್ವೇರ್‌ನಲ್ಲಿರುವ ರಾಜೀವ್ ಗಾಂಧಿ ಪ್ರತಿಮೆವರೆಗೂ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ.

‘ಈ ರಸ್ತೆಯಲ್ಲಿ ಬೆಳಿಗ್ಗೆ ವೇಳೆ ಸಂಚರಿಸುವುದು ಒಂದು ರೀತಿಯ ದುಸ್ತರವಾದರೆ, ರಾತ್ರಿ ವೇಳೆ ಪಾದಚಾರಿಗಳು ನಡೆದಾಡುವುದೇ ಕಷ್ಟ. ಮಳೆ ಬಂದಾಗ, ಅಗೆದಿರುವ ಜಾಗ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ನಿತ್ಯ ದೂಳಿನ ಮಜ್ಜನವಾಗುತ್ತಿದ್ದು, ಆರೋಗ್ಯ ಹದಗೆಡುತ್ತಿದೆ. ಸಂಬಂಧಪಟ್ಟವರಿಗೆ ಕಾಮಗಾರಿ ಪೂರ್ಣಗೊಳಿಸುವಂತೆ ಮನವಿ ಮಾಡಿದರೂ, ಪ್ರಯೋಜನವಾಗುತ್ತಿಲ್ಲ. ಅಂಗಡಿಗಳ ಮುಂದೆ ದೊಡ್ಡ ಗುಂಡಿ ತೋಡಲಾಗಿದೆ. ಇದರಲ್ಲಿ ಗ್ರಾಹಕರು ಹಾಗೂ ವ್ಯಾಪಾರಿಗಳು ಬಿದ್ದು ಕಾಲು ಮುರಿದುಕೊಂಡಿದ್ದಾರೆ’ ಎಂದು ಪಾರ್ಸೆಲ್ ಅಂಗಡಿಯ ಸಿಬ್ಬಂದಿ ಅಳಲು ತೋಡಿಕೊಂಡರು.

‘ಬೆಂಗಳೂರು ಜಲಮಂಡಳಿ ಸಿಬ್ಬಂದಿ ನಾನಾ ಕಾರಣಗಳಿಂದ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ಪಾದಚಾರಿ ಮಾರ್ಗವನ್ನು ಅಗೆದು, ಮಣ್ಣಿನ ರಾಶಿಯನ್ನು ಅಂಗಡಿ ಮುಂಭಾಗದಲ್ಲಿ ಹಾಕಿದ್ದಾರೆ. ಇದರಿಂದ ಗ್ರಾಹಕರು ಅಂಗಡಿಗೆ ಬರುತ್ತಿಲ್ಲ. ವ್ಯಾಪಾರ-ವಹಿವಾಟು ಕಡಿಮೆ ಆಗಿದೆ. ಬಸ್‌ಗೆ ಹಾಕುವ ಪಾರ್ಸೆಲ್‌ಗಳನ್ನು ಮಂತ್ರಿ ಸ್ಕ್ವೇರ್‌ಗೆ ತೆರಳಿ ಹಾಕಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರಿಯಾಗಿ ಕೆಲಸ ಮಾಡದೇ ಕಾಲಹರಣ ಮಾಡುತ್ತಿದ್ದಾರೆ. ಸಾರ್ವಜನಿಕರಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ವಿಳಂಬ ನೀತಿ ಅನುಸರಿಸುತ್ತಿದ್ದಾರೆ’ ಎಂದು ಪಾನ್‌ಶಾಪ್ ಅಂಗಡಿ ವ್ಯಾಪಾರಿ ಪರಮೇಶ್ವರ ಅಸಮಾಧಾನ ವ್ಯಕ್ತಪಡಿಸಿದರು.

‘ಪ್ಲಾಟ್‌ಫಾರ್ಮ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕೈಗೊಳ್ಳಲಾಗುತ್ತದೆ. ಅದಕ್ಕೂ ಮೊದಲು ಜಲಮಂಡಳಿಯಿಂದ ಯುಜಿಡಿ ಕಾಮಗಾರಿ ಶುರುವಾಗಿದೆ. ಬೇಗ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ’ ಎಂದು ಜಲಮಂಡಳಿ ಎಂಜಿನಿಯರ್ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.



ಪ್ಲಾಟ್‌ಫಾರ್ಮ್ ರಸ್ತೆಯಲ್ಲಿ ಮಣ್ಣಿನ ರಾಶಿ ಹಾಕಿರುವುದರಿಂದ ನಿತ್ಯ ಸಂಚಾರ ದಟ್ಟಣೆ ಉಂಟಾಗುತ್ತಿದೆ
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಸಾರ್ವಜನಿಕರು ಏನಂತಾರೆ?



ಅಂಗಡಿ ಮುಂಭಾಗದಲ್ಲಿ ಮಣ್ಣಿನ ರಾಶಿ ಹಾಕಲಾಗಿದೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ಅನನುಕೂಲವಾಗಿದೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಾಗುತ್ತದೆ. ಅಭಿವೃದ್ಧಿ ಕಾಮಗಾರಿಗೆ ನಮ್ಮ ವಿರೋಧವಿಲ್ಲ. ಆದರೆ ವಿಳಂಬ ನೀತಿ ಅನುಸರಿಸುವುದು ಸರಿಯಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು
ಪರಮೇಶ್ವರ್ ಅಡಿಗ, ಪಾನ್‌ಶಾಪ್ ಅಂಗಡಿ ವ್ಯಾಪಾರಿ



ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಈ ಹಾದಿಯಲ್ಲಿ ಸಾಗುವುದೇ ಕಷ್ಟ. ನಮ್ಮ ಪಾರ್ಸೆಲ್ ಅಂಗಡಿಗೆ ಬರುವ ಔಷಧಿಗಳನ್ನು ಪಡೆದುಕೊಳ್ಳಲು ಬರುವ ಗ್ರಾಹಕರಿಗೆ ತೊಂದರೆ ಆಗುತ್ತಿದೆ. ಪಾರ್ಸೆಲ್‌ಗಳನ್ನು ವಾಹನದಿಂದ ಅನ್‌ಲೋಡ್ ಮಾಡಿಕೊಳ್ಳಲು ಸಾಧ್ಯ ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.
ಪ್ರದೀಪ್, ಪಾರ್ಸೆಲ್ ಅಂಗಡಿ ಸಿಬ್ಬಂದಿ



ಈ ರಸ್ತೆಯಲ್ಲಿ ಬೆಳಿಗ್ಗೆ 8ರಿಂದ 10 ಗಂಟೆವರೆಗೆ ಹಾಗೂ ಸಂಜೆ 4ರಿಂದ 8 ಗಂಟೆಯ ಅವಧಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ಮೆಜೆಸ್ಟಿಕ್‌ಗೆ ನಡೆದುಕೊಂಡು ಹೋದರೆ ಬೇಗ ತಲುಪಬಹುದು. ಆದರೆ ವಾಹನದಲ್ಲಿ ಸಂಚರಿಸಲು ಆಗುವುದಿಲ್ಲ. ಕಾಮಗಾರಿಯ ಜಾಗದಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ಯಾರಾದರೂ ಗುಂಡಿಗಳಲ್ಲಿ ಬಿದ್ದು, ಅನಾಹುತ ಆಗುವ ಸಾಧ್ಯತೆ ಇದೆ.
ನಾಗರಾಜ್, ನಾಗರಬಾವಿ

ರಾಮದೇವರ ಬೆಟ್ಟದಲ್ಲಿ ಪ್ರಥಮ ಏಕಾದಶಿ ಪೂಜೆ



ರಾಮದೇವರಿಗೆ ಅಲಂಕಾರ

ದಾಬಸ್‌ಪೇಟೆ: ಸೋಂಪುರ ಹೋಬಳಿಯ ರಾಮದೇವರ ಪಾದುಕೆ ಬೆಟ್ಟದಲ್ಲಿ ಪ್ರಥಮ ಏಕಾದಶಿ ಪ್ರಯುಕ್ತ ಭಾನುವಾರ ವಿಶೇಷ ಪೂಜೆ ನೆರವೇರಿತು.

ರಾಮ ಪಾದುಕೆಗಳಿಗೆ ಹಾಗೂ ಶ್ರೀರಾಮ-ಲಕ್ಷ್ಮಣ-ಸೀತೆ-ಹನುಮಂತ ದೇವರ ಉತ್ಸವ ಮೂರ್ತಿಗೆ ಅಭಿಷೇಕ ನಡೆಯಿತು. ದೇವರನ್ನು ಪುಷ್ಪಗಳಿಂದ ಅಲಂಕರಿಸಲಾಗಿತ್ತು.

ಭಕ್ತರು ತಂದ ಹಲಸಿನ ಹಣ್ಣಿನ ಮಣೇವಿಗೆ ತೀರ್ಥ ಹಾಕಿ ಪೂಜೆ ಮಾಡಲಾಯಿತು. ಸುತ್ತಮುತ್ತಲ ಭಕ್ತರು ಆಗಮಿಸಿದ್ದರು.

ವಿಜಯ ವಿಠ್ಠಲನಿಗೆ ಪ್ರತಿಷ್ಠಾ ವರ್ಧಂತಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಅರಿಶಿನಕುಂಟೆಯ ವಿಶ್ವಶಾಂತಿ ಆಶ್ರಮದಲ್ಲಿ ಏಕಶಿಲಾ ವಿಶ್ವರೂಪ ವಿಜಯ ವಿಠ್ಠಲ ದೇವರಿಗೆ 37ನೇ ಪ್ರತಿಷ್ಠಾ ವರ್ಧಂತಿ ಮತ್ತು ಸಂಸ್ಥಾಪಕ ಸಂತ ಭದ್ರಗಿರಿ ಕೇಶವದಾಸರ 91ನೇ ಜನ್ಮದಿನೋತ್ಸವದ ಪ್ರಯುಕ್ತ ಶನಿವಾರ ಮತ್ತು ಭಾನುವಾರ ವಿಶೇಷ ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ-ಗಳು ನೆರವೇರಿದವು.

ಎರಡೂ ದಿನ ಪಂಚಾಮೃತ ಅಭಿಷೇಕ, ದಾಸ ಕೀರ್ತನ ಮಹಾ ಮಂಡಳಿ ಮತ್ತು ವಿವಿಧ ಮಂಡಳಿಗಳಿಂದ ನಿರಂತರ ವಿಷ್ಣುಸಹಸ್ರನಾಮ, ಭಜನೆ ಮತ್ತು ಕೀರ್ತನೆಗಳೊಂದಿಗೆ ಜಾಗರಣೆ ನಡೆಯಿತು. ಭಕ್ತರಿಗೆ ಅಭಿಷೇಕ ಮಾಡುವ ಅವಕಾಶ ಕಲ್ಪಿಸಲಾಗಿತ್ತು. ಪೂಜಾ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಸುದ್ದಿ 2 ನಿಮಿಷ

ವಂಚಕರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಚೀಟಿಯಲ್ಲಿ ಹೂಡಿಕೆ ಮಾಡಿದ್ದ ಜನರ ಕೋಟ್ಯಂತರ ರೂಪಾಯಿ ಹಣದೊಂದಿಗೆ ಪರಾರಿಯಾದ ದಂಪತಿ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಸಂತ್ರಸ್ತರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ದೂರು ನೀಡಿದ್ದಾರೆ.

ಸುಮಾರು ₹10 ಕೋಟಿಗೂ ಅಧಿಕ ಹಣ ವಂಚಿಸಿರುವ ಆರೋಪಿಗಳಾದ ಸುಧಾ ಮತ್ತು ಸಿದ್ದಾಚಾರಿ ದಂಪತಿಯ ವಿರುದ್ಧ ದೂರು ನೀಡಲಾಗಿದ್ದು, ಒಂದು ತಿಂಗಳು ಕಳೆದರೂ ಆರೋಪಿಗಳು ಪತ್ತೆಯಾಗಿಲ್ಲ. ಶೀಘ್ರ ಆರೋಪಿಗಳನ್ನು ಪತ್ತೆ ಹಚ್ಚಲು ಪೊಲೀಸರಿಗೆ ಸೂಚಿಸಿ, ನ್ಯಾಯ ಕೊಡಿಸಬೇಕು ಎಂದು ವಂಚನೆಗೊಳಗಾದವರು ಮನವಿ ಮಾಡಿದ್ದಾರೆ.

ಪ್ರಕರಣದ ಹಿನ್ನೆಲೆ: ಜೆ.ಪಿ. ನಗರದ 6ನೇ ಹಂತದ ಜರಗನಹಳ್ಳಿಯಲ್ಲಿ ವಾಸವಾಗಿದ್ದ ಸುಧಾ ಹಾಗೂ ಸಿದ್ಧಾಚಾರಿ ದಂಪತಿ 20 ವರ್ಷಗಳಿಂದ ಚೀಟಿ ವ್ಯವಹಾರ ನಡೆಸುತ್ತಿದ್ದರು. ದಂಪತಿಯನ್ನು ನಂಬಿ ಸುಮಾರು 300ಕ್ಕೂ ಅಧಿಕ ಜನ ₹5 ಲಕ್ಷ ಹಾಗೂ ₹10 ಲಕ್ಷದ ಚೀಟಿಯಲ್ಲಿ ಹಣ ಹೂಡಿದ್ದರು. ಆದರೆ ಒಂದು ವರ್ಷದಿಂದ ದಂಪತಿ, ಚೀಟಿ ಹಣ ನೀಡದೆ ಸತಾಯಿಸುತ್ತಿದ್ದರು. ಜೂನ್ 3ರಂದು ರಾತ್ರಿ ತಮ್ಮ ಇಬ್ಬರು ಮಕ್ಕಳೊಂದಿಗೆ ಪರಾರಿಯಾಗಿದ್ದರು. ಹಣ ಕಳೆದುಕೊಂಡು ಕಂಗಾಲಾದ ಸ್ಥಳೀಯರು ಪುಟ್ಟೇನಹಳ್ಳಿ ಠಾಣೆಗೆ ದೂರು ನೀಡಿದ್ದರು.



ಆರೋಪಿಗಳು ನೂರಾರು ಜನರಿಗೆ ₹10 ಕೋಟಿಗೂ ಅಧಿಕ ಹಣ ವಂಚಿಸಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದ್ದು, ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡುವಂತೆ ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ಅವರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಪತ್ರ ಬರೆದಿದ್ದರು.

ಪ್ರಯಾಣಿಕನಿಂದ ಸುಲಿಗೆ

ಬೆಂಗಳೂರು: ಸ್ನೇಹಿತನ ನೋಡಲು ಉತ್ತರ ಪ್ರದೇಶದಿಂದ ಬಂದಿದ್ದ ವ್ಯಕ್ತಿಯ ಮೊಬೈಲ್ ಹಾಗೂ ₹2 ಸಾವಿರ ನಗದು ಸುಲಿಗೆ ಮಾಡಿದ ಆರೋಪದಡಿ ಆಟೊ ಚಾಲಕನ ವಿರುದ್ಧ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಿನಗೂಲಿ ನೌಕರರಾಗಿರುವ ಉತ್ತರಪ್ರದೇಶದ ಮೊಹಮದ್ ಆಸೀಫ್ ಅವರ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿದ್ದು, ಆರೋಪಿ ಪತ್ತೆಗೆ ಶೋಧ ಕೈಗೊಂಡಿದ್ದಾರೆ.

ಹಿಂದೆ ಚಿಕ್ಕಮಗಳೂರು ಸೇರಿ ಹಲವೆಡೆ ಎಸ್ಟೇಟ್‌ಗಳಲ್ಲಿ ಕೆಲಸ ಮಾಡಿದ್ದ ಆಸೀಫ್, ಸ್ನೇಹಿತನ ಸಲಹೆಯಂತೆ ಮತ್ತೆ ಉದ್ಯೋಗ ಅರಸಿ ನಗರಕ್ಕೆ ಬಂದಿದ್ದಾರೆ.

‘ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಶನಿವಾರ ಬೆಳಗಿನ ಜಾವ 4 ಗಂಟೆಗೆ ಬಂದಿಳಿದಿದ್ದಾರೆ. ಜೆ.ಪಿ.ನಗರದಲ್ಲಿ ವಾಸವಿರುವ ಸ್ನೇಹಿತನ ಮನೆಗೆ ತೆರಳಲು ಆಟೊದಲ್ಲಿ ಹೊರಟಿದ್ದಾರೆ. ಆದರೆ, ಚಾಲಕ ಶೇಷಾದ್ರಿಪುರದ ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಅವರನ್ನು ಬೆದರಿಸಿ, ಮೊಬೈಲ್ ಹಾಗೂ ₹2 ಸಾವಿರ ನಗದು ಕಿತ್ತುಕೊಂಡು ಪರಾರಿಯಾಗಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ಚಿಟಿಕೆ ಸುದ್ದಿ

ರೈಲು ನಿಲ್ದಾಣದಲ್ಲೇ ಹೆರಿಗೆ ಮಾಡಿಸಿದ ಸೇನಾ ವೈದ್ಯ



ಝಾನ್ಸಿ (ಪಿಟಿಐ): ಸೇನೆಯ ವೈದ್ಯರೊಬ್ಬರು ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿಯೇ ಸುರಕ್ಷಿತವಾಗಿ ಹೆರಿಗೆ ಮಾಡಿಸಿರುವ ಘಟನೆ ಉತ್ತರ ಪ್ರದೇಶದ ಝಾನ್ಸಿ ರೈಲು ನಿಲ್ದಾಣದಲ್ಲಿ ನಡೆದಿದೆ.

ಪನವೇಲ್–ಗೋರಖ್‌ಪುರ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿಯೊಬ್ಬರಿಗೆ ಶನಿವಾರ ಮಧ್ಯಾಹ್ನ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಹೀಗಾಗಿ ಅವರು ಝಾನ್ಸಿ ರೈಲು ನಿಲ್ದಾಣದಲ್ಲಿ ಇಳಿದಿದ್ದರು. ಮಹಿಳೆ ಗೋಳಾಡುವುದನ್ನು ಕಂಡ ಟಿಕೆಟ್ ಪರಿಶೀಲನಾ ಸಿಬ್ಬಂದಿ ಮತ್ತು ಸೇನಾ ವೈದ್ಯಾಧಿಕಾರಿ ಕೂಡಲೇ ಕಾರ್ಯಪ್ರವೃತ್ತರಾದರು ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ಮನೋಜ್ ಕುಮಾರ್ ಸಿಂಗ್ ತಿಳಿಸಿದರು.

‘ಹೊಟ್ಟೆ ನೋವಿನಿಂದ ಬಳಲಿದ್ದ ಮಹಿಳೆಯನ್ನು ಕಂಡ ಕೂಡಲೇ ಸಮಯ ವ್ಯರ್ಥ ಮಾಡದೇ ಪ್ಲಾಟ್‌ಫಾರ್ಮ್‌ನಲ್ಲಿಯೇ ಹೆರಿಗೆ ಮಾಡಿಸಲು ಸಿದ್ಧನಾದೆ. ವೈದ್ಯರು ತುರ್ತು ಸಂದರ್ಭಕ್ಕೆ ಸದಾ ಸಿದ್ಧರಾಗಿರಬೇಕು. ದೇವರ ದಯೆಯಿಂದ ನಾನು ಎರಡು ಜೀವಗಳನ್ನು ಉಳಿಸಿದೆ’ ಎಂದು ಮೇಜರ್ ಡಾ.ರೋಹಿತ್ ಬಚ್‌ವಾಲಾ ಹೇಳಿದರು.

ಬೆಂ.ವಿ.ವಿ: ಕುಲಪತಿಗೆ 67 ಅಧ್ಯಾಪಕರ ಪತ್ರ

ಬೆಂಗಳೂರು: ‘ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವನ್ನು ಕುಗ್ಗಿಸುವ ಹುನ್ನಾರ ನಡೆಯುತ್ತಿದೆ. ಇದನ್ನು ಖಂಡಿಸುತ್ತೇವೆ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ 67 ಅಧ್ಯಾಪಕರು ಕುಲಪತಿಗೆ ಪತ್ರ ಬರೆದಿದ್ದಾರೆ.

‘ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಇವೆ. ಅವುಗಳನ್ನು ಭರ್ತಿ ಮಾಡಲು ವಿಶ್ವವಿದ್ಯಾಲಯವು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಬದಲಿಗೆ ಬೇರೆ ವಿಶ್ವವಿದ್ಯಾಯಗಳಿಂದ ಅಧ್ಯಾಪಕರನ್ನು ವರ್ಗಾವಣೆ ಮಾಡಲಾಗಿದೆ. ಈ ಮೂಲಕ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯ ಕುಗ್ಗಿಸುವ ಯತ್ನ ನಡೆಯುತ್ತಿದೆ’ ಎಂದು ಪತ್ರದಲ್ಲಿ ಆರೋಪಿಸಿದ್ದಾರೆ.

‘ವರ್ಗಾವಣೆ ಮತ್ತು ನೇಮಕಾತಿಯಲ್ಲಿ ಸರ್ಕಾರದ ರೋಸ್ಟರ್ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಈ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ, ಹೋರಾಟ ನಡೆಸುತ್ತೇವೆ’ ಎಂದು ಅಧ್ಯಾಪಕರು ಒತ್ತಾಯಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಶಿಕ್ಷಕರ ಸಂಘವೂ ಕುಲಪತಿಗೆ ಪತ್ರ ಬರೆದಿದ್ದು, ‘15 ದಿನಗಳಲ್ಲಿ ಕ್ರಮ ತೆಗೆದುಕೊಳ್ಳಬೇಕು’ ಎಂದು ಕೋರಿದೆ.

ರಸ್ತೆ ಅಪಘಾತದಲ್ಲಿ ಚಾಲಕ ಸೇರಿ ಮೂವರಿಗೆ ಗಂಭೀರ ಗಾಯ

ವಿಭಜಕಕ್ಕೆ ಡಿಕ್ಕಿ: ಟೆಂಪೊ ಎರಡು ತುಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಬಳಿಯ ವರ್ತುಲ ರಸ್ತೆಯಲ್ಲಿರುವ ರಾಮಸಂದ್ರ ಸೇತುವೆ ಬಳಿ ರಸ್ತೆ ವಿಭಜಕಕ್ಕೆ ಡಿಕ್ಕಿಯಾದ ಟೆಂಪೊವೊಂದು ಎರಡು ತುಂಡಾಗಿ ಸೇತುವೆಯಿಂದ ಕೆಳಗೆ ಬಿದ್ದಿದ್ದು, ಚಾಲಕ ಸೇರಿ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಬ್ಯಾಡರಹಳ್ಳಿಯಿಂದ ಕೆಂಗೇರಿ ಕಡೆಗೆ ತೆರಳುತ್ತಿದ್ದ ಬೆಡ್‌ಶೀಟ್, ಹತ್ತಿ ತುಂಬಿದ್ದ ಟೆಂಪೊ, ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಬಲ ಭಾಗದ ವಿಭಜಕಕ್ಕೆ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಟೆಂಪೊ ಕ್ಯಾಬಿನ್ ತುಂಡಾಗಿ ಸೇತುವೆಯಿಂದ ಕೆಳಗೆ ಬಿದ್ದಿದ್ದು, ಮತ್ತೊಂದು ತುಂಡು ರಸ್ತೆಯ ಮೇಲೆ ಉಳಿದುಕೊಂಡಿದೆ.

ಪರಿಣಾಮ ಚಾಲಕ ರಾಘವೇಂದ್ರ, ಜೊತೆಗಿದ್ದ ಸಲೀಂ, ಫಯಾಜ್ ಅವರಿಗೆ ಗಾಯಗಳಾಗಿವೆ. ಮೂವರನ್ನೂ ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಮುಂದುವರಿದಿದೆ ಎಂದು ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಅನಿತಾ ಹದ್ದಣ್ಣವರ್ ಮಾಹಿತಿ ನೀಡಿದರು.



ತುಂಡಾಗಿರುವ ಟೆಂಪೊ

ಅಪಘಾತದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸ್ಥಳಕ್ಕೆ ಜ್ಞಾನಭಾರತಿ ಸಂಚಾರ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಪಘಾತಕ್ಕೆ ಅತಿವೇಗವೇ ಕಾರಣ ಎಂಬುದು ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ.

ಚಾಲಕ ರಾಘವೇಂದ್ರ ವಿರುದ್ಧ ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

7 ಮಂದಿ ವಿರುದ್ಧ ಎಫ್‌ಐಆರ್

ಅಲೆಮಾರಿ ನಿಗಮದ ಅಧ್ಯಕ್ಷೆ ವಿರುದ್ಧ ಅಸಭ್ಯ ವರ್ತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರೊಂದಿಗೆ ಅನುಚಿತವಾಗಿ ವರ್ತಿಸಿ, ನಿಂದಿಸಿ ಹಾಗೂ ಜೀವ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಮುಖಂಡ ಸೇರಿ ಏಳು ಜನರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿವಾನಂದ ವೃತ್ತದ ಬಳಿಯ ಗಾಂಧಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಲೆಮಾರಿ ಮುಖಂಡರ ಸಭೆಯಲ್ಲಿ ಈ ಘಟನೆ ನಡೆದಿದೆ.

ಅಖಿಲ ಕರ್ನಾಟಕ ಕುಳುವ ಸಂಘದ ನಗರ ಮಹಿಳಾ ವಿಭಾಗದ ಜಿಲ್ಲಾಧ್ಯಕ್ಷೆ ಪ್ರಭಾವತಿ ಅವರ ದೂರು ಆಧರಿಸಿ, ಬಿಜೆಪಿ ಮುಖಂಡ ಲೋಹಿತಾಕ್ಷ, ವಿರೇಶ್, ಶಿವು, ಬಸವರಾಜ, ಸುಭಾಷ್ ಚವ್ಹಾಣ್, ಜಾವಡೆ ಲೋಕೇಶ್, ಶಾಂತಕುಮಾರ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

‘ಗಾಂಧಿ ಭವನದಲ್ಲಿ ಶನಿವಾರ ಆಯೋಜಿಸಿದ್ದ ಅಲೆಮಾರಿ ಸಮುದಾಯಗಳ ಸಭೆಯಲ್ಲಿ ನಿಗಮದ ಅಧ್ಯಕ್ಷೆ ಪಲ್ಲವಿ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ ಮುಖಂಡರು ಭಾಗವಹಿಸಿದ್ದರು. ಅಲೆಮಾರಿ ಸಮುದಾಯಗಳ ಪರವಾಗಿ ಪಲ್ಲವಿ ಅವರು ಮಾತನಾಡಲು ಪ್ರಾರಂಭಿಸಿದ ವೇಳೆ, ಆರೋಪಿಗಳು ಅಡ್ಡಿಪಡಿಸಿ ಕೂಗಾಡಿದರು. ಅವಾಚ್ಯ ಶಬ್ದಗಳಿಂದ ಅವರನ್ನು ನಿಂದಿಸಿ, ಸಭೆಯಿಂದ ಹೊರ ಹೋಗುವಂತೆ ಹೇಳಿದರು. ಅಧ್ಯಕ್ಷರ ಕೈ ಹಿಡಿದು ಎಳೆದಾಡಿದರು. ಆರೋಪಿಗಳ ಪೈಕಿ ಒಬ್ಬ ನಮ್ಮ ಸೀರೆಯನ್ನು ಎಳೆದು, ಬೆದರಿಕೆ ಹಾಕಿದ್ದಾನೆ. ಅಲ್ಲದೇ ಎಡಗೈಯನ್ನು ತಿರುಚಿ ಗಾಯಗೊಳಿಸಿದ್ದಾನೆ. ಅಧ್ಯಕ್ಷರ ರಕ್ಷಣೆಗೆ ನಿಂತ ಇತರ ಮಹಿಳೆಯರ ಮೇಲೂ ಆರೋಪಿಗಳು ಹಲ್ಲೆ ನಡೆಸಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

‘ಈ ಘಟನೆ ಮಾಜಿ ಸಚಿವ ಎಚ್. ಆಂಜನೇಯ ಅವರ ಸಮ್ಮುಖದಲ್ಲಿ ನಡೆದಿದೆ. ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿರುವ ಆರೋಪಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

ದೂರು ಆಧರಿಸಿ ಬಿಎನ್‌ಎಸ್ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

‘ಪಾಟೀಲರಿಗೆ ಅರಿವಿದೆಯೇ’

ಬೆಂಗಳೂರು: ‘ಅಂತರರಾಜ್ಯ ನೀರಾವರಿ ಯೋಜನೆಗಳನ್ನು ಹೇಗೆ ಕಾರ್ಯಗತ ಮಾಡಲಾಗುತ್ತದೆ ಎಂಬುದರ ಬಗ್ಗೆ ಸಚಿವ ಎಚ್.ಕೆ.ಪಾಟೀಲರಿಗೆ ಅರಿವಿದೆಯೇ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮೇಕೆದಾಟು ಯೋಜನೆಗೆ ತಮಿಳುನಾಡಿನ ಒಪ್ಪಿಗೆ ಪಡೆಯಬೇಕಿಲ್ಲ ಎಂದು ಕಾನೂನು ಸಚಿವ ಎಚ್. ಕೆ.ಪಾಟೀಲರು ಹೇಳಿದ್ದಾರೆ. ಅವರು ಎಷ್ಟು ವರ್ಷದಿಂದ ಸಚಿವರಾಗಿದ್ದಾರೆ’ ಎಂದು ಕೇಳಿದರು.

‘ಮೇಕೆದಾಟು ವಿಚಾರದಲ್ಲಿ ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಈ ಯೋಜನೆ ವಿರುದ್ಧ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೋಗಿದೆ. ಹೀಗಿರುವಾಗ ತಮಿಳುನಾಡಿನ ಒಪ್ಪಿಗೆ ಅಗತ್ಯವಲ್ಲವೇ? ಪಾಟೀಲರಿಗೆ ಇದು ಗೊತ್ತಿಲ್ಲವೇ’ ಎಂದರು.

ವೃದ್ಧರಿಗೆ ಕಾರ್ಡ್ ಇದೆ, ವಿಮೆ ಇಲ್ಲ

ಒಂದನೇ ಪುಟದಿಂದ...

₹5 ಲಕ್ಷದವರೆಗೆ ಆರೋಗ್ಯ ವಿಮೆ ಭರವಸೆ ಒದಗಿಸುವ ‘ಆಯುಷ್ಮಾನ್ ವಯೋ ವಂದನಾ’ ಕಾರ್ಡ್ ಹೊಂದಿದ್ದರೂ ಚಿಕಿತ್ಸಾ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ.

ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು (ಎನ್‌ಎಚ್‌ಎ) ಈ ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿದೆ. ಎನ್‌ಎಚ್‌ಎ ಪೋರ್ಟಲ್ ಮೂಲಕವೇ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಕಾರ್ಡ್ ಪಡೆಯುವ ಅವಕಾಶ ನೀಡಲಾಗಿದೆ. ವಿವಿಧ ಸಂಘ–ಸಂಸ್ಥೆಗಳು ಸಹ ಕಾರ್ಡ್ ವಿತರಣೆಗೆ ಸಂಬಂಧಿಸಿದಂತೆ ಅಭಿಯಾನ ನಡೆಸಿ, ಕಾರ್ಡ್‌ಗೆ ನೋಂದಣಿ ಮಾಡಿಸುತ್ತಿವೆ. ಯೋಜನೆ ಜಾರಿಯಾಗದ ಪರಿಣಾಮ ಈ ಕಾರ್ಡ್‌ಗಳು ನಿರರ್ಥಕವಾಗುತ್ತಿವೆ.

ನಿವಾರಣೆಯಾಗದ ಗೊಂದಲ: ‘ಆಯುಷ್ಮಾನ್ ವಯೋ ವಂದನಾ’ ಯೋಜನೆಯಡಿ ಚಿಕಿತ್ಸೆಗೆ 70 ವರ್ಷ ಮೇಲ್ಪಟ್ಟವರು ಪಡಿತರ ಚೀಟಿ ನೀಡಬೇಕಾದ ಅಗತ್ಯ ಇರುವುದಿಲ್ಲ. ಇದರಿಂದಾಗಿ ಯೋಜನೆ ಜಾರಿಯಾದಲ್ಲಿ ಎಲ್ಲ ವೃದ್ಧರೂ ₹5 ಲಕ್ಷದವರೆಗೆ ಉಚಿತ ಚಿಕಿತ್ಸೆ ಪಡೆಯಲು ಸಾಧ್ಯ. ಯೋಜನೆಗೆ ಅಗತ್ಯವಿರುವ ಅನುದಾನದ ಬಗೆಗಿನ ಗೊಂದಲ ನಿವಾರಿಸುವಂತೆ ರಾಜ್ಯ ಆರೋಗ್ಯ ಇಲಾಖೆಯು ಕೇಂದ್ರ ಆರೋಗ್ಯ ಸಚಿವಾಲಯಕ್ಕೂ ಪತ್ರ ಬರೆದಿದೆ. ಆದರೆ, ಅನುದಾನದ ಭರವಸೆ ಸಿಗದಿದ್ದರಿಂದ ಯೋಜನೆ ಜಾರಿ ಮಾಡಿಲ್ಲ.

‘ಈ ಯೋಜನೆಗೆ ಕೇಂದ್ರ ಶೇ 60ರಷ್ಟು ಹಾಗೂ ರಾಜ್ಯ ಶೇ 40ರಷ್ಟು ವೆಚ್ಚ ಭರಿಸಬೇಕಾಗುತ್ತದೆ. ರಾಜ್ಯದಲ್ಲಿ ಯೋಜನೆ ಅನುಷ್ಠಾನಕ್ಕೆ ₹68.98 ಕೋಟಿ ಅನುದಾನದ ಅಗತ್ಯವಿದೆ. ಇದರಲ್ಲಿ ಶೇ 60ರಷ್ಟನ್ನು ಕೇಂದ್ರ ನೀಡಬೇಕಾಗಿದೆ. ₹36.58 ಕೋಟಿ ಅನುದಾನ ಪಡೆಯಲು ರಾಜ್ಯ ಅರ್ಹವಾಗಿದೆ. ಅನುದಾನದ ಸಮಸ್ಯೆಯಿಂದ ಯೋಜನೆ ಜಾರಿಯಾಗಿಲ್ಲ. ಯೋಜನೆಯಡಿ ಈಗಲೇ ಕಾರ್ಡ್ ಪಡೆಯಬೇಕಾದ ಅಗತ್ಯವಿಲ್ಲ’ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಪಡಿತರ ಚೀಟಿ ಇದ್ದಲ್ಲಿ ಚಿಕಿತ್ಸೆ

ರಾಜ್ಯದಲ್ಲಿ ಸದ್ಯ ಎಬಿ–ಪಿಎಂಜೆಎವೈ–ಆರೋಗ್ಯ ಕರ್ನಾಟಕ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯಡಿ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ, 70 ವರ್ಷ ಮೇಲ್ಪಟ್ಟವರು ಸೇರಿ ಎಲ್ಲ ವಯೋಮಾನದವರಿಗೆ ₹5 ಲಕ್ಷದವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ಎಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ ಸದಸ್ಯರಿಗೆ ಯೋಜನೆಯಡಿ ಚಿಕಿತ್ಸಾ ವೆಚ್ಚದ ಶೇ 30ರಷ್ಟು ಪಾವತಿಸಲಾಗುತ್ತಿದೆ. ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್ ನೀಡಬೇಕಿದೆ. ಈ ಯೋಜನೆಯನ್ನು ರಾಜ್ಯದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ನಿರ್ವಹಿಸುತ್ತಿದೆ.



ಆಯುಷ್ಮಾನ್ ವಯೋ ವಂದನಾ ಯೋಜನೆ ಜಾರಿಗೆ ಪ್ರಯತ್ನಿಸಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರದಿಂದ ಸಮರ್ಪಕ ಉತ್ತರ ಹಾಗೂ ಅನುದಾನದ ಭರವಸೆ ಸಿಗುತ್ತಿಲ್ಲ
ದಿನೇಶ್ ಗುಂಡೂರಾವ್, ಸಚಿವ

ದಾವಣಗೆರೆ ಪಿಎಸ್‌ಐ ತುಮಕೂರಿನಲ್ಲಿ ಆತ್ಮಹತ್ಯೆ

ತುಮಕೂರು: ದಾವಣಗೆರೆ ಬಡಾವಣೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಬಿ.ಆರ್.ನಾಗರಾಜಪ್ಪ (58) ನಗರದ ಲಾಡ್ಜ್‌ನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಡೆತ್‌ನೋಟ್ ಸಿಕ್ಕಿದ್ದು, ‘ನನ್ನ ಸಾವಿಗೆ ನಾನೇ ಕಾರಣ’ ಎಂದು ಉಲ್ಲೇಖಿಸಿದ್ದಾರೆ.

ಹೋಟೆಲ್ ಕೋಣೆಯಿಂದ ವಾಸನೆ ಬರುತ್ತಿದ್ದ ಕಾರಣ ಸಿಬ್ಬಂದಿ ಹೋಗಿ ನೋಡಿದಾಗ ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆರವುಗೊಳಿಸಲು ಸೂಚಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪತ್ರ


ಬಂಗಲೆ ತೆರವುಗೊಳಿಸದ ಚಂದ್ರಚೂಡ್

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ದೆಹಲಿಯ ಕೃಷ್ಣಮೆನನ್ ಮಾರ್ಗದ ಅಧಿಕೃತ ಬಂಗಲೆಯನ್ನು ಇನ್ನೂ ತೆರವುಗೊಳಿಸಿಲ್ಲ. ಬಂಗಲೆ ತೆರವುಗೊಳಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪತ್ರ ಬರೆದಿದೆ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಪತ್ರ ಬರೆದಿರುವ ಸುಪ್ರೀಂ ಕೋರ್ಟ್, ‘ಕೃಷ್ಣಮೆನನ್ ಮಾರ್ಗದ ಬಂಗಲೆ ಸಂಖ್ಯೆ 5– ಹಾಲಿ ಮುಖ್ಯ ನ್ಯಾಯಮೂರ್ತಿ ಅವರಿಗೆ ಮೀಸಲಿಟ್ಟ ಬಂಗಲೆ. ಆದರೆ ಚಂದ್ರಚೂಡ್ ಅವರು ನಿವೃತ್ತಿ ಬಳಿಕ ನಿಯಮಾನುಸಾರ ಪಡೆದ ಅವಧಿ ಅಲ್ಲದೆ, ವಿಶೇಷ ಅನುಮತಿ ಪಡೆದ ಅವಧಿಯ ಬಳಿಕವೂ ವಾಸ್ತವ್ಯ ಮುಂದುವರಿಸಿದ್ದಾರೆ ಎಂದು ದೂರಿದೆ’ ಎಂದು ಮೂಲಗಳು ತಿಳಿಸಿವೆ.

> **ಹಂಚಿಕೆಯಾದ ಬಂಗಲೆಯ ನವೀಕರಣ ಕಾರ್ಯ ಪ್ರಗತಿಯಲ್ಲಿದೆ. ಅನಾರೋಗ್ಯದಿಂದ ಬಳಲುತ್ತಿರುವ ಇಬ್ಬರು ಹೆಣ್ಣುಮಕ್ಕಳ ಅನುಕೂಲಕ್ಕಾಗಿ ಈ ನಿವಾಸದ ತೆರವು ಕಾರ್ಯ ವಿಳಂಬವಾಗುತ್ತಿದೆ**
> **ಡಿ.ವೈ.ಚಂದ್ರಚೂಡ್,** ನಿವೃತ್ತ ಸಿಜೆಐ

ಯಾವುದೇ ವಿಳಂಬ ಮಾಡದೆ ಚಂದ್ರಚೂಡ್ ಅವರಿಂದ ಬಂಗಲೆಯನ್ನು ತೆರವು ಮಾಡಿಸಬೇಕು ಎಂದು ಸಚಿವಾಲಯದ ಕಾರ್ಯದರ್ಶಿ ಅವರಿಗೆ ಮನವಿ ಮಾಡಿದೆ.



50ನೇ ಸಿಜೆಐ: ಚಂದ್ರಚೂಡ್ ಅವರು ಸುಪ್ರೀಂ ಕೋರ್ಟ್‌ನ 50ನೇ ಮುಖ್ಯ ನ್ಯಾಯಮೂರ್ತಿಯಾಗಿ 2022ರ ನವೆಂಬರ್‌ನಿಂದ 2024ರ ನವೆಂಬರ್‌ವರೆಗೆ ಕೆಲಸ ಮಾಡಿದ್ದಾರೆ. ನಿವೃತ್ತಿ ಪಡೆದು ಎಂಟು ತಿಂಗಳು ಕಳೆದರೂ ಸಿಜೆಐ ಅಧಿಕೃತ ನಿವಾಸದಲ್ಲಿಯೇ ವಾಸ್ತವ್ಯ ಹೂಡಿದ್ದಾರೆ.

ಅತಿಥಿ ಗೃಹದಲ್ಲಿ ವ್ಯವಸ್ಥೆ: ಚಂದ್ರಚೂಡ್ ಅವರಿಗೆ ನಿವೃತ್ತಿ ನಂತರ ವಾಸ್ತವ್ಯಕ್ಕಾಗಿ ತುಘಲಕ್ ರಸ್ತೆಯ ಬಂಗಲೆ ನಂ.14 ಅನ್ನು ಮಂಜೂರು ಮಾಡಲಾಗಿದೆ. ಆದರೆ, ಆ ಬಂಗಲೆಯ ನವೀಕರಣ ಕಾರ್ಯ ಪ್ರಗತಿಯಲ್ಲಿದ್ದ ಕಾರಣ ಸಿಜೆಐ ಅಧಿಕೃತ ನಿವಾಸದಲ್ಲಿಯೇ 2025ರ ಏಪ್ರಿಲ್ 30ರವರೆಗೆ ವಾಸಿಸಲು ಅವಕಾಶ ನೀಡಬೇಕು ಎಂದು ಸಿಜೆಐ ಖನ್ನಾ ಅವರಿಗೆ ಚಂದ್ರಚೂಡ್ ಅವರು 2024ರ ಡಿಸೆಂಬರ್ 18ರಂದು ಪತ್ರ ಬರೆದಿದ್ದರು. ಅದಕ್ಕೆ ಖನ್ನಾ ಒಪ್ಪಿಗೆ ನೀಡಿದ್ದರು. ಆನಂತರ ಮತ್ತೊಮ್ಮೆ ಮೇ 31ರವರೆಗೆ ಅನುಮತಿ ವಿಸ್ತರಿಸಲು ಮೌಖಿಕವಾಗಿ ಕೋರಿದ್ದರು.

ಹಲವು ನ್ಯಾಯಮೂರ್ತಿಗಳಿಗೆ ಅತಿಥಿ ಗೃಹ ಅಥವಾ ದೆಹಲಿಯ ವಿವಿಧೆಡೆ ಪರ್ಯಾಯ ವಸತಿ ವ್ಯವಸ್ಥೆ ಕಲ್ಪಿಸಿರುವುದರಿಂದ ಮತ್ತೊಮ್ಮೆ ಅವಧಿ ವಿಸ್ತರಣೆಗೆ ಕೋರುವಂತಿಲ್ಲ ಎಂಬ ಷರತ್ತಿನ ಮೇಲೆ ಖನ್ನಾ ಒಪ್ಪಿಗೆ ನೀಡಿದ್ದರು.

ಟೈಪ್ 5 ಬಂಗಲೆ ಬೇಡ ಎಂದಿದ್ದ ಖನ್ನಾ, ಗವಾಯಿ

ಚಂದ್ರಚೂಡ್ ಅವರ ನಂತರ ಸಿಜೆಐ ಆಗಿದ್ದ ಸಂಜೀವ್ ಖನ್ನಾ ಅವರು ಆರು ತಿಂಗಳು ಮಾತ್ರ ಅಧಿಕಾರದಲ್ಲಿದ್ದ ಕಾರಣ ಕೃಷ್ಣ ಮೆನನ್ ಮಾರ್ಗದ ಬಂಗಲೆಗೆ ವಾಸ್ತವ್ಯ ಸ್ಥಳಾಂತರಿಸಲು ನಿರಾಕರಿಸಿದ್ದರು. ಹಾಲಿ ಸಿಜೆಐ ಬಿ.ಆರ್.ಗವಾಯಿ ಅವರು ಸಹ ಈ ಹಿಂದೆ ನೀಡಿದ್ದ ಬಂಗಲೆಯಲ್ಲಿಯೇ ವಾಸಿಸುವುದಾಗಿ ತಿಳಿಸಿದ್ದಾರೆ.

ನಿಯಮಗಳು ಏನು ಹೇಳುತ್ತವೆ?

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ (ತಿದ್ದುಪಡಿ) ನಿಯಮ–2022ರ 3ಬಿ ಅಡಿಯಲ್ಲಿ, ಮುಖ್ಯ ನ್ಯಾಯಮೂರ್ತಿಯವರು ನಿವೃತ್ತಿಯ ನಂತರ ಗರಿಷ್ಠ ಆರು ತಿಂಗಳವರೆಗೆ ತಮ್ಮ ಅಧಿಕೃತ ನಿವಾಸದಲ್ಲಿ (ಟೈಪ್–5ಕ್ಕಿಂತ ಅಥವಾ ಅದಕ್ಕಿಂತ ಕೆಳಗಿನ ಹಂತದ) ಇರಲು ಅವಕಾಶವಿದೆ. ಆನಂತರ ಅವರು ಟೈಪ್ 7 ಬಂಗಲೆಯಲ್ಲಿ ವಾಸ್ತವ್ಯ ಹೂಡಬಹುದು. ಈ ನಿಯಮದ ಅಡಿಯಲ್ಲಿ ಚಂದ್ರಚೂಡ್ ಅವರಿಗೆ ವಾಸಿಸಲು ನೀಡಲಾಗಿದ್ದ ಆರು ತಿಂಗಳ ಅನುಮತಿಯು ಈ ವರ್ಷ ಮೇ 10ಕ್ಕೆ ಕೊನೆಗೊಂಡಿದೆ.

ಮುಖ್ಯಾಂಶಗಳು
- 2024ರ ನವೆಂಬರ್‌ನಲ್ಲಿ ನಿವೃತ್ತಿಯಾಗಿದ್ದ ಚಂದ್ರಚೂಡ್
- ವಿಶೇಷ ಅನುಮತಿ ಅವಧಿ ಮುಕ್ತಾಯದ ಬಳಿಕವೂ ವಾಸ್ತವ್ಯ
- ಪರ್ಯಾಯ ಬಂಗಲೆಯ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿ



ಕನ್ನಡ ಗೆಳೆಯರ ಬಳಗದಿಂದ ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು

ಕಲಿಕಾ ಸಾಮಗ್ರಿ ವಿತರಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಾಹಿತಿ ಚಿದಾನಂದಮೂರ್ತಿ ಹಾಗೂ ಪಿ.ವಿ. ನಾರಾಯಣ ಸ್ಮರಣಾರ್ಥವಾಗಿ ಕನ್ನಡ ಗೆಳೆಯರ ಬಳಗದಿಂದ ರಾಮಮೂರ್ತಿ-ನಗರದ ಅಂಬೇಡ್ಕರ್ ನಗರ ಶಾಲೆಯ 129 ಮಕ್ಕಳಿಗೆ ನೋಟ್ ಪುಸ್ತಕ, ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಕಲಿಕಾ ಸಾಮಗ್ರಿ ವಿತರಿಸಿ ಮಾತನಾಡಿದ ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ್, ‘ರಾಜ್ಯದಲ್ಲಿ ಕನ್ನಡ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ನಮ್ಮ ಗೆಳೆಯರ ಬಳಗ ಕನ್ನಡ ಮಾಧ್ಯಮದ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಪಠ್ಯೇತರ ಪರಿಕರ, ಸಹಾಯಧನ ನೀಡುವ ಮೂಲಕ ಕನ್ನಡ ಶಾಲೆಗಳ ಉಳಿವಿಗಾಗಿ ಶ್ರಮಿಸುತ್ತಿದೆ’ ಎಂದರು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಹಿಟಾಚಿ ಮಂಜುನಾಥ್ ಮಾತನಾಡಿ, ‘ಸರ್ಕಾರಿ ಶಾಲೆಗಳಲ್ಲಿನ ಬಡಮಕ್ಕಳ ಓದಿಗೆ ಪೂರಕವಾಗಿ ಸಂಘಸಂಸ್ಥೆಗಳು ನೀಡುವ ಸಹಾಯ ಮಹತ್ವದಾಗಿದೆ. ಗೆಳೆಯರ ಬಳಗ 8ರಿಂದ 10ನೇ ತರಗತಿಯ ನೂರಕ್ಕೂ ಹೆಚ್ಚು ಮಕ್ಕಳಿಗೆ ಪಠ್ಯೇತರ ಸಾಮಗ್ರಿ ನೀಡಿದೆ’ ಎಂದರು.

ಆರ್.ಶೇಷಶಾಸ್ತ್ರಿ, ಸಂಜೀವರತ್ನ ಶೇಷಶಾಸ್ತ್ರಿ, ಮುಖ್ಯ ಶಿಕ್ಷಕಿ ಬಿ.ವಿ.ಭಾರತಿ, ಬಾ.ಹ.ಉಪೇಂದ್ರ, ಎಚ್.ಎನ್.ರಮೇಶ್ ಬಾಬು, ಡಾ.ಸ್ಮಿತಾ ರೆಡ್ಡಿ ಇದ್ದರು.

ಪ್ರತಿಭೆಯು ದೇವರು ಕೊಟ್ಟದ್ದು; ವಿನೀತರಾಗಿ ಇರಿ. ಖ್ಯಾತಿಯು ಜನರಿಂದ ದೊರೆಯುವುದು; ಕೃತಜ್ಞರಾಗಿ ಇರಿ. ಅಹಂಕಾರವು ಸ್ವಯಂಪ್ರೇರಿತವಾದುದು, ಎಚ್ಚರಿಕೆಯಿಂದ ಇರಿ.
-ಜಾನ್ ವುಡನ್

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

ಪೀಠಿಕೆ:– ಭಾರತವು ಏಷ್ಯಾಖಂಡದ ದಕ್ಷಿಣ ಭಾಗದಲ್ಲಿರುವ ಪರ್ಯಾಯ ದ್ವೀಪವಾಗಿದೆ. ಇದನ್ನು 'ಇಂಡಿಯಾ' ಹಾಗೂ ಹಿಂದೂಸ್ಥಾನ ಎಂದು ಕರೆಯುತ್ತಾರೆ. ಇಂಡಿಯಾ ಎಂಬ ಹೆಸರು 'ಸಿಂಧೂ' ನದಿಯಿಂದ ಬಳಕೆಗೆ ಬಂದಿದೆ. 'ಭಾರತ'ವೆಂಬ ಹೆಸರು ಭರತ ಎಂಬ ಪುರಾತನ ಚಕ್ರವರ್ತಿ ಹೆಸರಿನಿಂದ ಬಂದಿದೆ. ಭಾರತವು ಸಂಪೂರ್ಣವಾಗಿ ಉತ್ತರಾರ್ಧಗೋಳದಲ್ಲಿದೆ. ಭಾರತವು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿ ತ್ರಿಕೋನಾಕೃತಿಯಲ್ಲಿ ಹಿಂದೂ ಮಹಾಸಾಗರದಲ್ಲಿ ಚಾಚಿಕೊಂಡಿದೆ

ಪ್ರಶ್ನೋತ್ತರ:–

1) ಭಾರತದ ವಿಸ್ತೀರ್ಣ ಎಷ್ಟಿದೆ?

ಉತ್ತರ:– ಭಾರತವು 32,87,263 (ಅಂದರೆ 32.87 ಲಕ್ಷ) ಚದರ ಕಿ.ಮಿಗಳಷ್ಟು ವಿಸ್ತಾರವಾಗಿದೆ.

2) ಭೂ ಕ್ಷೇತ್ರದ ದೃಷ್ಟಿಯಿಂದ ಇದು ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ್ರವಾಗಿದೆ?

ಉತ್ತರ:– ಏಳನೇ ದೊಡ್ಡ ರಾಷ್ಟ್ರವಾಗಿದೆ

3) ಭಾರತವು ಪ್ರಪಂಚದ ಒಟ್ಟು ವಿಸ್ತೀರ್ಣದಲ್ಲಿ ಶೇಕಡ ಎಷ್ಟು ಭಾಗವನ್ನು ಹೊಂದಿದೆ?

ಉತ್ತರ:– ಶೇ. 2.4

4) ಭಾರತದಲ್ಲಿ ಎಷ್ಟು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶವಿದೆ?

ಉತ್ತರ: ಭಾರತದಲ್ಲಿ 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳು ಇವೆ. ರಾಷ್ಟ್ರೀಯ ರಾಜಧಾನಿ ಪ್ರದೇಶವಾಗಿ ದೆಹಲಿ ಇದೆ

5) ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಎಷ್ಟು ಜನರಿದ್ದಾರೆ?

ಉತ್ತರ:– ಭಾರತವು 2011ರ ಜನಗಣತಿಯ ಪ್ರಕಾರ 121 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 17.5 ರಷ್ಟಿದೆ.

7) ಭಾರತವು ಯಾವ ಯಾವ ಅಕ್ಷಾಂಶ ಮತ್ತು ರೇಖಾಂಶಗಳ ನಡುವೆ ಹರಡಿಕೊಂಡಿದೆ?

ಉತ್ತರ:– ಭಾರತದ ಪ್ರಧಾನ ಭೂಭಾಗವು 8^0. 4' ದಿಂದ 37^0. 6' ಉತ್ತರ ಅಕ್ಷಾಂಶ ಹಾಗೂ 68^0. 7' ರಿಂದ 97^0 25' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

8) ಭಾರತದ ದಕ್ಷಿಣದ ತುತ್ತತುದಿ ಯಾವುದು?

ಉತ್ತರ:– ನಿಕೋಬಾರ್ ದ್ವೀಪದಲ್ಲಿರುವ 'ಇಂದಿರಾ ಪಾಯಿಂಟ್'

9) ಭಾರತದ ಉತ್ತರದ ತುತ್ತತುದಿ ಯಾವುದು?

ಉತ್ತರ:– ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ.

10) ಭಾರತದ ಆದರ್ಶ ಕಾಲಮಾನವನ್ನು ಎಲ್ಲಿಂದ ತೆಗೆದುಕೊಳ್ಳಲಾಗುತ್ತದೆ?

ಉತ್ತರ:– $82^0.30^1$ ಪೂರ್ವ ರೇಖಾಂಶ (ಪ್ರಯಾಗ / ಅಲಹಾಬಾದ್)ವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತೀಯ ಆದರ್ಶಕಾಲಮಾನವನ್ನು (IST) ತಿಳಿಸುವ ರೇಖಾಂಶವಾಗಿದೆ.

11) ಭಾರತದ ಸ್ಥಾನದ ಕುರಿತು ಬರೆಯಿರಿ

ಉತ್ತರ:– ಭಾರತವು ಭೌಗೋಳಿಕವಾಗಿ ಉತ್ತರ ಗೋಳಾರ್ಧ ಹಾಗೂ ಪೂರ್ವ ಗೋಳಾರ್ಧದ ಮಧ್ಯದಲ್ಲಿ ನೆಲೆಸಿದೆ. ಇದು ಆಗ್ನೇಯ ಏಷ್ಯಾದ ಒಂದು ಪ್ರಮುಖ ಪರ್ಯಾಯ ದ್ವೀಪ. ಭಾರತದ ಪ್ರಧಾನ ಭೂಭಾಗವು 8^0. 4' ದಿಂದ $37^0$6' ಉತ್ತರ ಅಕ್ಷಾಂಶ ಹಾಗೂ 68^0. 7' ರಿಂದ 97^0. 25' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಇನ್ನೂ ದಕ್ಷಿಣಕ್ಕೆ ವಿಸ್ತರಿಸಿವೆ. ನಿಕೋಬಾರ್ ದ್ವೀಪದ 6^0. 45' ದಕ್ಷಿಣ ಅಕ್ಷಾಂಶದಲ್ಲಿರುವ 'ಇಂದಿರಾ ಪಾಯಿಂಟ್' ಭಾರತದ ಅತ್ಯಂತ ದಕ್ಷಿಣ ತುದಿಯಾಗಿದೆ. ಇದಕ್ಕೆ ಪ್ರತಿಯಾಗಿ ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ. ಭಾರತದ ಮಧ್ಯಭಾಗದಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತ ($23^0.5^1$ ಉ)ವು ಹಾಯ್ದು ಹೋಗಿದೆ ಮತ್ತು $82^0.30^1$ ಪೂರ್ವ ರೇಖಾಂಶ (ಪ್ರಯಾಗ / ಅಲಹಾಬಾದ್)ವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತದ ಮಧ್ಯ ರೇಖಾಂಶವಾಗಿದ್ದು ಭಾರತೀಯ ಆದರ್ಶಕಾಲಮಾನವು (IST) ಈ ರೇಖಾಂಶವನ್ನಾಧರಿಸಿದೆ.

12) ಭಾರತದ ಭೂಗಡಿ ಹಾಗೂ ಜಲಗಡಿ(ಕರಾವಳಿ) ಎಷ್ಟಿದೆ?

ಉತ್ತರ:– ಭಾರತವು 15200 ಕಿ.ಮೀ ಉದ್ದದ ಭೂಗಡಿಯನ್ನು, 6100 ಕಿ.ಮೀ ಉದ್ದದ ಕರಾವಳಿಯನ್ನು ಹೊಂದಿದೆ.

13) ಭಾರತದ ಸುತ್ತಮುತ್ತ ಇರುವ ನೆರೆ ರಾಷ್ಟ್ರಗಳನ್ನು ಹೆಸರಿಸಿ.

ಉತ್ತರ:– ಪಾಕಿಸ್ತಾನ, ಅಫ್ಘಾನಿಸ್ತಾನ, ಚೀನಾ, ನೇಪಾಳ, ಭೂತಾನ್, ಬಾಂಗ್ಲಾದೇಶ, ಮ್ಯಾನ್ಮಾರ್, ಶ್ರೀಲಂಕ, ಮಾಲ್ದೀವ್ಸ್

14) ಭಾರತ ಮತ್ತು ಪಾಕಿಸ್ತಾನದ ನಡುವೆ ಎಳೆದಿರುವ ರೇಖೆ ಯಾವುದು?

ಉತ್ತರ:– ರ್‍ಯಾಡ್‌ಕ್ಲಿಫ್ ಲೈನ್

15) ಭಾರತ ಮತ್ತು ಚೀನಾದ ನಡುವೆ ಎಳೆದಿರುವ ರೇಖೆ ಯಾವುದು?

ಉತ್ತರ:– 'ಮ್ಯಾಕ್‌ಮೋಹನ್' (McMohan line) ರೇಖೆ

16) ಭಾರತ ಮತ್ತು ಅಫ್ಘಾನಸ್ಥಾನದ ನಡುವೆ ಎಳೆದಿರುವ ರೇಖೆ ಯಾವುದು?

ಉತ್ತರ:– 'ಡ್ಯೂರ್‍ಯಾಂಡ್' (Durand line) ರೇಖೆ

17) ಭಾರತದಲ್ಲಿರುವ ನಾಲ್ಕು ಪ್ರಧಾನ ಭೂಸ್ವರೂಪ ವಿಭಾಗಳ ಹೆಸರನ್ನು ತಿಳಿಸಿ

ಉತ್ತರ:– ಭಾರತದಲ್ಲಿರುವ ನಾಲ್ಕು ಪ್ರಧಾನ ಭೂಸ್ವರೂಪಗಳು

1) ಉತ್ತರದ ಪರ್ವತಗಳು 2) ಉತ್ತರದ ಮಹಾ ಮೈದಾನ
3) ಪರ್ಯಾಯ ಪ್ರಸ್ಥಭೂಮಿ 4) ಕರಾವಳಿ ಮೈದಾನಗಳು

18) ಭಾರತದಲ್ಲಿರುವ ಉತ್ತರದ ಪರ್ವತದ ಬಗ್ಗೆ ಬರೆಯಿರಿ

ಉತ್ತರ:– ಭಾರತದ ಉತ್ತರದಲ್ಲಿರುವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಜಗತ್ತಿನಲ್ಲಿಯೇ ಅತಿ ಎತ್ತರವಾದ ಶಿಖರಗಳನ್ನು, ಆಳವಾದ ಕಣಿವೆಗಳನ್ನು, ಹಿಮನದಿ ಮುಂತಾದವುಗಳನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ಅರುಣಾಚಲದವರೆಗೆ ಸುಮಾರು 2500 ಕಿಮೀ ಉದ್ದವಾಗಿ ಹಬ್ಬಿದೆ. ಇದು ಮಡಿಕೆ ಪರ್ವತವಾಗಿದ್ದು, ಮೂರು ಪ್ರಮುಖ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳೆಂದರೆ (ಅ) ಶಿವಾಲಿಕ್ ಶ್ರೇಣಿ (ಹಿಮಾಲಯದ ಪಾದ ಬೆಟ್ಟಗಳು), (ಬ) ಹಿಮಾಚಲ (ಮಧ್ಯ ಹಿಮಾಲಯ),(ಕ) ಮಹಾಹಿಮಾಲಯ (ಹಿಮಾದ್ರಿ)

19) ಹಿಮಾಲಯದ ಮಹತ್ವವೇನು?

ಉತ್ತರ: ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ.

ಇದರ ಮಹತ್ವ ಹೀಗಿವೆ

1) ಇವು ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2) ಉತ್ತರ ಏಷಿಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಹಿಡಿಯುತ್ತವೆ.
3) ನದಿಗಳ ಉಗಮ ಪ್ರದೇಶವಾಗಿವೆ. ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
4) ಇದು ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ.
5) ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ
6) ಪ್ರವಾಸೋದ್ದಿಮೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಪಡೆದಿದೆ.........ಇತ್ಯಾದಿ

20) ಹಿಮಾಲಯದಲ್ಲಿರುವ ಶಿವಾಲಿಕ್ಸ್ ಶ್ರೇಣಿಯ ಬಗ್ಗೆ ಬರೆಯಿರಿ


ಉತ್ತರ:– ಇದು ಹಿಮಾಲಯ ಪರ್ವತದಲ್ಲಿ ಇತ್ತೀಚಿಗೆ ನಿರ್ಮಿತವಾದದ್ದು, ಶಿವಾಲಿಕ್ ಶ್ರೇಣಿಯು ಹಿಮಾಲಯದಲ್ಲಿ ಅತ್ಯಂತ ದಕ್ಷಿಣದಲ್ಲಿರುವ ಸರಣಿ ಹಾಗೂ ಅತಿಕಡಿಮೆ ಎತ್ತರವನ್ನು ಹೊಂದಿದೆ. ಇದನ್ನು ಹಿಮಾಲಯದ ಪಾದ ಬೆಟ್ಟಗಳು ಎಂದು ಕರೆಯುತ್ತಾರೆ.

ಇಲ್ಲಿ ಸಮತಟ್ಟಾದ ಕಿರಿದಾದ ಸಮ್ಮತಟ್ಟಾದ ಮೈದಾನಗಳಿವೆ ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ : ಡೆಹರಾಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು. ಇವು ಸಮುದ್ರದಿಂದ 600–1500 ಮಿ.ಗಳಷ್ಟು ಎತ್ತರದಲ್ಲಿವೆ.

(ಮುಂದುವರಿಯುವುದು)

ಎ.ಐ. ಕಾಲದ ಹೊಸ ಉದ್ಯೋಗ ಸಿದ್ಧರಾಗಿದ್ದೀರಾ?

'ಎ.ಐ. ನಿಮ್ಮ ಉದ್ಯೋಗ ಕಸಿಯದು, ಆದರೆ ಎ.ಐ. ಬಳಸಲು ಬಲ್ಲವನು ನಿಮ್ಮ ಉದ್ಯೋಗ ಕಸಿಯುತ್ತಾನೆ'– ಇದು ಎ.ಐ. ಜಗತ್ತಿನಲ್ಲಿ ಪ್ರಚಲಿತದಲ್ಲಿರುವ ಮಾತು. ಇಡೀ ಕನ್ನಡ ಸಮಾಜವು ಬದಲಾವಣೆಗೆ ಒಡ್ಡಿಕೊಳ್ಳುವ ಮೂಲಕ ಈ ಅವಕಾಶಕ್ಕೆ ಹೆಬ್ಬಾಗಿಲು ತೆರೆಯಬೇಕು



• ವಸಂತ ಶೆಟ್ಟಿ

ಹಿಂದಿನ ಮುನ್ನೂರು ವರ್ಷಗಳ ಕೈಗಾರಿಕಾ ಕ್ರಾಂತಿಗಳೆಲ್ಲವನ್ನೂ ಮೀರಿಸುವಂತಹ ಬದಲಾವಣೆಯನ್ನು ಎ.ಐ. (ಕೃತಕ ಜಾಣ್ಮೆ) ತಂತ್ರಜ್ಞಾನ ನಮ್ಮ ಮುಂದೆ ತರುತ್ತಿದೆ. ಕಂಪ್ಯೂಟರ್ ಮತ್ತು ಅಂತರ್ಜಾಲವನ್ನು ಬಳಸುವ ತಿಳಿವು ಎರಡು ದಶಕಗಳಿಂದ ಹೇಗೆ ಒಂದು ಮೂಲಭೂತವಾದ ಕೌಶಲ ಆಗಿದೆಯೋ ಎ.ಐ. ಸಾಕ್ಷರತೆಯೂ ಇಪ್ಪತ್ತೊಂದನೆಯ ಶತಮಾನದ ಒಂದು ಅಡಿಪಾಯದ ಕೌಶಲ ಆಗುತ್ತಿದೆ. ಇದನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಇದನ್ನು ಬಳಸಿಕೊಂಡು ನಮ್ಮ ಬದುಕು ಹಾಗೂ ಉದ್ಯೋಗಗಳಲ್ಲಿ ಹೆಚ್ಚೆಚ್ಚು ಕ್ರಿಯಾಶೀಲವಾಗುವುದು ಈ ಹೊತ್ತಿನ ತುರ್ತು ಅಗತ್ಯಗಳಲ್ಲಿ ಒಂದು.

ಎ.ಐ. ತಂತ್ರಜ್ಞಾನ ನಮ್ಮ ಉದ್ಯೋಗವನ್ನು ಕಸಿಯುತ್ತದೆ ಅನ್ನುವ ಆತಂಕದಲ್ಲೇ ದಿನಗಳೆಯುವ ಬದಲು, ಈ ವಲಯದಲ್ಲಿ ಸೃಷ್ಟಿಯಾಗಬಹುದಾದ ಹೊಸ ಉದ್ಯೋಗಗಳು, ಹೊಸ ಅವಕಾಶಗಳು ಯಾವ ರೀತಿಯವು ಎಂದು ಯೋಚಿಸುವ ಅಗತ್ಯ ಇಂದು ನಮ್ಮ ಮುಂದಿದೆ. ಈ ಕ್ಷಿಪ್ರ ಬದಲಾವಣೆಗೆ ನಮ್ಮ ವಿದ್ಯಾರ್ಥಿಗಳು, ಶಿಕ್ಷಣ ವ್ಯವಸ್ಥೆ ಮತ್ತು ಸರ್ಕಾರ ಎಲ್ಲವೂ ಸಜ್ಜಾಗಬೇಕಿದೆ.

ಪ್ರೈಸ್ ವಾಟರ್‌ಹೌಸ್ ಕೂಪರ್ಸ್ (ಪಿ.ಡಬ್ಲ್ಯು.ಸಿ) ಸಂಸ್ಥೆಯು ಎ.ಐ. ಕೌಶಲದ ಕುರಿತು ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯೊಂದರ ಪ್ರಕಾರ, ಇತರ ಉದ್ಯೋಗಗಳಿಗೆ ಹೋಲಿಸಿದರೆ ಎ.ಐ. ಕೌಶಲ ಬೇಡುವ ಕೆಲಸಗಳ ಪ್ರಮಾಣ ದುಪ್ಪಟ್ಟು ವೇಗದಲ್ಲಿ ಬೆಳೆಯುತ್ತಿದೆ. ಎ.ಐ. ಕೌಶಲ ಪಡೆದ ಅಭ್ಯರ್ಥಿಗಳು ಹೆಚ್ಚಿನ ಸಂಬಳವನ್ನು ಕೂಡ ಪಡೆಯುತ್ತಿದ್ದಾರೆ. ಹೀಗಿರುವಾಗ, ಜಗತ್ತಿನ ಎ.ಐ. ಹಬ್ ಆಗಬೇಕು ಅನ್ನುವ ಅಪೇಕ್ಷೆಯುಳ್ಳ ಭಾರತ ಇದರಲ್ಲಿ ಹಿಂದುಳಿಯಬಾರದು. ಇಲ್ಲಿನ ಪ್ರತಿಯೊಂದು ವೃತ್ತಿಯ ವೃತ್ತಿಪರರೂ ಎ.ಐ. ಜಗತ್ತು ಬೇಡುವ ಕೌಶಲಗಳಿಗೆ ತಮ್ಮನ್ನು ಸಜ್ಜಾಗಿಸಿಕೊಳ್ಳಬೇಕಿದೆ.

'ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' ಅನ್ನುತ್ತದೆ ಗಾದೆ. ಎ.ಐ. ಕಾಲದಲ್ಲಿ ಅದನ್ನು ಸ್ವಲ್ಪ ಮುಂದುವರಿಸಿ 'ಪ್ರಾಂಪ್ಟ್ ಬಲ್ಲವನಿಗೆ ಅಜ್ಞಾನವಿಲ್ಲ' ಅನ್ನಬಹುದು. ಏನಿದು ಪ್ರಾಂಪ್ಟ್? ಅಗಾಧ ಪ್ರಮಾಣದ ಮಾಹಿತಿಯನ್ನು ಉಣಬಡಿಸಿ ಸಿದ್ಧಪಡಿಸಲಾದ ಜಾಣ ಕಂಪ್ಯೂಟರ್‌ಗಳೇ ಎ.ಐ. ತಂತ್ರಜ್ಞಾನದ ಮೂಲದಲ್ಲಿ ಇರುವುದು. ಇಂತಹ ಜಾಣ ಯಂತ್ರಗಳಿಂದ ನಮ್ಮ ದಿನನಿತ್ಯದ ಬದುಕಿನ ಯಾವುದೇ ಅಗತ್ಯಕ್ಕೆ ಬೇಕಾದ ಮಾಹಿತಿ, ತಿಳಿವು ಪಡೆಯಬೇಕು ಅಂದರೆ ಈ ಎ.ಐ. ಮಾದರಿಗಳಿಗೆ ಏನು ಕೇಳಬೇಕು, ಹೇಗೆ ಕೇಳಬೇಕು ಅನ್ನುವ ಕೌಶಲ ಮುಖ್ಯವಾಗುತ್ತದೆ. ಹೀಗೆ ಸರಿಯಾದ ರೀತಿಯಲ್ಲಿ ಅದಕ್ಕೆ ಪ್ರಶ್ನೆ ಕೇಳುವುದನ್ನು ಪ್ರಾಂಪ್ಟಿಂಗ್ ಎನ್ನಬಹುದು. ಚಾಟ್ ಜಿಪಿಟಿ, ಕ್ಲೌಡ್, ಜೆಮಿನಿಯಂತಹ ಎಲ್ಲ ಖ್ಯಾತ ಎ.ಐ. ಮಾದರಿಗಳು ನಿಮ್ಮ ಸಹಾಯಕನಂತೆ ಕೆಲಸ ಮಾಡಲು ಸರಿಯಾದ ಪ್ರಾಂಪ್ಟ್ ಮೂಲಕ ಪ್ರಶ್ನೆ ಕೇಳುವುದು ಅತ್ಯಗತ್ಯ. ಇದು ಉತ್ತರ ಬಲ್ಲವರ ಕಾಲವಲ್ಲ, ಸರಿಯಾದ ಪ್ರಶ್ನೆ ಕೇಳಬಲ್ಲವರ ಕಾಲ ಎಂದು ಮನವರಿಕೆ ಮಾಡಿಕೊಂಡರೆ ಇದನ್ನು ಒಂದು ಸಾಧನದಂತೆ ಬಳಸಿಕೊಳ್ಳುವುದು ಸುಲಭವಾಗುತ್ತದೆ.

ಹಾಗೋ ಹೀಗೋ ಒಂದು ಡಿಗ್ರಿ ಪಡೆದು, ಐ.ಟಿ– ಬಿ.ಟಿ ವಲಯದಲ್ಲಿ ಒಂದು ಕೆಲಸ ಹಿಡಿದು ಆರಾಮಾಗಿ ಸೆಟಲ್ ಆಗಬಹುದು ಅನ್ನುವ ನಂಬಿಕೆ ಇನ್ನು ಹೆಚ್ಚು ದಿನ ಬಾಳದು. ಎ.ಐ. ಗಳಿಸಿಕೊಳ್ಳುತ್ತಿರುವ ಸಾಮರ್ಥ್ಯವು ಐ.ಟಿ, ಫೈನಾನ್ಸ್, ವೈದ್ಯಕೀಯ, ಕಾನೂನು ಸೇರಿದಂತೆ ಎಲ್ಲ ಬಗೆಯ ಜ್ಞಾನಾಧಾರಿತ ವಲಯದ ಕೆಲಸಗಳಲ್ಲೂ ಆಮೂಲಾಗ್ರವಾದ ಬದಲಾವಣೆ ತರುತ್ತಿದೆ. ಇಲ್ಲೆಲ್ಲ ಹೊಸ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುತ್ತಿದೆ.

ಎ.ಐ. ಮಾದರಿಗಳಿಂದ ನಮಗೆ ಬೇಕಾದ ಉತ್ತರವನ್ನು ಪರಿಣಾಮಕಾರಿಯಾಗಿ ಪಡೆಯುವ ಪ್ರಾಂಪ್ಟ್ ಎಂಜಿನಿಯರ್ ಹುದ್ದೆಗೆ ಈಗ ಬಹಳಷ್ಟು ಬೇಡಿಕೆ ಇದೆ. ಅಂತೆಯೇ ಎ.ಐ. ಬಳಸಿ ಹೊಸ ಸಾಫ್ಟ್‌ವೇರ್ ಉತ್ಪನ್ನಗಳನ್ನು ಸೃಷ್ಟಿಸುವುದು ಸುಲಭವಾಗಿರುವ ಕಾರಣಕ್ಕೆ ಎ.ಐ. ಪ್ರಾಡಕ್ಟ್ ಮ್ಯಾನೇಜರ್, ಎ.ಐ. ತರಬೇತುದಾರ ಮತ್ತು ವಿಮರ್ಶಕ, ಎ.ಐ. ಮಾದರಿಗಳು ನೈತಿಕತೆಯ ಚೌಕಟ್ಟಿನಲ್ಲೇ ಕೆಲಸ ಮಾಡುವುದನ್ನು ಖಾತರಿಪಡಿಸುವ ಡೇಟಾ ಎತಿಸಿಸ್ಟ್ ತರಹದ ಹುದ್ದೆಗಳು ಈಗ ಹೆಚ್ಚುತ್ತಿವೆ. ಒಂದು ಸಂಸ್ಥೆ ತನ್ನ ಕಾರ್ಯಚಟುವಟಿಕೆಗಳಲ್ಲಿ ಎ.ಐ. ಅನ್ನು ಇನ್ನೂ ಬಳಸದಿದ್ದಲ್ಲಿ, ಅಲ್ಲಿ ಎಲ್ಲೆಲ್ಲಿ ಎ.ಐ. ವ್ಯವಸ್ಥೆಯನ್ನು ಹೊಂದಿಸಬಹುದು, ಯಾವ ರೀತಿಯಲ್ಲಿ ಸಂಸ್ಥೆಯ ಉತ್ಪಾದಕತೆ, ವ್ಯಾಪಾರ ಮತ್ತು ಲಾಭವನ್ನು ಹೆಚ್ಚಿಸಬಹುದು ಎಂದು ತಿಳಿಸುವ ಎ.ಐ. ಕನ್ಸಲ್ಟಿಂಗ್ ಕೂಡ ಈಗ ಬಹಳಷ್ಟು ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ.

ಇನ್ನೊಂದೆಡೆ, ಎ.ಐ. ಮಾದರಿಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗದ ಹಲವಾರು ಕ್ಷೇತ್ರಗಳಲ್ಲಿ, ಈಗಾಗಲೇ ಇರುವ ಕೆಲಸಗಳು ಮುಂದಿನ ಕೆಲ ವರ್ಷಗಳಲ್ಲಿ ಹೆಚ್ಚು ಬೇಡಿಕೆಯ ಮತ್ತು ಹೆಚ್ಚು ಸಂಪಾದನೆಯ ಕೆಲಸಗಳಾಗಿ ಬದಲಾವಣೆ ಹೊಂದಲಿವೆ. ಉದಾಹರಣೆಗೆ, ಅಡುಗೆ, ಮಕ್ಕಳು ಮತ್ತು ಹಿರಿಯರ ಆರೈಕೆ, ಪರಿಸರ ರಕ್ಷಣೆ, ದೈಹಿಕ ಮತ್ತು ಮಾನಸಿಕ ಆರೋಗ್ಯ, ಕಲಾತ್ಮಕವಾದ ಕರಕುಶಲ ವಸ್ತುಗಳು, ಕಲೆಯಂತಹ ಮನುಷ್ಯ ಸಂವೇದನೆಯುಳ್ಳ ವಿಷಯಗಳ ಸುತ್ತಲಿನ ಉದ್ಯೋಗಗಳು ಹೆಚ್ಚು ಬೇಡಿಕೆ ಪಡೆಯಲಿವೆ. ❖

ಕ್ರಾಂತಿಗೆ ಸಜ್ಜಾಗೋಣ

ಹಿಂದಿನ 30 ವರ್ಷಗಳ ಜ್ಞಾನಾಧಾರಿತ ಹಾಗೂ ಜಾಗತೀಕರಣಗೊಂಡ ವ್ಯವಸ್ಥೆಯು ಹುಟ್ಟುಹಾಕಿದ ಹಲವಾರು ಕೆಲಸಗಳು ಇನ್ನು ಕೆಲ ಕಾಲದಲ್ಲಿ ಅಪ್ರಸ್ತುತಗೊಳ್ಳಲಿವೆ. ಈ ಅನಿಶ್ಚಿತವಾದ ಭವಿಷ್ಯಕ್ಕೆ ಮಕ್ಕಳನ್ನು ತಯಾರು ಮಾಡುವ ಒಂದು ದಾರಿಯೆಂದರೆ, ಅವರಲ್ಲಿ ಜಗತ್ತಿನ ಬಗ್ಗೆ ಒಂದು ಕುತೂಹಲದ ಪ್ರಜ್ಞೆ ಬೆಳೆಸುವುದು.

ತಂತ್ರಜ್ಞಾನ, ಹಣಕಾಸು ವ್ಯವಸ್ಥೆ, ವ್ಯಾಪಾರ-ಉದ್ದಿಮೆ, ಕಲೆ-ಸಂಸ್ಕೃತಿ ಎಲ್ಲದರ ಕುರಿತು ಒಟ್ಟಂದದಲ್ಲಿ ನೋಡುವ (ಆ್ಯಬ್‌ಸ್ಟ್ರ್ಯಾಕ್ಟ್ ಥಿಂಕಿಂಗ್) ಕಲೆಯನ್ನು ಮಕ್ಕಳಲ್ಲಿ ಪ್ರೋತ್ಸಾಹಿಸಬೇಕು. ಮುಂದಾಲೋಚನೆಯ ಕ್ರಮವನ್ನು ಹೆಚ್ಚಿಸುವ, ದೂರಗಾಮಿ ಪರಿಣಾಮಗಳನ್ನು ಯೋಚಿಸುವಂತೆ ಮಾಡುವ ಆಟಗಳಾದ ಚೆಸ್, ಒಗಟು ಬಿಡಿಸುವುದು, ಸುಡೊಕು, ಬೋರ್ಡ್ ಗೇಮ್ಸ್‌ನಂತಹವುಗಳನ್ನು ಪರಿಚಯಿಸಬೇಕು. ಜೊತೆಯಲ್ಲೇ, ಡಿಜಿಟಲ್ ಮತ್ತು ಎ.ಐ. ಸಾಕ್ಷರತೆಯನ್ನು ಶಾಲೆಯ ಮಟ್ಟದಲ್ಲೇ ಸಾಧ್ಯವಾಗಿಸಬೇಕು.

ಎಲ್ಲ ಬದಲಾವಣೆಗಳ ಅಡಿಪಾಯವಾಗಿರುವ ಗಣಿತ ಮತ್ತು ಭೌತವಿಜ್ಞಾನದಂತಹ ಮೂಲಭೂತ ವಿಷಯಗಳ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಹೆಚ್ಚುವಂತೆ ಮಾಡಬೇಕು. ಶಾಲೆಗಳು ಪಠ್ಯಪುಸ್ತಕ, ಮನೆಗೆಲಸ ಅನ್ನುವ ಬಾಯಿಪಾಠದ ದಾರಿ ಬಿಟ್ಟು, ನಿಜಕ್ಕೂ ತಿರುಳು ತಿಳಿವಳಿಕೆಯತ್ತ ಮಕ್ಕಳನ್ನು ಕರೆದೊಯ್ಯುವ ಕಲಿಮನೆಗಳಾಗಿ ಬದಲಾಗಬೇಕು. ಸರ್ಕಾರ ಇದಕ್ಕೆ ಬೇಕಾದ ಮೂಲಸೌಕರ್ಯಗಳನ್ನು ಒದಗಿಸುವುದು, ಕನ್ನಡದಂತಹ ಭಾಷೆಯಲ್ಲೂ ಈ ಎ.ಐ. ಮಾದರಿಗಳು ಚೆನ್ನಾಗಿ ಕೆಲಸ ಮಾಡುವಂತಹ ಪ್ರಯತ್ನಗಳಿಗೆ ಸಂಪನ್ಮೂಲ ಒದಗಿಸುವುದು, ಎ.ಐ. ಮಾದರಿಗಳ ಶಕ್ತಿ ಬೆಳೆಸಿ, ಸ್ವಂತ ಉದ್ಯಮ ಮಾಡಲು ಹೊರಡುವ ಪ್ರತಿಭೆಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡುವ ಮೂಲಕ ಈ ಕ್ರಾಂತಿಗೆ ನಮ್ಮ ರಾಜ್ಯವನ್ನು ಸಜ್ಜಾಗಿಸುವ ಕೆಲಸಕ್ಕೆ ಮುಂದಾಳತ್ವ ವಹಿಸಬೇಕು.

ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

Chapter – 1

ELECTRIC CHARGES AND FIELDS

Problem:-

1. Find the surface charge density of a plane sheet of finite thickness having an electric field of 300 Vm^{-1} acting downwards near the surface of the sheet.

Soln:- **(.......Contd)**

$$E = \frac{\sigma}{2\epsilon_0}$$

Therefore, electric fields due to plates A and B are given by

$$E_1 = \frac{\sigma_1}{2\epsilon_0} \text{ and } E_2 = \frac{\sigma_2}{2\epsilon_0}$$

In region I (to the left side of plate A), the net electric field is given by

$$E_I = -E_1 - E_2 = -\frac{\sigma_1}{2\epsilon_0} - \frac{\sigma_2}{2\epsilon_0}$$

$$\text{i.e., } E_I = -\frac{1}{2\epsilon_0}(\sigma_1 + \sigma_2) \quad \text{.............(i)}$$

In region II (between two plates), the net electric field is given by

$$E_{II} = E_1 - E_2 = \frac{\sigma_1}{2\epsilon_0} - \frac{\sigma_2}{2\epsilon_0}$$

$$\text{i.e., } E_{II} = \frac{1}{2\epsilon_0}(\sigma_1 - \sigma_2) \text{.........(ii)}$$

In region III (to the right side of plate B), the net electric field is given by

$$E_{III} = E_1 + E_2 = \frac{\sigma_1}{2\epsilon_0} + \frac{\sigma_2}{2\epsilon_0}$$

$$\text{i.e., } E_{III} = \frac{1}{2\epsilon_0}(\sigma_1 + \sigma_2) \quad \text{.............(iii)}$$


Note -1:

If plate A is positively charged and B is equally negatively charged i.e., $\sigma_1 = +\sigma$ and $\sigma_2 = -\sigma$ then

$$E_I = -\frac{1}{2\epsilon_0}(\sigma - \sigma) = 0,$$

$$E_{II} = \frac{1}{2\epsilon_0}(\sigma - (-\sigma)) = \frac{2\sigma}{2\epsilon_0} = \frac{\sigma}{\epsilon_0}$$

$$\text{and } E_{III} = \frac{1}{2\epsilon_0}(\sigma - \sigma) = 0.$$




Thus, electric field between the two equally and oppositely charged plates is constant and given by,

$$E = \frac{\sigma}{2\epsilon_0}$$

Practically, uniform electric field is produced in the space between two equally and oppositely charged plates placed very close to each other.

Electric Field Intensity due to a uniformly charged thin spherical shell (hollow sphere)

a) At a point outside the shell



Consider a positive charge q distributed uniformly on the surface of a spherical shell of radius R.

Let P be a point outside the shell at a distance r from the centre of the shell (r > R), where electric field is to be calculated. Draw a Gaussian surface in the form of a sphere of radius r with O as the centre.

According to Gauss' theorem,

$$\oint_S \vec{E}.d\vec{S} = \frac{q}{\epsilon_0}$$

$$\text{(or)} \oint_S E\, dS \cos\theta = \frac{q}{\epsilon_0} \quad \text{.........(i)}$$

Since $\vec{E}$ & $d\vec{S}$ are directed along the same direction, so $\theta = 0^0$

$$\therefore \oint_S E\, dS \cos 0^0 = \frac{q}{\epsilon_0} \text{ (or) } \oint_S E\, dS = \frac{q}{\epsilon_0}.$$

Since E at all points on the Gaussian surface is same and directed radially outwards,

$$\therefore E \oint_S dS = \frac{q}{\epsilon_0}$$

But $\oint_S dS$ surface area of the Gaussian surface

(which is spherical) $= 4\pi r^2$

$$\therefore E \times 4\pi r^2 = \frac{q}{\epsilon_0} \Rightarrow E = \frac{1}{4\pi\epsilon_0}\frac{q}{r^2}$$

which is the electric field due to a point charge q at a distance r.


In vector form, $\vec{E} = \frac{q}{4\pi\epsilon_0 r^2}\hat{r}$

Hence the electric field due to a uniformly charged thin spherical shell at a point outside the shell is such as if the whole charge were concentrated at the centre of the shell.

Electric Field Intensity due to a uniformly charged thin spherical shell (hollow sphere)

(b) At a point on the surface of the shell

When point of P is at the surface of the shell, then r = R.



We already know that the electric field due to a point charge q at a distance r.

$$E = \frac{1}{4\pi\epsilon_0}\frac{q}{r^2}$$

When r = R, the radius of the hollow spherical sphere the above eqn becomes

$$E = \frac{1}{4\pi\epsilon_0}\frac{q}{R^2} \quad \text{..........(i)}$$

(Contd.......)

ಚಟಿಕೆ ಸುದ್ದಿ

ಅಪಘಾತ: ನಾಲ್ವರ ಸಾವು



ಬಸ್ ಮತ್ತು ಕಾರು ನಡುವೆ ಅಪಘಾತ ಸಂಭವಿಸಿರುವುದು

ಅಥಣಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮುರಗುಂಡಿ ಗ್ರಾಮದ ಬಳಿ ಸಂಕೇಶ್ವರ–ಜೇವರ್ಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ ಹಾಗೂ ಕಾರು ನಡುವೆ ಭಾನುವಾರ ಡಿಕ್ಕಿ ಸಂಭವಿಸಿ, ಕಾರಿನಲ್ಲಿದ್ದ ನಾಲ್ವರು ಸಾವನ್ನಪ್ಪಿದ್ದಾರೆ.

ಕಲಬುರಗಿ ಜಿಲ್ಲೆಯ ಅಫಜಲಪುರದ ರಾಹುಲ್ ಗೌರಿಶಂಕರ ಮ್ಯಾಳೇಶಿ (30), ಸಂಗಮನಾಥ ಗಿರೀಶ ಅಮರಗೊಂಡ (31) ಕಾರು ಚಾಲಕ ಗಿರೀಶ ಅಶೋಕ ಬಳೂರ್ಗಿ (30) ಮತ್ತು ರಾಧಿಕಾ ರಾಹುಲ್ ಮ್ಯಾಳೇಶಿ (28) ಮೃತರು. ಕಾರಿನಲ್ಲಿದ್ದ ಮಹೇಶ ತಿವಾರಿ ಎಂಬುವರಿಗೆ ಗಾಯಗಳಾಗಿವೆ.

‘ಕಾರಿನಲ್ಲಿದ್ದವರು ಮಹಾರಾಷ್ಟ್ರದ ಕೊಲ್ಹಾಪುರದ ಮಹಾಲಕ್ಷ್ಮಿದೇವಿಯ ದರ್ಶನ ಪಡೆದು ಮರಳುತ್ತಿದ್ದರು. ಬಸ್, ಅಥಣಿ ಕಡೆಯಿಂದ ಕಾಗವಾಡ ಮಾರ್ಗವಾಗಿ ಮೀರಜ್‌ಗೆ ಹೊರಟಿತ್ತು’ ಎಂದು ಅಥಣಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕಾಡುಕೋಣದ ದಾಳಿ: ಬಲಿ



ಡಿ.ವಿ. ರಮೇಶ್ ಗೌಡ

ಮೂಡಿಗೆರೆ: ಸಮೀಪದ ದುರ್ಗದಹಳ್ಳಿ ಗ್ರಾಮದಲ್ಲಿ ಕಾಡುಕೋಣದ ದಾಳಿಗೆ ಕಾಫಿ ಬೆಳೆಗಾರ ಡಿ.ವಿ. ರಮೇಶ್ ಗೌಡ (52) ಎಂಬುವರು ಮೃತಪಟ್ಟಿದ್ದಾರೆ.

ರಮೇಶ್ ಅವರು ದುರ್ಗದಹಳ್ಳಿ ಸಮೀಪ ಹಲಗಡಕ ಎಂಬಲ್ಲಿರುವ ತಮ್ಮ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹಿಂಬದಿಯಿಂದ ಕಾಡುಕೋಣ ಅವರ ಮೇಲೆ ದಾಳಿ ಮಾಡಿದೆ. ತೋಟದಲ್ಲಿ ರಮೇಶ್ ಒಬ್ಬರೇ ಇದ್ದುದರಿಂದ ಬಹಳ ಹೊತ್ತು ವಿಷಯ ಯಾರಿಗೂ ತಿಳಿದಿರಲಿಲ್ಲ. ಅವರು, ನೋವಿನಿಂದ ಜೋರಾಗಿ ಕಿರುಚುತ್ತಿದ್ದ ಶಬ್ದ ಕೇಳಿ ಪಕ್ಕದ ಹಲಗಡಕ ಎಸ್ಟೇಟ್ ರೈಟರ್ ಹಾಗೂ ಕಾರ್ಮಿಕರು ಸ್ಥಳಕ್ಕೆ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ.

ತೀವ್ರ ಗಾಯಗೊಂಡಿದ್ದ ಅವರನ್ನು ಕಳಸ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಕೊನೆಯುಸಿರೆಳೆದಿದ್ದಾರೆ. ಇವರಿಗೆ ಪತ್ನಿ, ಪುತ್ರ ಇದ್ದಾರೆ. ಘಟನೆಗೆ ಸಂಬಂಧಿಸಿದಂತೆ ಬಾಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತದೇಹವನ್ನು ಕಳಸ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ.

ಗೋಡೆ ಹಾರಿ ಗರ್ಭಿಣಿ ಬಾಲಕಿ ಪರಾರಿ

ಹಾವೇರಿ: ಜಿಲ್ಲೆಯ ರಾಣೆಬೆನ್ನೂರಿನ ಬಾಲಕಿಯರ ಸರ್ಕಾರಿ ಬಾಲ ಮಂದಿರದಲ್ಲಿದ್ದ 17 ವರ್ಷದ ಬಾಲಕಿ ಶನಿವಾರ ಪರಾರಿಯಾಗಿದ್ದು, ಆಕೆಗಾಗಿ ರಾಣೆಬೆನ್ನೂರು ಶಹರ ಠಾಣೆ ಪೊಲೀಸರು ಶೋಧ ನಡೆಸಿದ್ದಾರೆ.

‘ಅಪಹರಣಗೊಂಡಿದ್ದ ಬ್ಯಾಡಗಿಯ ಬಾಲಕಿಯನ್ನು ಸಖಿ ಒನ್ ಸ್ಟಾಪ್ ಕೇಂದ್ರದ ಸಿಬ್ಬಂದಿ ರಕ್ಷಿಸಿದ್ದರು. ವಿಚಾರಣೆ ವೇಳೆ ಗರ್ಭಿಣಿಯೆಂದು ಗೊತ್ತಾದ ಕಾರಣ ಆಕೆಯನ್ನು ಬಾಲಮಂದಿರದಲ್ಲಿ ಇರಿಸಲಾಗಿತ್ತು. ಬಾಲಮಂದಿರದ ಪರಿವೀಕ್ಷಣಾ ಅಧಿಕಾರಿ ಜ್ಯೋತಿ ಶಿಗ್ಲಿ ದೂರು ನೀಡಿದ್ದು, ತನಿಖೆ ನಡೆಸಿದ್ದೇವೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಾಲಮಂದಿರದಲ್ಲಿನ ಶೌಚಾಲಯಕ್ಕೆ ಹೋಗಿದ್ದ ವೇಳೆ ಬಾಲಕಿಯು ಸಮೀಪದ ಗೋಡೆಯನ್ನು ಹಾರಿ, ಪರಾರಿಯಾಗಿರುವ ಸಾಧ್ಯತೆಯಿದೆ. ಅಪಹರಣದ ಬಗ್ಗೆಯೂ ಶಂಕೆಯಿದೆ’ ಎಂದು ಅವರು ತಿಳಿಸಿದ್ದಾರೆ.

ವಿಡಿಯೊ ಹಂಚಿದ ಇಬ್ಬರ ಬಂಧನ

ಪುತ್ತೂರು(ದಕ್ಷಿಣ ಕನ್ನಡ): ನಗರದ ಹೊರವಲಯದ ಬಿರುಮಲೆ ಬೆಟ್ಟದಲ್ಲಿ ಬಾಲಕ ಮತ್ತು ಬಾಲಕಿ ಕುಳಿತು ಕೊಂಡಿದ್ದಾಗ ಅವರನ್ನು ತಡೆದು, ಯುವಕ ಅನ್ಯಧರ್ಮದವನೆಂದು ನಿಂದಿಸಿ, ಸಾರ್ವಜನಿಕರನ್ನು ಸೇರಿಸಿ ಅವಮಾನಿಸಿದ್ದಲ್ಲದೆ, ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

ಕಡಬ ತಾಲ್ಲೂಕಿನ ಕುದ್ಮಾರು ನಿವಾಸಿ ಪುರುಷೋತ್ತಮ (43), ಪುತ್ತೂರು ತಾಲ್ಲೂಕಿನ ಆರ್ಯಾಪು ಗ್ರಾಮದ ನಿವಾಸಿ ರಾಮಚಂದ್ರ (38) ಬಂಧಿತರು.

‘ನನ್ನ ಪುತ್ರ ಪರಿಚಯದ ಬಾಲಕಿಯೊಂದಿಗೆ ಶನಿವಾರ ಮಧ್ಯಾಹ್ನ ಬೈಕ್‌ನಲ್ಲಿ ಬಿರುಮಲೆ ಬೆಟ್ಟಕ್ಕೆ ತೆರಳಿ, ಕುಳಿತುಕೊಂಡಿದ್ದರು. ಆ ವೇಳೆ ಅಪರಿಚಿತ ಇಬ್ಬರು ಬಾಲಕ ಮತ್ತು ಬಾಲಕಿಯನ್ನು ತಡೆದು ಅವಾಚ್ಯವಾಗಿ ನಿಂದಿಸಿದ್ದಾರೆ. ನಿಮ್ಮ ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಹಾಕುತ್ತೇವೆ ಎಂದು ಬೆದರಿಕೆ ಹಾಕಿದ್ದರು ಎಂದು ಬಾಲಕನ ತಂದೆ ಪುತ್ತೂರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಶೋಷಿತರ ಸಮಾವೇಶ ಜಾತೀಯತೆಯಲ್ಲ

‘ಭಕ್ತರ ಭಂಡಾರದ ಕುಟೀರ’ ಉದ್ಘಾಟಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಎಲ್ಲ ವರ್ಗದವರಿಗೂ ಸಾಮಾಜಿಕ ನ್ಯಾಯ ಕೊಡಿಸುವುದು ನನ್ನ ಧರ್ಮ
- ಶಿಕ್ಷಣ, ಸಂಘಟನೆ ಮತ್ತು ಹೋರಾಟ ಅತ್ಯಂತ ಅವಶ್ಯ
- ಶೋಷಿತ ಸಮುದಾಗಳ ಏಳಿಗೆಗೆ ನೆರವಾಗಿ: ಸಿ.ಎಂ

ಬೆಂಗಳೂರು: ‘ಪ್ರಬಲ ಜಾತಿಗಳು ಜಾತಿ ಸಮಾವೇಶ ಮಾಡಿದರೆ, ಅದು ಜಾತೀಯತೆ. ಶೋಷಿತರು ಜಾತಿ ಸಮಾವೇಶ ಮಾಡಿದರೆ, ಜಾತೀಯತೆಯ ಪ್ರತಿಪಾದನೆಯಲ್ಲ ಎಂದು ರಾಮ ಮನೋಹರ್ ಲೋಹಿಯಾ ಅವರು ಪ್ರತಿಪಾದಿಸುತ್ತಿದ್ದರು. ನಾನೂ ಇದನ್ನೇ ಹೇಳುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ ಹೇಳಿದರು.

ನಗರದ ಕೇತೋಹಳ್ಳಿಯಲ್ಲಿ ಕಾಗಿನೆಲೆ ಮಹಾ ಸಂಸ್ಥಾನದ ಕನಕ ಗುರು ಪೀಠದ ‘ಭಕ್ತರ ಭಂಡಾರದ ಕುಟೀರ’ವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಸಿದ್ದರಾಮಯ್ಯ ತಾನು ಜಾತ್ಯಾತೀತ ಎಂದು ಹೇಳಿಕೊಳ್ಳುತ್ತಾರೆ. ಆದರೆ ಜಾತಿ ಸಮಾವೇಶ ನಡೆಸುತ್ತಾರೆ ಎಂದು ವಿರೋಧ ಪಕ್ಷದವರು ಟೀಕಿಸುತ್ತಿರುತ್ತಾರೆ. ಆದರೆ ಶೋಷಿತ ಸಮುದಾಯಗಳು ಜಾತಿ ಸಮಾವೇಶ ಮಾಡುವುದು ಈ ಹೊತ್ತಿನ ತುರ್ತು’ ಎಂದು ಅವರು ಹೇಳಿದರು.

‘ಶೋಷಿತ ಸಮುದಾಯಗಳು ಶಿಕ್ಷಣ, ಸಂಘಟನೆ ಮತ್ತು ಹೋರಾಟದಿಂದ ಮಾತ್ರವೇ ಸಮಾನತೆ ಪಡೆಯಲು ಸಾಧ್ಯ ಎಂದು ಬಾಬಾಸಾಹೇಬ್ ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದರು. ಈಗ ಶೋಷಿತ ಸಮುದಾಯದವರು ಸಂಘಟಿತರಾಗಿ ಸಮಾವೇಶ ನಡೆಸಬೇಕು’ ಎಂದರು.

‘ಎಲ್ಲ ಜಾತಿ, ಧರ್ಮ, ವರ್ಗದವರಿಗೂ ಸಾಮಾಜಿಕ ನ್ಯಾಯ ಕೊಡಿಸುವುದು ನನ್ನ ಧರ್ಮ. ಅದನ್ನು ಮಾಡಿದರೆ ಹೊಟ್ಟೆ ಉರಿ ಏಕೆ? ಬ್ರಾಹ್ಮಣ ವರ್ಗದ ಬಡವ ಬಂದರೆ ಸ್ವಾಮಿ ನಮಸ್ಕಾರ ಎಂದು ದಲಿತರು ಹೇಳುತ್ತಾರೆ. ಅದೇ ದಲಿತ ವರ್ಗದ ಶ್ರೀಮಂತ, ವಿದ್ಯಾವಂತ, ಉದ್ಯೋಗವಂತ ವ್ಯಕ್ತಿ ಕಂಡಾಗ ಏನೋ ಎಂಬುದಾಗಿ ಕರೆಯುತ್ತಾರೆ. ಇಂದಿಗೂ ಜಾತೀಯತೆ, ಅಸಮಾನತೆ, ವರ್ಗ ತಾರತಮ್ಯ ಇದ್ದೇ ಇದೆ. ಅದನ್ನು ಹೋಗಲಾಡಿಸಲು ಶಿಕ್ಷಣ, ಸಂಘಟನೆ ಮತ್ತು ಹೋರಾಟ ಅತ್ಯಂತ ಅವಶ್ಯ’ ಎಂದರು.

‘ಕಾಗಿನೆಲೆಯ ಕನಕ ಗುರು ಪೀಠವನ್ನು ಸ್ಥಾಪಿಸಿದಾಗ ಕುರುಬರು ಮಾತ್ರವಲ್ಲ, ಎಲ್ಲ ಶೋಷಿತ ಸಮುದಾಯಗಳ ಏಳಿಗೆಗೆ ಅದು ನೆರವಾಗಬೇಕು ಎಂಬ ಗುರಿ ಹಾಕಿಕೊಳ್ಳಲಾಗಿತ್ತು. 33 ವರ್ಷಗಳಲ್ಲಿ ಮಠವು ಅದನ್ನು ಸಾಧಿಸಿ ತೋರಿಸಿದೆ. ಮುಂದೆಯೂ ಅದೇ ದಾರಿಯಲ್ಲಿ ನಡೆಯಲಿದೆ’ ಎಂದರು.

ಕಾಗಿನೆಲೆ ಮಹಾ ಸಂಸ್ಥಾನದ ಕನಕ ಗುರುಪೀಠದ ಪೀಠಾಧ್ಯಕ್ಷ ನಿರಂಜನಾನಂದಪುರಿ ಸ್ವಾಮೀಜಿ, ‘ಮಠಗಳು ಸರ್ಕಾರದ ಮಠಗಳಾಗಬಾರದು, ಭಕ್ತರ ಮಠಗಳಾಗಬೇಕು. ಎಲ್ಲ ಸಮುದಾಯಗಳ ಮಠಗಳಿಂದ ಶೋಷಿತರನ್ನು ಮೇಲೆತ್ತುವ ಕೆಲಸವಾಗಬೇಕು. ಆಗ ಮಾತ್ರ ಕಾಗಿನೆಲೆ ಮಠವು ಎಲ್ಲರ ಜತೆಯಲ್ಲಿರುತ್ತದೆ. ಭಕ್ತರ ಭಂಡಾರದ ಕುಟೀರಕ್ಕೆ ದಲಿತ, ಒಕ್ಕಲಿಗ, ಲಿಂಗಾಯಿತ ಸಮಾಜದವರು ಕುರುಬರ ಮಠಕ್ಕೆ ದೇಣಿಗೆ ನೀಡಿದ್ದಾರೆ. ಈ ಮಠ ಸರ್ವರ ಮಠವಾಗಿದೆ’ ಎಂದರು.

ಭೋವಿ ಗುರು ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ‘ಆಗೊಂದು ಕಾಲವಿತ್ತು. ಬ್ರಾಹ್ಮಣರು ಓದಬೇಕು, ಕ್ಷತ್ರಿಯರು ದೇಶ ಆಳಬೇಕು, ವೈಶ್ಯರು ವ್ಯಾಪಾರ ಮಾಡಬೇಕು. ಶೂದ್ರರು, ದಲಿತರು, ಶೋಷಿತರು ಸೇವೆ ಮಾಡಲಿಕ್ಕಾಗಿ ಹುಟ್ಟಬೇಕು ಎನ್ನಲಾಗುತ್ತಿತ್ತು. ಇಂದು ಅದು ಬದಲಾಗಿದೆ’ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ‘ರಾಜಕೀಯದಲ್ಲಿ ಎಷ್ಟೇ ಭೇದ ಬಂದರೂ ಸಮಾಜದ ವಿಷಯದಲ್ಲಿ ಕುರುಬರು ಒಂದಾಗಿ ಮಠಗಳ ನಿರ್ಮಾಣ, ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಮುಂದಾಗಿ ಎಲ್ಲ ಜಾತಿ, ವರ್ಗದವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವ ಕೆಲಸವನ್ನು ಮಾಡಲಾಗುತ್ತಿದೆ. ಇದಕ್ಕೆ ಕಾಗಿನೆಲೆ ಮಠವು ಕೈಜೋಡಿಸಿದೆ’ ಎಂದರು.

ಕುಂಚಿಟಿಗರ ಮಠದ ಶಾಂತವೀರ ಸ್ವಾಮೀಜಿ, ಕಾಗಿನೆಲೆ ಹೊಸದುರ್ಗ ಪೀಠಾಧ್ಯಕ್ಷ ಈಶ್ವರಾನಂದ ಸ್ವಾಮೀಜಿ, ಸಚಿವ ಬೈರತಿ ಸುರೇಶ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ಕೇತೋಹಳ್ಳಿಯಲ್ಲಿ ನಿರ್ಮಿಸಲಾಗಿರುವ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠದ ‘ಭಕ್ತರ ಭಂಡಾರದ ಕುಟೀರ’ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಲೋಕಾರ್ಪಣೆ ಮಾಡಿದರು. ಇಮ್ಮಡಿ ಸಿದ್ದರಾಮೇಶ್ವರಸ್ವಾಮೀಜಿ,ಈಶ್ವರಾನಂದಪುರಿ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ಶಾಂತವೀರಸ್ವಾಮೀಜಿ, ಎಚ್.ಎಂ.ರೇವಣ್ಣ ಮತ್ತಿತರರು ಹಾಜರಿದ್ದರು

‘ಎಲ್ಲ ಮಠಗಳಿಗೆ ಜಮೀನು ನೀಡಲು ಕ್ರಮ’

‘ಕೇತೋಹಳ್ಳಿ ಸಮೀಪ ಸರ್ಕಾರದ 80 ಎಕರೆಯಷ್ಟು ಜಮೀನು ಇದೆ. ಹಿಂದುಳಿದ ಸಮುದಾಯಗಳ ಎಲ್ಲ ಮಠಗಳಿಗೆ ಇಲ್ಲಿ ಜಮೀನು ನೀಡಲಾಗುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಹಿಂದುಳಿದ ಸಮುದಾಯಗಳ ಮಠಗಳ ಸ್ವಾಮೀಜಿಗಳು ಈ ಹಿಂದೆ ಭೇಟಿ ಮಾಡಿ, ಅನುದಾನ ಒದಗಿಸುವಂತೆ ಕೋರಿದ್ದರು. ಅದನ್ನು ಪರಿಶೀಲಿಸಿ, ಅನುದಾನ ಒದಿಸುವ ಬಗ್ಗೆ ಯೋಚಿಸಲಾಗಿದೆ. ಸಂಪುಟ ಸಭೆಯಲ್ಲಿ ಚರ್ಚಿಸಿ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದರು.

‘ಕುರುಬರ ಸಮುದಾಯಕ್ಕೆ ಸಿದ್ದರಾಮಯ್ಯ ಏನೂ ಮಾಡಿಲ್ಲ ಎಂಬ ಆರೋಪ ಇದೆ. ಮೈಸೂರಿನ ಯಾಂದಳ್ಳಿಯಲ್ಲಿ ಮಠಕ್ಕೆ 12 ಎಕರೆ ಜಮೀನು ಮಂಜೂರು ಮಾಡಿಸಿದ್ದೆ. ಬನಶಂಕರಿಯಲ್ಲಿ ಕಾಲೇಜು ಆರಂಭಿಸಿದ್ದೇವೆ. ಅಲ್ಲಿ 150 ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಲು ವಿದ್ಯಾರ್ಥಿನಿಲಯ ನಿರ್ಮಿಸಲಾಗುತ್ತಿದೆ. ಗಾಂಧಿ ನಗರದಲ್ಲಿರುವ ಪ್ರದೇಶ ಕುರುಬರ ಸಂಘದ ಕಟ್ಟಡವನ್ನು ಕೆಡವಿ, ₹34 ಕೋಟಿಯಲ್ಲಿ ಹೊಸ ಕಟ್ಟಡ ನಿರ್ಮಿಸಲಾಗುತ್ತದೆ’ ಎಂದರು.

‘ಜವಾಬ್ದಾರಿ ಕೊಟ್ಟಾಗ ಓಡಿ ಹೋಗಬೇಕೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಐಸಿಸಿ ಒಬಿಸಿ ಸಮಿತಿ ಅಧ್ಯಕ್ಷರಾಗಿ ನನ್ನನ್ನು ನೇಮಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಜವಾಬ್ದಾರಿ ಕೊಟ್ಟಾಗ ಬಿಟ್ಟು ಓಡಿ ಹೋಗಬೇಕೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಎಐಸಿಸಿ ಒಬಿಸಿ ವಿಭಾಗದ ಅಧ್ಯಕ್ಷರು ರಾಜ್ಯದಲ್ಲಿ ಸಭೆ ಆಯೋಜಿಸುವಂತೆ ಹೇಳಿರುವುದನ್ನು ಬಿ.ಕೆ. ಹರಿಪ್ರಸಾದ್ ಅವರು ಪತ್ರ ಬರೆದು ತಿಳಿಸಿದ್ದರು. ಆ ಸಭೆಯನ್ನು ಇದೇ 15ಕ್ಕೆ ಮಾಡಲು ವ್ಯವಸ್ಥೆ ಮಾಡಿದ್ದೇನೆ. ಎಐಸಿಸಿ ಒಬಿಸಿ ಸಮಿತಿ ಅಧ್ಯಕ್ಷರಾಗಿ ನೇಮಿಸಿರುವ ಬಗ್ಗೆ ಹೈಕಮಾಂಡ್ ಬಳಿ ಮಾತನಾಡುತ್ತೇನೆ’ ಎಂದರು.

ಸಿದ್ದರಾಮಯ್ಯ ಅವರಿಗೆ ಇಲ್ಲಿಯೇ ಸಂಭಾಳಿಸಲು ಸಾಧ್ಯವಾಗುತ್ತಿಲ್ಲ. ಅವರಿಗೆ ದಿಢೀರ್‌ನೇ ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿಯ ನೇತೃತ್ವ ವಹಿಸಿ ದೆಹಲಿಗೆ ಕರೆಸಿಕೊಳ್ಳುವ ತಂತ್ರ ಅವರ ಪಕ್ಷದ ಹೈಕಮಾಂಡ್ ನಡೆಸಿದೆ
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಕಾಂಗ್ರೆಸ್ ಹೈಕಮಾಂಡ್ ತಂತ್ರ ಹೆಣೆದಿದ್ದು, ಅದಕ್ಕೆಂದೇ ಅವರನ್ನು ಎಐಸಿಸಿ ಅಹಿಂದ್ ಸಲಹಾ ಸಮಿತಿ ಸದಸ್ಯರನ್ನಾಗಿ ಮಾಡಲಾಗಿದೆ
ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

ಸಿದ್ದರಾಮಯ್ಯ ಅವರನ್ನು ರಾಷ್ಟ್ರ ರಾಜಕಾರಣಕ್ಕೆ ಕಳುಹಿಸಲು ಕಾಂಗ್ರೆಸ್‌ನಲ್ಲಿ ಈಗಾಗಲೇ ವೇದಿಕೆ ಸಿದ್ಧವಾಗಿದ್ದು, ಅವರು ದೆಹಲಿಗೆ ವರ್ಗಾವಣೆ ಆಗುವುದು ನಿಶ್ಚಿತ. ಮುಖ್ಯಮಂತ್ರಿ ಸ್ಥಾನ ಪಲ್ಲಟವಾಗುತ್ತದೆ
ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಜವಾಬ್ದಾರಿಯನ್ನು ಸ್ವೀಕರಿಸುತ್ತೀರಾ’ ಎಂಬ ಪ್ರಶ್ನೆಗೆ, ‘ಜವಾಬ್ದಾರಿ ಕೊಟ್ಟಾಗ ಬಿಟ್ಟು ಓಡಿ ಹೋಗಬೇಕೇ? ನಾನೇನು ಅದನ್ನು ಕೇಳಿಲ್ಲ. ಅವರು ಘೋಷಣೆ ಮಾಡಿದ್ದಾರೆ. ಹೈಕಮಾಂಡ್ ಬಳಿ ಮಾತನಾಡುತ್ತೇನೆ. ಇದು ರಾಷ್ಟ್ರ ರಾಜಕಾರಣ ಅಲ್ಲ. ಯಾವ ಹುದ್ದೆ ಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ’ ಎಂದರು.

‘ರಸ್ತೆ ಅಭಿವೃದ್ಧಿ ಆಗಬೇಕಾದರೆ ಗ್ಯಾರಂಟಿ ತೆಗೆದುಕೊಳ್ಳುವುದು ಬಿಡಿ’ ಎಂಬ ಶಾಸಕ ಬಸವರಾಜ ರಾಯರಡ್ಡಿ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಗ್ಯಾರಂಟಿ ಯೋಜನೆಯನ್ನು ಬದಲಿಸುವ ಪ್ರಶ್ನೆಯೇ ಇಲ್ಲ. ಎಲ್ಲ ಜಾತಿಯ ಬಡವರಿಗೆ ಮಾಡಿರುವಂಥ ಕಾರ್ಯಕ್ರಮ. ಆರ್ಥಿಕ, ಸಾಮಾಜಿಕ ಶಕ್ತಿ ತುಂಬುವ ಕಾರ್ಯಕ್ರಮ. ಪ್ರತಿ ಶಾಸಕರಿಗೆ ರಸ್ತೆ, ಸೇತುವೆ ಕಾಮಗಾರಿಗಳಿಗಾಗಿ ಈ ಬಾರಿ ಸ್ವಲ್ಪ ಹಣ ಕೊಡುತ್ತಿದ್ದೇವೆ. ಬಿಜೆಪಿ, ಜೆಡಿಎಸ್ ಶಾಸಕರಿಗೂ ಕೊಡುತ್ತೇವೆ’ ಎಂದರು.

ಲಂಚಕ್ಕೆ ಬೇಡಿಕೆ ಪಿಡಿಒ ಅಮಾನತು

ಪ್ರಜಾವಾಣಿ ವಾರ್ತೆ

ಕಾರಟಗಿ (ಕೊಪ್ಪಳ ಜಿಲ್ಲೆ): ಲಂಚಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ತಾಲ್ಲೂಕಿನ ಮೈಲಾಪುರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಯ್ಯದ್ ಜಿಲಾನ್ ಬಾಷಾ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಆದೇಶ ಹೊರಡಿಸಿದ್ದಾರೆ.

ಮುಗಿದ ಕಾಮಗಾರಿಗೆ ಎನ್‌ಒಸಿ ನೀಡಲು ಗುತ್ತಿಗೆದಾರರಿಗೆ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇಲಾಖಾ ವಿಚಾರಣೆ ಕಾಯ್ದಿರಿಸಿ ಜು.4ರಂದು ಅಮಾನತು ಮಾಡಿದ್ದಾರೆ.



ದಾವಣಗೆರೆಯಲ್ಲಿ ನಡೆದ ‘ಸಿದ್ಧ ಅಗ್ನಿಹೋತ್ರ’ ಸಮಾರಂಭವನ್ನು ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಶಾಸಕ ಬಿ.ಪಿ.ಹರೀಶ್, ಹೈಕೋರ್ಟ್ ನ್ಯಾಯಮೂರ್ತಿ ಹಂಚಾಟೆ ಸಂಜೀವಕುಮಾರ್, ಮಾಜಿ ಮೇಯರ್ ಎಸ್.ಟಿ.ವೀರೇಶ್, ಉದ್ಯಮಿ ಜಗದೀಶ ನಾಯಕ ಉಪಸ್ಥಿತರಿದ್ದರು

‘ಅಗ್ನಿಹೋತ್ರ ಹೋಮ ವೈಜ್ಞಾನಿಕ ಪೂಜೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಅಗ್ನಿಹೋತ್ರ ಹೋಮ ಕೇವಲ ಧಾರ್ಮಿಕ ಕ್ರಿಯೆಯಲ್ಲ, ಇದೊಂದು ವೈಜ್ಞಾನಿಕ ಪ್ರಕ್ರಿಯೆ. ಪ್ರಾಣವಾಯು ಆಮ್ಲಜನಕ ಬಿಡುಗಡೆ ಮಾಡುವ ಶಕ್ತಿಯೂ ಇದಕ್ಕಿದೆ. ಸಂವಿಧಾನದ ಪೀಠಿಕೆಯ ಮೌಲ್ಯಗಳನ್ನು ಅನುಷ್ಠಾನಗೊಳಿಸಲು ಇದೊಂದು ಉತ್ತಮ ಮಾರ್ಗವೂ ಹೌದು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಹಂಚಾಟೆ ಸಂಜೀವಕುಮಾರ್ ಅಭಿಪ್ರಾಯಪಟ್ಟರು.

ಹರಿಹರ ತಾಲ್ಲೂಕಿನ ಸಿದ್ಧಲಿಂಗೇಶ್ವರ ಗದ್ದುಗೆ ಮಠದ ವತಿಯಿಂದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಇಲ್ಲಿನ ತ್ರಿಶೂಲ್ ಕಲಾಭವನದಲ್ಲಿ ಭಾನುವಾರ ಏರ್ಪಡಿಸಿದ್ದ ‘ಸಿದ್ಧ ಅಗ್ನಿಹೋತ್ರ’ ಸಮಾರಂಭದಲ್ಲಿ ಕಿರುಹೊತ್ತಿಗೆ ಬಿಡುಗಡೆ ಮಾಡಿ ಮಾತನಾಡಿದರು.

‘ಸಂವಿಧಾನದ ಪೀಠಿಕೆಯಲ್ಲಿರುವ ಸಹೋದರತ್ವ, ಅಖಂಡತೆ, ಭ್ರಾತೃತ್ವದ ಮೌಲ್ಯಗಳನ್ನು ಮೂಡಿಸಲು ಅಗ್ನಿಹೋತ್ರ ಪರಿಣಾಮಕಾರಿ. ಸಿಟ್ಟು, ದ್ವೇಷಕ್ಕೆ ಇದು ಅವಕಾಶ ನೀಡುವುದಿಲ್ಲ. ಆಗ ಎಲ್ಲರೂ ನಮ್ಮವರಾಗಿ, ಸಹೋದರತ್ವದ ಭಾವನೆ ಮೂಡುತ್ತದೆ. ಸಂವಿಧಾನದ ಜೊತೆ ಅಗ್ನಿಹೋತ್ರವನ್ನು ಹೇಗೆ ಸಮೀಕರಿಸ ಬಹುದು ಎಂಬುದರಕುರಿತು ಆಲೋಚಿಸುತ್ತಿದ್ದೇನೆ’ ಎಂದರು.

ಜಾಕ್‌ಪಾಟ್ ಸರ್ಕಾರವಲ್ಲ– ಕಾಂಗ್ರೆಸ್

ಬೆಂಗಳೂರು: ‘ಅಮಾವಾಸ್ಯೆಗೊಬ್ಬ ಹುಣ್ಣಿಮೆಗೊಬ್ಬ ಮುಖ್ಯಮಂತ್ರಿ ಬದಲಿಸಲು ಇದು ಆಪರೇಷನ್ ಕಮಲ, ಕುದುರೆ ವ್ಯಾಪಾರದ ಜಾಕ್‌ಪಾಟ್ ಸರ್ಕಾರವಲ್ಲ’ ಎಂದು ರಾಜ್ಯ ಕಾಂಗ್ರೆಸ್ ಹೇಳಿಕೊಂಡಿದೆ.

ಈ ಬಗ್ಗೆ ಅಧಿಕೃತ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಪೋಸ್ಟ್ ಮಾಡಿರುವ ರಾಜ್ಯ ಕಾಂಗ್ರೆಸ್, ‘ನಮ್ಮದು ಪೂರ್ಣ ಬಹುಮತದ, ಜನಾಶೀರ್ವಾದ ಪಡೆದ ಗ್ಯಾರಂಟಿ ಸರ್ಕಾರ’ ಎಂದು ಹೇಳಿದೆ.

ಬದಲಾವಣೆ ಸೆಪ್ಟೆಂಬರ್‌ನಲ್ಲೇ ಹೇಳುತ್ತೇನೆ– ರಾಜಣ್ಣ

ಹಾಸನ: ‘ರಾಜ್ಯ ರಾಜಕೀಯ ಬದಲಾವಣೆ ಬಗ್ಗೆ ಸೆಪ್ಟೆಂಬರ್‌ನಲ್ಲಿ ಹೇಳುವುದಾಗಿ ತಿಳಿಸಿದ್ದೇನೆ. ಈಗಿನ್ನೂ ಜುಲೈನಲ್ಲಿದ್ದೇವೆ, ಅದೆಲ್ಲಾ ಈಗಲೇ ಹೇಳಿಬಿಟ್ಟರೆ ನಿಮಗೆ ಆಸಕ್ತಿ ಹೋಗುತ್ತದೆ. ಇನ್ನೂ ಎರಡು ತಿಂಗಳಿದೆ. ಅಲ್ಲಿವರೆಗೆ ದೇಶವನ್ನೇ ತಲೆಕೆಳಗೆ ಮಾಡಬಹುದು ಬನ್ನಿ’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜಕಾರಣಕ್ಕೆ ಏಕೆ ತಲೆ ಕಡೆಸಿಕೊಳ್ಳುತ್ತೀರಾ? ಜನರಿಗೆ ಒಳ್ಳೆಯದಾಗುವುದಿದ್ದರೆ ಕೇಳಿ’ ಎಂದರು.

‘ಬಹುತ್ವ ನಾಶಗೊಳಿಸುತ್ತಿರುವ ಪ್ರಧಾನಿ’

‘ಮೈಸೂರು ಸಾಹಿತ್ಯ ಸಂಭ್ರಮ’ದಲ್ಲಿ ಕೇಂದ್ರದ ಮಾಜಿ ಸಚಿವ ಮಣಿಶಂಕರ್ ಅಯ್ಯರ್

• ಮೋಹನ್ ಕುಮಾರ ಸಿ.

ಮೈಸೂರು: ‘ಕಳೆದ 11 ವರ್ಷದಿಂದ ಅಧಿಕಾರದಲ್ಲಿರುವ ನರೇಂದ್ರ ಮೋದಿ ದೇಶವನ್ನು ಅರಾಜಕತೆಯತ್ತ ಕೊಂಡೊಯ್ಯುತ್ತಿರುವ ಅತಿ ಕೆಟ್ಟ ಪ್ರಧಾನಿ. ಬಹುತ್ವವನ್ನು ನಾವು ಕಾಪಾಡದಿದ್ದರೆ ದೇಶದ ಭವಿಷ್ಯವೇ ಸರ್ವನಾಶವಾಗಲಿದೆ’ ಎಂದು ಕೇಂದ್ರದ ಮಾಜಿ ಸಚಿವ ಮಣಿಶಂಕರ್ ಅಯ್ಯರ್ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ‘ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್’ ಹಾಗೂ ‘ಮೈಸೂರು ಬುಕ್ಸ್ ಕ್ಲಬ್ಸ್’ ಆಯೋಜಿಸಿದ್ದ 9ನೇ ಆವೃತ್ತಿಯ ‘ಮೈಸೂರು ಸಾಹಿತ್ಯ ಸಂಭ್ರಮ’ದ ಭಾನುವಾರದ ಗೋಷ್ಠಿಯಲ್ಲಿ ಮಾತನಾಡಿದರು.


‘ಮೋದಿ ದೇಶದ ಬಹುತ್ವ ನಾಶಪಡಿಸುತ್ತಿದ್ದಾರೆ’ ಎಂದು ದೂರಿದರು.

‘ದೇಶದ 3ನೇ ಒಂದರಷ್ಟು ಜನರು ಮಾತ್ರ ಮೋದಿ ಅವರಿಗೆ ಮತ ನೀಡಿದ್ದಾರೆ. ಶೇ 66ರಷ್ಟು, ಅಂದರೆ ಹಿಂದೂಗಳ ಅರ್ಧದಷ್ಟು ಜನರು ಒಂದು ಧರ್ಮ, ಒಂದು ಭಾಷೆ, ಒಂದು ದೇಶವನ್ನು ನಿರ್ಮಿಸುವವರನ್ನು ತಿರಸ್ಕರಿಸಿದ್ದಾರೆ’ ಎಂದು ತಿಳಿಸಿದರು.

‘ಈಗಿನ ಬಹುತ್ವದ ಭಾರತ ಉಳಿಸಲು ದೇಶದ ಜನರು ವೈವಿಧ್ಯಮಯ ಭಾಷೆ, ಧರ್ಮ, ಸಂಸ್ಕೃತಿಯನ್ನು ಪರಸ್ಪರ ಗೌರವಿಸಬೇಕು. ಕೋಮುವಾದದ ಹಾವನ್ನು ಮನೆಯೊಳಗೆ ಬಿಟ್ಟುಕೊಳ್ಳಬಾರದು’ ಎಂದು ಎಚ್ಚರಿಸಿದರು.

‘ಕಳೆದ 700 ವರ್ಷಗಳಿಂದ ಹಿಂದೂ– ಮುಸ್ಲಿಮರು ಜೊತೆಯಲ್ಲಿಯೇ ಬದುಕಿದ್ದಾರೆ. ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಒಡೆಯರ್ ಅವರ ಜೊತೆಗೇ ಹೈದರಾಲಿ, ಟಿಪ್ಪು, ಮಿರ್ಜಾ ಇಸ್ಮಾಯಿಲ್ ಜನರ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ದೇಶವು ಹಿಂದೂ ಧರ್ಮೀಯರಿಗೆ ಮಾತ್ರ ಸೇರಿದ್ದಲ್ಲ. 20 ಕೋಟಿಯಷ್ಟಿರುವ ಮುಸ್ಲಿಮರು, ಆದಿವಾಸಿಗಳು, ಕ್ರೈಸ್ತರು, ಸಿಖ್ಖರಿಗೂ ಸೇರಿದ್ದು’ ಎಂದರು.

ಸಾಹಿತ್ಯ ಸಂಭ್ರಮಕ್ಕೆ ತೆರೆ: ಎರಡು ದಿನ ನಡೆದ ‘ಮೈಸೂರು ಸಾಹಿತ್ಯ ಸಂಭ್ರಮ’ಕ್ಕೆ ವೈಭವದ ತೆರೆ ಬಿತ್ತು. ಲೋಕೇಶ್ ಮೊಸಳೆ, ಸ್ಟೀಫನ್ ಆಲ್ಟರ್ ಅವರ ಕಾಡಿನ ಕಥೆಗಳು, ನಾಗತಿಹಳ್ಳಿ ಚಂದ್ರಶೇಖರ್ ಅವರ ಸಿನಿಮಾ– ಹಳ್ಳಿ ಹಂಬಲ, ವನಮಾಲಾ ವಿಶ್ವನಾಥ್, ಕೆ.ಎನ್.ಗಣೇಶಯ್ಯ, ಪ್ರೊ. ಬಿ.ಎನ್.ಶ್ರೀರಾಮ, ಅಬ್ದುಲ್ ರಶೀದ್ ಅವರ ಮಾತುಗಳಿಗೆ ಪ್ರೇಕ್ಷಕರು ಕಿವಿಯಾದರು.



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಮಣಿಶಂಕರ್ ಅಯ್ಯರ್ ಮಾತನಾಡಿದರು. ಅರುಣ್ ರಾಮನ್ ಭಾಗವಹಿಸಿದ್ದರು– ಪ್ರಜಾವಾಣಿ ಚಿತ್ರ

‘ತುರ್ತು ಪರಿಸ್ಥಿತಿ ಕ್ಷಮಿಸಲಾಗದು’

‘ಭಾರತ ಕಂಡ ಶ್ರೇಷ್ಠ ಪ್ರಧಾನಿಗಳ ಪಟ್ಟಿಯಲ್ಲಿ ಯಾರಿಗೆ ಯಾವ ಸ್ಥಾನ ಕೊಡುತ್ತೀರಿ’ ಎಂಬ ಲೇಖಕ ಅರುಣ್ ರಾಮನ್ ಪ್ರಶ್ನೆಗೆ ಉತ್ತರಿಸಿದ ಮಣಿಶಂಕರ್, ‘ಜವಾಹರಲಾಲ್ ನೆಹರೂ ಶ್ರೇಷ್ಠ ಪ್ರಧಾನಿ, ರಾಜೀವ್‌ಗಾಂಧಿ, ಲಾಲ್‌ಬಹದ್ದೂರ್ ಶಾಸ್ತ್ರಿ, ನರಸಿಂಹರಾವ್, ವಾಜಪೇಯಿ, ಐ.ಕೆ.ಗುಜ್ರಾಲ್ ಅವರಿಗೆ ನಂತರದ ಸ್ಥಾನ ಕೊಡುವೆ’ ಎಂದರು.

‘ತುರ್ತುಪರಿಸ್ಥಿತಿ ಕಾರಣ ಇಂದಿರಾ ಗಾಂಧಿ ಅವರನ್ನು ಕ್ಷಮಿಸಲಾಗದು. ನರಸಿಂಹರಾವ್ ಅವರು ಅರ್ಧ ಸಿಂಹ, ಅರ್ಧ ಮನುಷ್ಯ. ಆರ್ಥಿಕ ನೀತಿಯಲ್ಲಿ ಸಿಂಹವಾದರೆ, ಈಗ ದೇಶ ಆಳುತ್ತಿರುವವರು ಬರುವುದಕ್ಕೆ ಬಾಬ್ರಿ ಮಸೀದಿ ಧ್ವಂಸ ಮಾಡಲು ಅವಕಾಶ ನೀಡಿದರು’ ಎಂದರು.

ಪಂಢರಪುರದಲ್ಲಿ ಆಷಾಢ ಏಕಾದಶಿ ಸಂಭ್ರಮ; ಮುಖ್ಯಮಂತ್ರಿಯಿಂದ ಪ್ರಥಮ ಪೂಜೆ

ವಿಠಲನ ಸನ್ನಿಧಿಗೆ ಹರಿದು ಬಂದ ಭಕ್ತ ಸಾಗರ

• ಅಲ್ಲಮಪ್ರಭು ಕರ್ಜಗಿ

ಪಂಢರಪುರ(ಮಹಾರಾಷ್ಟ್ರ): ಆಷಾಢ ಏಕಾದಶಿ ಪ್ರಯುಕ್ತ ವಿಠಲನ ದರ್ಶನಕ್ಕೆ ಭಾನುವಾರ ಭಕ್ತ ಸಾಗರವೇ ಹರಿದು ಬಂತು. ಭೀಮೆಯ ತಟದಲ್ಲಿರುವ ಪಂಢರಪುರದ ಎಲ್ಲೆಡೆ ವಿಠಲನ ಸಂಕೀರ್ತನೆ, ಭಜನೆ ಅನುರಣಿಸಿತು.

ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ, ತೆಲಂಗಾಣ ಸೇರಿ ದೇಶದ ಮೂಲೆಮೂಲೆಯಿಂದ ಲಕ್ಷಾಂತರ ಭಕ್ತರು ಪಾದಯಾತ್ರೆ ಮೂಲಕ ಬಂದರು. ವಿಠಲ, ರುಕ್ಮಿಣಿಯರ ದರ್ಶನ ಪಡೆದು ಪುನೀತರಾದರು.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ದಂಪತಿ ಬೆಳಿಗ್ಗೆಯೇ ಆಷಾಢ ಏಕಾದಶಿಯ ಸರ್ಕಾರಿ ಮಹಾಪೂಜೆ ಮತ್ತು ಕಾಕಡಾರತಿ ಸಲ್ಲಿಸಿದರು.

‘ಅನ್ನದಾತನಿಗೆ ಸುಖಃ, ಸಮೃದ್ಧಿ ನೀಡು, ರಾಜ್ಯದ ಸಂಕಟವನ್ನು ದೂರ ಮಾಡು ಸರ್ವರನ್ನು ಸನ್ಮಾರ್ಗದ ದಾರಿಯಲ್ಲಿ ಸಾಗುವಂತೆ ಸದ್ಬುದ್ಧಿ ನೀಡು’ ಎಂದು ಮುಖ್ಯಮಂತ್ರಿ ಫಡಣವೀಸ್ ಪ್ರಾರ್ಥಿಸಿದರು.

ಭಾನುವಾರ ನಸುಕಿನಿಂದಲೇ ವಿಠಲ, ರುಕ್ಮಿಣಿ ದೇವಾಲಯದ ಮುಂಭಾಗದಲ್ಲಿ ಹರಿಯುವ ಚಂದ್ರಭಾಗ(ಭೀಮಾ) ನದಿಯಲ್ಲಿ ಭಕ್ತರು ಪುಣ್ಯ ಸ್ನಾನ ಮಾಡಿದರು. ನದಿಗೆ ಪೂಜೆ ಸಲ್ಲಿಸಿ, ಆರತಿ ತೇಲಿ ಬಿಟ್ಟರು.

ಸಂತ ಜ್ಞಾನೇಶ್ವರ, ಏಕನಾಥ, ತುಕಾರಾಮ, ಪುಂಡಲೀಕ, ನಾಮದೇವ, ದಾಮಾಜಿ, ಮೀರಾಬಾಯಿ, ಮುಕ್ತಾಬಾಯಿ, ಕಬೀರದಾಸ, ರಾಮದಾಸ, ತುಳಸಿದಾಸ, ಸೂರದಾಸರ ಅಭಂಗಗಳನ್ನು ವಾರಕರಿ ರಾಗದಿಂದ ಹಾಡುತ್ತಾ ಕುಣಿಯುತ್ತ, ವಿಠಲ... ವಿಠಲ..ವಿಠಲ.. ಎಂದು ಭಜನೆ, ನಾಮ ಸಂಕೀರ್ತನೆ ನಡೆದವು.

ದಿಂಡಿಯಾತ್ರೆಯಲ್ಲಿ (ಪಾದಯಾತ್ರೆ) ಬಂದ ವಾರಕಾರಿಗಳು ವಿಠಲನ ನಾಮಸ್ಮರಣೆಯಲ್ಲಿ ಹೆಜ್ಜೆ ಹಾಕಿದರು. ಪಾದಯಾತ್ರಿ ವಾರಕಾರಿಗಳಿಗೆ ನಾಲ್ಕೂ ದಿಕ್ಕಿನಲ್ಲಿ ಊಟೋಪಹಾರದ ವ್ಯವಸ್ಥೆ ಇತ್ತು.



ಪಂಢರಪುರದಲ್ಲಿ ಆಷಾಢ ಏಕಾದಶಿ ಅಂಗವಾಗಿ ಚಂದ್ರಭಾಗಾ ನದಿಯಲ್ಲಿ ಲಕ್ಷಾಂತರ ಭಕ್ತರು ಪುಣ್ಯ ಸ್ನಾನ ಮಾಡಿದರು

ಅಕ್ಕಿ ಬೇಡ ಎಂದು ಹೇಳಿ, ರಸ್ತೆ ಮಾಡಿಸಿ ಕೊಡ್ತೀನಿ: ರಾಯರಡ್ಡಿ

ಪ್ರಜಾವಾಣಿ ವಾರ್ತೆ



ಬಸವರಾಜ ರಾಯರಡ್ಡಿ

ಕೊಪ್ಪಳ: ’ಅಕ್ಕಿ ಬೇಡ, ಏನೂ ಬೇಡಎಂದು ನೀವು ಹೇಳಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ಕೊಟ್ಟು ಬಿಡುವೆ. ಅದೇ ಹಣದಲ್ಲಿ ನಿಮ್ಮೂರಿಗೆ ರಸ್ತೆ ಮಾಡಿಸಿಕೊಡುವೆ’ ಎಂದು ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಕುಕನೂರು ತಾಲ್ಲೂಕಿನ ರ‍್ಯಾವಣಕಿ ಗ್ರಾಮದಲ್ಲಿ ಶನಿವಾರ ನಡೆದ ಸರ್ಕಾರಿ ಶಾಲೆಯ ಕಾರ್ಯಕ್ರಮದಲ್ಲಿ ಮಾತನಾಡಿ ಗ್ರಾಮಸ್ಥರನ್ನು ಉದ್ದೇಶಿಸಿ ’ನಮ್ಮ ಜನ ಅಕ್ಕಿ ಬೇಡ ಎಂದಿದ್ದಾರೆ ಎಂದು ಸಿ.ಎಂ.ಗೆ ಹೇಳಲೇ’ ಎಂದು ಪ್ರಶ್ನಿಸಿದರು. ಅದಕ್ಕೆ ಜನರು ಬೇಡ ಎಂದರು.

‘ರಾಜ್ಯ ಸರ್ಕಾರದಿಂದ 1.24 ಕೋಟಿ ಮಹಿಳೆಯರಿಗೆ ತಲಾ ₹ 2000 ಕೊಡಲಾಗುತ್ತಿದೆ. ಇದಕ್ಕಾಗಿಯೇ ವಾರ್ಷಿಕ ₹ 30 ಸಾವಿರ ಕೋಟಿ ಖರ್ಚಾಗುತ್ತಿದೆ’ ಎಂದು ಹೇಳಿಕೆ ನೀಡಿದ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದೆ.

ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವ್ಯಕ್ತಿಯೊಬ್ಬರು ‘ಮಹಿಳೆಯರಿಗೆ ಮಾಸಿಕ ₹ 2000 ಕೊಡುತ್ತಿದ್ದೀರಿ. ನಮಗೆ ಹೊಲಕ್ಕೆ ಹೋಗಲು ಮೊದಲು ದಾರಿ ಮಾಡಿಕೊಡಿ’ ಎಂದರು.

ಹೇಳಿಲ್ಲ: ತಮ್ಮ ಹೇಳಿಕೆ ಬಗ್ಗೆ ಭಾನುವಾರ ಕೊಪ್ಪಳದಲ್ಲಿ ಪ್ರತಿಕ್ರಿಯಿಸಿದ ರಾಯರಡ್ಡಿ ಅವರು ‘ನಾನು ಆ ರೀತಿಯ ಹೇಳಿಕೆ ನೀಡಿಯೇ ಇಲ್ಲ. ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಒಂದಷ್ಟು ಕೆಲಸಗಳನ್ನು ಮಾಡಿಸಿಕೊಡಿ ಎಂದು ಬೇಡಿಕೆ ಇಟ್ಟಿದ್ದರು. ಅಕ್ಕಿಯನ್ನೂ ಕೊಟ್ಟಿದ್ದೇವೆ. ಅಭಿವೃದ್ಧಿ ಕೆಲಸವನ್ನೂ ಮಾಡಿ ಕೊಡುತ್ತೇನೆ ಎಂದು ಪ್ರತಿಕ್ರಿಯಿಸಿದೇನೆ’ ಎಂದರು.

ಬಸವರಾಜ ರಾಯರಡ್ಡಿ ಅವರ ಹೇಳಿಕೆ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಗೆ ಹಿಡಿದ ಕನ್ನಡಿ. ಸಿದ್ದರಾಮಯ್ಯ ಅವರೇ ರಾಯರಡ್ಡಿ ಮೂಲಕ ಇಂತಹ ಮಾತುಗಳನ್ನು ಹೇಳಿಸಿದ್ದಾರೆ
ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ವಿಗ್ರಹ ಕಿತ್ತ ಆರೋಪ: ಇಬ್ಬರ ಬಂಧನ

ಒಂದನೇ ಪುಟದಿಂದ...

‘ಬಡಾವಣೆಯಲ್ಲಿ ಕಟ್ಟಡ ನಿರ್ಮಿಸಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿ ಪಡೆದಿಲ್ಲ. ಪಾಲಿಕೆ ಆಯುಕ್ತರೊಂದಿಗೆ ಈ ಬಗ್ಗೆ ಚರ್ಚಿಸಲಾಗಿದೆ. ಸೋಮವಾರದೊಳಗೆ ಕಟ್ಟಡ ತೆರವುಗೊಳಿಸದಿದ್ದರೆ, ರಾಷ್ಟ್ರಭಕ್ತರ ಬಳಗದಿಂದ ತೆರವು ಕಾರ್ಯಾಚರಣೆ ಕೈಗೊಳ್ಳುವುದಾಗಿ ತಿಳಿಸಿದ್ದೇವೆ. ಆಯುಕ್ತರು ಅಗತ್ಯ ಕ್ರಮದ ಭರವಸೆ ನೀಡಿದ್ದಾರೆ’ ಎಂದು ಕೆ.ಎಸ್.ಈಶ್ವರಪ್ಪ ತಿಳಿಸಿದ್ದಾರೆ.

‘ರಾಜ್ಯ ಸರ್ಕಾರ ಅಲ್ಪಸಂಖ್ಯಾತರ ಓಲೈಕೆ ಮಾಡುತ್ತಿರುವುದೇ ಇಂತಹ ಗಲಾಟೆಗೆ ಕಾರಣ. ಕಾನೂನು ಸುವ್ಯವಸ್ಥೆ ಹಾಳಾದರೆ ಅದಕ್ಕೆ ಸರ್ಕಾರವೇ ಹೊಣೆ’
ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಡಾವಣೆಯಲ್ಲಿ ಎಲ್ಲ ಧರ್ಮದವರೂ ಸಹಬಾಳ್ವೆಯಿಂದ ಇದ್ದೇವೆ. ಗಲಾಟೆ, ಉದ್ವಿಗ್ನ ಪರಿಸ್ಥಿತಿ ಇಲ್ಲ.
ಮಹಮ್ಮದ್ ಮುಜೀಬ್ ರೆಹಮಾನ್,
ಬಂಗಾರಪ್ಪ ಬಡಾವಣೆ ನಿವಾಸಿ

ಸುದ್ದಿ 2 ನಿಮಿಷ

ಡಿಕೆಶಿಗೆ ಉನ್ನತ ಸ್ಥಾನ: ರಂಭಾಪುರಿ ಶ್ರೀ

ಕನಕಪುರ (ರಾಮನಗರ): ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಡಿ.ಕೆ.ಶಿವಕುಮಾರ್ ಹೆಚ್ಚು ಶಕ್ತಿ ತಂದುಕೊಟ್ಟಿದ್ದಾರೆ. ಅವರು ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಪಕ್ಷ ಅಧಿಕಾರಕ್ಕೆ ಬಂದಿದೆ. ಹಾಗಾಗಿ ಅವರಿಗೆ ಉನ್ನತ ಸ್ಥಾನ ಸಿಗಬೇಕು ಎಂದು ಬಾಳೆಹೊನ್ನೂರಿನ ರಂಭಾಪುರಿ ಮಠದ ವೀರಸೋಮೇಶ್ವರ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಬಿಜ್ಜಹಳ್ಳಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನ ಸಿಕ್ಕರೆ ಶಿವಕುಮಾರ್ ಅಧ್ಯಕ್ಷ ಸ್ಥಾನ ಬಿಟ್ಟು ಕೊಡುವುದರಲ್ಲಿ ಯಾವುದೇ ಸಂದೇಹ ಇಲ್ಲ. ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುವವರೆಗೂ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟುಕೊಡಿ ಎನ್ನಲು ಪಕ್ಷದ ಹೈಕಮಾಂಡ್‌ಗೆ ಶಕ್ತಿ ಬರುವುದಿಲ್ಲ ಎಂದರು.

ಉನ್ನತ ಸ್ಥಾನದ ವಿಷಯದಲ್ಲಿ ಶಿವಕುಮಾರ್ ಅವರ ಪ್ರಾರ್ಥನೆ ವಿಫಲವಾಗದು. ಜಾತಿ ಮತ್ತು ಧರ್ಮಗಳ ನಡುವೆ ಒಡಕುಂಟು ಮಾಡುವ ನಾಯಕರ ಬದಲು ಇಂತಹ ನಾಯಕರ ಅಗತ್ಯವಿದೆ. ಅವರನ್ನು ಉನ್ನತ ಸ್ಥಾನದಲ್ಲಿ ನೋಡುವ ಭಾಗ್ಯ ಜನರಿಗೆ ಸಿಗಲಿ ಎಂದು ಆಶೀಸಿದರು. ಎಂದು ತಿಳಿಸಿದರು.

ಪಕ್ಷ ಜಯ ಗಳಿಸಿದ ಬಳಿಕ ರಾಜ್ಯ ಮತ್ತು ರಾಷ್ಟ್ರೀಯ ನಾಯಕರ ಮುಂದೆ ನಡೆದ ಒಡಂಬಡಿಕೆಯಂತೆ ಡಿ.ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿದ್ದಾರೆ. ಆದರೆ, ಆ ಒಡಂಬಡಿಕೆ ಏನೆಂಬುದು ಶಿವಕುಮಾರ್, ಸಿದ್ದರಾಮಯ್ಯ ಹಾಗೂ ರಾಷ್ಟ್ರೀಯ ನಾಯಕರಿಗೆ ಮಾತ್ರ ಗೊತ್ತಿದೆ. ಅದರಂತೆ ನಡೆದುಕೊಂಡರೆ ರಾಜಕಾರಣಿಗಳಿಗೆ ಗೌರವ ಬರುತ್ತದೆ ಎಂದರು.



ಬಯಕೆ ತಪ್ಪಲ್ಲ: ‘ನಾನು ಮುಖ್ಯಮಂತ್ರಿಯಾಗಲಿ ಎಂದು ಜನ ಮತ್ತು ಮಠಾಧೀಶರು ಬಯಸುತ್ತಾರೆ. ಅದನ್ನು ತಪ್ಪು ಎಂದು ಹೇಳಲಾಗುವುದಿಲ್ಲ. ನಾವೆಲ್ಲರೂ ಪಕ್ಷದ ಶಿಸ್ತಿನ ಸಿಪಾಯಿಗಳು. ಪಕ್ಷ ಏನು ಹೇಳುತ್ತದೊ ಅದನ್ನ ಕೇಳಿಕೊಂಡು ಹೋಗುವವರು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಐದು ವರ್ಷವೂ ಸಿದ್ದರಾಮಯ್ಯ ಸಿಎಂ: ಯತೀಂದ್ರ

ಗದಗ: ‘ಮುಖ್ಯಮಂತ್ರಿ ಬದಲಾವಣೆ ವಿಷಯ ಹೈಕಮಾಂಡ್‌ಗೆ ಬಿಟ್ಟಿದ್ದು. ಆದರೆ, ಮುಖ್ಯಮಂತ್ರಿ ಬದಲಿಸುವುದಾಗಿ ಹೈಕಮಾಂಡ್ ಈವರೆಗೆ ಸೂಚಿಸಿಲ್ಲ. ಪಕ್ಷದಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಸಹಜ. ಅದರರ್ಥ ಹೈಕಮಾಂಡ್ ಮುಖ್ಯಮಂತ್ರಿ ಬದಲಾವಣೆಗೆ ಪ್ರಕ್ರಿಯೆ ನಡೆದಿದೆ. ರಾಜ್ಯ ಸರ್ಕಾರ ಅಸ್ಥಿರವಾಗಿದೆಯೆಂದು ಅರ್ಥವಲ್ಲ. ಐದು ವರ್ಷ ಸಿದ್ದರಾಮಯ್ಯ ಅವರೇ ಆಗಿರುತ್ತಾರೆ’ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

‘ಬಡ್ತಿ ನೀಡಿ ಸಿಎಂ ಕುರ್ಚಿ ಕಸಿಯುವ ಪ್ಲ್ಯಾನ್’ ಎಂಬ ಬಿಜೆಪಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ತಂದೆ ಸಿದ್ದರಾಮಯ್ಯ ಅವರು ತಮ್ಮ ಇಡೀ ರಾಜಕೀಯ ಜೀವನ ಅಹಿಂದ ಪರ ಹೋರಾಟ ಮಾಡಿದ್ದಾರೆ. ಅವರನ್ನು ಸದಸ್ಯರನ್ನಾಗಿ ಮಾಡಿದರೆ ಮೌಲ್ಯಯುತ ಕೊಡುಗೆ ನೀಡಲು ಸಾಧ್ಯ ಎಂದು ಹೇಳಿ ಆ ಸಮಿತಿ ಸದಸ್ಯರನ್ನಾಗಿ ಮಾಡಿದ್ದಾರೆ’ ಎಂದರು.

‘ಸಿಎಂ ಕಾಂಗ್ರೆಸ್ ಶಾಸಕರ ವಿಶ್ವಾಸ ಕಳೆದುಕೊಂಡಿದ್ದಾರೆ’ ಎಂಬ ಆರ್ ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಮ್ಮ ಶಾಸಕರು ಹಾಗಂತ ಆರ್. ಅಶೋಕ ಅವರ ಬಳಿ ಹೋಗಿ ಹೇಳಿದ್ರಾ’ ಎಂದು ಪ್ರಶ್ನಿಸಿದರು.

ರಂಭಾಪುರಿ ಸ್ವಾಮೀಜಿ ಹೇಳಿಕೆ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, ‘ನಮ್ಮ ಪಕ್ಷ ಅಧಿಕಾರಕ್ಕೆ ಬರಲು ಡಿ.ಕೆ.ಶಿವಕುಮಾರ್ ಅವರ ಕೊಡುಗೆ ಸಾಕಷ್ಟಿದೆ. ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಪಕ್ಷವನ್ನು ಬಲವರ್ಧನೆಗೊಳಿಸಿದ್ದಾರೆ. ನಾವು ವಿರೋಧ ಪಕ್ಷದಲ್ಲಿದ್ದಾಗ ಹಲವಾರು ಕಾರ್ಯಕ್ರಮ ಮಾಡಿದರು. ಕಾರ್ಯಕರ್ತರಿಗೆ ವಿರಾಮವನ್ನೇ ಕೊಟ್ಟಿರಲಿಲ್ಲ’ ಎಂದರು.

ಸುಪ್ರೀಂ ಕೋರ್ಟ್‌ಗೆ ಮಹುವಾ ಅರ್ಜಿ

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ
• ಬಿಜೆಪಿ ಹುನ್ನಾರ: ಖರ್ಗೆ ಟೀಕೆ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯನ್ನು ತೀವ್ರವಾಗಿ ಪರಿಷ್ಕರಣೆ ಮಾಡುವ ಕೇಂದ್ರ ಚುನಾವಣಾ ಆಯೋಗದ ಕ್ರಮಕ್ಕೆ ಹಲವರ ವಿರೋಧ ವ್ಯಕ್ತವಾಗುತ್ತಿದೆ. ಇದೀಗ ಆಯೋಗದ ಆದೇಶ ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ ನಾಯಕಿ ಮತ್ತು ಸಂಸದೆ ಮಹುವಾ ಮೊಯಿತ್ರಾ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.


ಮಹುವಾ ಮೊಯಿತ್ರಾ

ಜೂನ್ 24ರಂದು ಆಯೋಗ ಹೊರಡಿಸಿರುವ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಆದೇಶ ಸಂವಿಧಾನದ 14, 19(1)(ಎ), 21, 325, 328ರ ವಿಧಿ ಹಾಗೂ ಪ್ರಜಾ ಪ್ರತಿನಿಧಿ ಕಾಯ್ದೆ-1950, ಮತದಾರ ನೋಂದಣಿ ನಿಯಮ-1960ರ ಉಲ್ಲಂಘನೆ ಯಾಗಿದೆ. ಹೀಗಾಗಿ ಆದೇಶವನ್ನು ವಜಾ ಮಾಡುವಂತೆ ಸಾರ್ವಜನಿಕ ಹಿತಾಸಕ್ತಿಯಡಿ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಮಹುವಾ ಕೋರಿದ್ದಾರೆ.

‘ಈಗಾಗಲೇ ಪಟ್ಟಿಯಲ್ಲಿ ಹೆಸರಿರುವ, ಹಲವು ಬಾರಿ ಮತದಾನ ಮಾಡಿರುವವರನ್ನು ತಮ್ಮ ಅರ್ಹತೆ ಸಾಬೀತುಪಡಿಸುವಂತೆ ಸೂಚಿಸಲಾಗುತ್ತಿದೆ. ದಾಖಲೆ ನೀಡದವರನ್ನು ಪಟ್ಟಿಯಿಂದ ಕೈಬಿಡುವ ಅಪಾಯವಿದೆ. ಇತರೆ ರಾಜ್ಯಗಳಲ್ಲೂ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡದಂತೆ ಆಯೋಗಕ್ಕೆ ನಿರ್ದೇಶನ ನೀಡಬೇಕು’ ಎಂದು ಅರ್ಜಿಯಲ್ಲಿ ಕೋರಿದ್ದಾರೆ.

ಮಹುವಾ ಅವರಷ್ಟೇ ಅಲ್ಲದೆ ಬಿಹಾರದ ವಿರೋಧ ಪಕ್ಷ ಆರ್‌ಜೆಡಿ, ಸ್ವಯಂ ಸೇವಾ ಸಂಸ್ಥೆಗಳಾದ ಎಡಿಆರ್, ಪಿಯುಸಿಎಲ್, ಸಾಮಾಜಿಕ ಹೋರಾಟಗಾರರಾದ ಯೋಗೇಂದ್ರ ಯಾದವ್ ಸೇರಿ ಹಲವರು ಆಯೋಗದ ಕ್ರಮವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಲಕ್ಷಾಂತರ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಪ್ರಯತ್ನ ಇದು ಎಂದು ಎಡಿಆರ್ ಆತಂಕ ವ್ಯಕ್ತಪಡಿಸಿದೆ.

ಈ ಮಧ್ಯೆ ಜುಲೈ 9ರಂದು ಎಡಪಕ್ಷಗಳ ನೇತೃತ್ವದಲ್ಲಿ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಬಂದ್ ಸಂದರ್ಭದಲ್ಲಿ ಬಿಹಾರದಲ್ಲಿ ಈ ವಿಚಾರವನ್ನೂ ಮುಂದಿಡಲು ಇಂಡಿಯಾ ಒಕ್ಕೂಟದ ಪಕ್ಷಗಳು ನಿರ್ಧರಿಸಿವೆ.

ಬಿಹಾರ ವಿಧಾನಸಭೆಗೆ ಕೆಲವೇ ತಿಂಗಳುಗಳಲ್ಲಿ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಆಯೋಗ ವಿಶೇಷ ಪರಿಷ್ಕರಣೆ ಆದೇಶ ಹೊರಡಿಸಿದೆ.



ಬಿಜೆಪಿಯು ಬಿಹಾರದ ಕೋಟ್ಯಂತರ ಜನರನ್ನು ಮತದಾನ ಹಕ್ಕಿನಿಂದ ವಂಚಿಸುವ ಮಾಸ್ಟರ್ ಪ್ಲಾನ್ ರೂಪಿಸಿದೆ. ಇದು ಬಿಜೆಪಿಯನ್ನೇ ಖೆಡ್ಡಾಕ್ಕೆ ಬೀಳಿಸಲಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಆದೇಶದಲ್ಲಿ ಬದಲಾವಣೆ ಇಲ್ಲ: ಆಯೋಗ

ಪಾಟ್ನಾ: ‘ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯನ್ನು ತಳಮಟ್ಟದಿಂದ ಅತ್ಯಂತ ಸುಲಲಿತವಾಗಿ ನಡೆಸಲಾಗುವುದು. ನಾವು ನೀಡಿರುವ ಸೂಚನೆಯಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಕೇಂದ್ರ ಚುನಾವಣಾ ಆಯೋಗವು ಭಾನುವಾರ ಸ್ಪಷ್ಟಪಡಿಸಿದೆ.

ಪರಿಷ್ಕರಣೆ ಸಂಬಂಧ ಆಯೋಗ ನೀಡಿದ್ದ ಜಾಹೀರಾತು ಪ್ರಸ್ತಾಪಿಸಿ ಕೆಲವರು ಗೊಂದಲ ಮೂಡಿಸಿದ್ದರು. ಹೀಗಾಗಿ ಹೇಳಿಕೆ ಬಿಡುಗಡೆ ಮಾಡಿರುವ ಆಯೋಗ, ‘ಮತದಾರರು 2025ರ ಜುಲೈ 25ರ ಒಳಗೆ ದಾಖಲೆಗಳನ್ನು ಒದಗಿಸಬೇಕು. ಸಲ್ಲಿಸದವರಿಗೆ ಆಕ್ಷೇಪಣೆ ಮತ್ತು ಹೊಸ ಅರ್ಜಿ ಸಲ್ಲಿಕೆಗೆ ಅವಕಾಶವಿದೆ. ಕೆಲವರ ತಪ್ಪು ಮತ್ತು ಹಾದಿ ತಪ್ಪಿಸುವ ಹೇಳಿಕೆಗಳಿಂದ ಬಿಹಾರದ ಜನರು ಎಚ್ಚರವಾಗಿರಿ’ ಎಂದು ಮನವಿ ಮಾಡಿದೆ.

2003ರಲ್ಲೇ ದೇಶಾದ್ಯಂತ ಪರಿಷ್ಕರಣೆ ಆಗಿದ್ದರೂ ಬಿಹಾರಕ್ಕೆ ಮಾತ್ರ ಇದು ಅನ್ವಯವಾದುದು ಏಕೆ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಪ್ರಶ್ನಿಸಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಟೀಕೆ, ಕೆಲವು ಸಾಮಾಜಿಕ ಮಾಧ್ಯಮಗಳಲ್ಲಿ ಬಂದ ವರದಿಗಳಿಗೆ ಆಯೋಗ ಈ ರೀತಿ ಸ್ಪಷ್ಟನೆ ಕೊಟ್ಟಿದೆ.

ಬಿಹಾರ ಮುಖ್ಯ ಚುನಾವಣಾಧಿಕಾರಿ (ಸಿಇಒ) ‘ಎಕ್ಸ್’ನಲ್ಲಿ ಸ್ಪಷ್ಟನೆ ನೀಡಿದ್ದು, ‘ಆಯೋಗದ ಸೂಚನೆಯಂತೆ 2025ರ ಆಗಸ್ಟ್ 1ರಂದು ಮತದಾರರ ಕರಡು ಪಟ್ಟಿ ಪ್ರಕಟಿಸಲಾಗುವುದು. ಅದರಲ್ಲಿ ಸಂಪೂರ್ಣ ಮಾಹಿತಿ ನಮೂನೆಗಳನ್ನು ಒದಗಿಸಿದ ಹಾಲಿ ಮತದಾರರ ಹೆಸರುಗಳು ಇರಲಿವೆ. ಅನಂತರವೂ ದಾಖಲೆ ಒದಗಿಸಬಹುದು’ ಎಂದಿದ್ದಾರೆ.

2008ರಲ್ಲಿ ದೆಹಲಿ ಸರ್ಕಾರ ಜಾರಿಗೊಳಿಸಿದ್ದ ‘ಲಾಡ್ಲಿ’ ಯೋಜನೆ
15 ವರ್ಷ: ಶೇ 60 ಫಲಾನುಭವಿಗಳ ಕುಸಿತ

ನವದೆಹಲಿ (ಪಿಟಿಐ): ದೆಹಲಿ ಸರ್ಕಾರವು ಆರಂಭಿಸಿದ್ದ ‘ಲಾಡ್ಲಿ ಯೋಜನೆ’ ಅಡಿಯಲ್ಲಿ ಫಲಾನುಭವಿಗಳ ಸಂಖ್ಯೆಯು ಕಳೆದ 15 ವರ್ಷಗಳಲ್ಲಿ ಶೇಕಡಾ 60ರಷ್ಟು ಕುಸಿತ ದಾಖಲಿಸಿರುವುದು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಪಡೆದ ದಾಖಲೆಗಳಿಂದ ಬಹಿರಂಗಗೊಂಡಿದೆ.

ಯುವತಿಯರ ಸಬಲೀಕರಣ ಹಾಗೂ ಲಿಂಗ ಸಮಾನತೆ ಜಾರಿಗೆ ತರುವ ನಿಟ್ಟಿನಲ್ಲಿ 2008ರ ಜ.1ರಂದು ರಾಷ್ಟ್ರ ರಾಜಧಾನಿಯಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಯೋಜನೆ ಆರಂಭಗೊಂಡು, 15 ವರ್ಷದಲ್ಲಿ ಫಲಾನುಭವಿಗಳ ಸಂಖ್ಯೆಯು ಶೇಕಡಾ 60 ರಷ್ಟು ಕುಸಿತ ಕಂಡಿದೆ ಎಂದು ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯೇ ಆರ್‌ಟಿಐನಡಿ ಒಪ್ಪಿಕೊಂಡಿದೆ.

ಯೋಜನೆ ಆರಂಭಗೊಂಡ 2008-09ರ ಅವಧಿಯಲ್ಲಿ ಗರಿಷ್ಠ ನೋಂದಣಿಯಾಗಿದ್ದರೆ, 2019-20ರಲ್ಲಿ ಕನಿಷ್ಠ ನೋಂದಣಿ ಮಾಡಿರುವುದು ಕಂಡುಬಂದಿದೆ.

ಅಂಕಿ ಅಂಶಗಳು

₹35-36 ಸಾವಿರ ಬಾಲಕಿಯರಿಗೆ 18 ವರ್ಷ ತುಂಬುವವರೆಗೆ ಹಂತ ಹಂತವಾಗಿ ಸಿಗುವ ಆರ್ಥಿಕ ನೆರವು

1.86 ಲಕ್ಷ ಯೋಜನೆಯಡಿ ಲಾಭ ಪಡೆದುಕೊಳ್ಳದವರ ಸಂಖ್ಯೆ

1.66 ಲಕ್ಷ ಶಾಲೆ ತೊರೆದು, ನವೀಕರಣ ಮಾಡಿಕೊಳ್ಳದವರ ಸಂಖ್ಯೆ

ಯೋಜನೆ ವರ್ಷ	ಫಲಾನುಭವಿಗಳು
2008-09	1,26,965
2009-10	1,39,223
2010-11	1,05,737
2011-12	1,06,585
2012-13	96,800
2013-14	89,243
2014-15	82,669
2015-16	74,846
2016-17	68,193
2017-18	67,070
2018-19	60,903
2019-20	30,192
2020-21	61,546
2021-22	62,749
2022-23	64,637
2023-24	62,205
2024-25	53,001
ಒಟ್ಟು ನೋಂದಣಿ	13,52,564



ಬಾಲಕಿಯರು ಶಾಲೆ ತೊರೆಯುತ್ತ ಇರುವುದು ಹಾಗೂ ಜಾಗೃತಿಯ ಕೊರತೆಯಿಂದ ನೋಂದಣಿಯನ್ನು ನವೀಕರಿಸದ ಕಾರಣ ಫಲಾನುಭವಿಗಳ ಸಂಖ್ಯೆಯಲ್ಲಿ ಕುಸಿತವಾಗಿದೆ

ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ

‘ಒಳಮೀಸಲಾತಿ ಸಮೀಕ್ಷೆ ಬೋಗಸ್’

ಪ್ರಜಾವಾಣಿ ವಾರ್ತೆ

ಮುಂಬೈ: ಕರ್ನಾಟಕದಾದ್ಯಂತ ಒಳಮೀಸಲಾತಿಗೆ ಸಂಬಂಧಿಸಿ ನಡೆಯುತ್ತಿರುವ ಪರಿಶಿಷ್ಟ ಜಾತಿಯ ಮನೆ-ಮನೆ ಸಮೀಕ್ಷೆಯನ್ನು ಬೋಗಸ್ ಮತ್ತು ನಕಲಿ ಎಂದು ವಂಚಿತ್ ಬಹುಜನ ಆಘಾಡಿ ಸಂಸ್ಥಾಪಕ ಪ್ರಕಾಶ್ ಅಂಬೇಡ್ಕರ್ ಬಣ್ಣಿಸಿದ್ದಾರೆ.

‘ಪರಿಶಿಷ್ಟ ಜಾತಿಯ ಬೋಗಸ್ ಸರ್ವೆಯನ್ನು ಕರ್ನಾಟಕದಲ್ಲಿ ಕಾಂಗ್ರೆಸ್ ನಡೆಸುತ್ತಿದೆ. ನಿವಾಸಿಗಳೊಂದಿಗೆ ಮಾತನಾಡದೆ ಅಥವಾ ಯಾವುದೇ ನೈಜ ಮಾಹಿತಿಯನ್ನು ಸಂಗ್ರಹಿಸದೆ ಮನೆಗಳಿಗೆ ರಹಸ್ಯವಾಗಿ ನೋಟಿಸ್‌ಗಳನ್ನು ಅಂಟಿಸುವುದು ಯಾವ ರೀತಿಯ ಕಾನೂನುಬದ್ಧ ಸಮೀಕ್ಷೆ? ಮತ್ತು, ಅಂತಹ ನಕಲಿ ಸಮೀಕ್ಷೆಗಳನ್ನು ನಡೆಸುವುದರಿಂದ ಏನು ಪ್ರಯೋಜನ?’ ಎಂದು ಅವರು ಕೇಳಿದ್ದಾರೆ.

‘ಪರಿಶಿಷ್ಟ ಜಾತಿಗಳ ಅನುಚಿತ ಮತ್ತು ಸುಳ್ಳು ಅಂಕಿ-ಅಂಶಗಳನ್ನು ದಾಖಲಿಸಲು ಕಾಂಗ್ರೆಸ್ ಸಂಚು ರೂಪಿಸುತ್ತಿದೆಯೇ? ಈ ಮೂಲಕ ಸರ್ಕಾರಿ ವಲಯ ಮತ್ತು ಕಲ್ಯಾಣ ಬಜೆಟ್‌ನಲ್ಲಿ ಅವರ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಉದ್ದೇಶಿಸಿದೆಯೇ’ ಎಂದು ಅವರು ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

‘ಬಿಹಾರ ಭಾರತದ ಅಪರಾಧ ರಾಜಧಾನಿ’

ನವದೆಹಲಿ (ಪಿಟಿಐ): ‘ಬಿಜೆಪಿ ಹಾಗೂ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸೇರಿಕೊಂಡು ಬಿಹಾರವನ್ನು ದೇಶದ ಅಪರಾಧಗಳ ರಾಜಧಾನಿಯನ್ನಾಗಿ ಮಾಡಿದ್ದಾರೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಬಿಹಾರದ ಉದ್ಯಮಿ ಗೋಪಾಲ್ ಖೇಮ್ಕಾ ಅವರನ್ನು ಪಾಟ್ನಾದ ಅವರ ಮನೆಯ ಹೊರಭಾಗದಲ್ಲಿ ದುಷ್ಕರ್ಮಿಗಳು ಗುಂಡಿಕ್ಕಿ ಕೊಲೆ ಮಾಡಿರುವುದನ್ನು ಉಲ್ಲೇಖಿಸಿ ಈ ಹೇಳಿಕೆ ನೀಡಿದ್ದಾರೆ.


ರಾಹುಲ್ ಗಾಂಧಿ

‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತದಾನವು ಸರ್ಕಾರವನ್ನಷ್ಟೇ ಬದಲಾಯಿಸುವುದಿಲ್ಲ, ರಾಜ್ಯವನ್ನೂ ಉಳಿಸಲಿದೆ’ ಎಂದು ಹೇಳಿದ್ದಾರೆ.

ಬೈಕ್‌ನಲ್ಲಿ ಬಂದಿದ್ದ ದುಷ್ಕರ್ಮಿಗಳು ಗಾಂಧಿ ಮೈದಾನದ ಸಮೀಪವಿರುವ ನಿವಾಸಕ್ಕೆ ತೆರಳಲು ಖೇಮ್ಕಾ ಅವರು ಕಾರಿನಿಂದ ಇಳಿಯುತ್ತಿದ್ದ ವೇಳೆ ಶುಕ್ರವಾರ ರಾತ್ರಿ 11.40ರ ಸುಮಾರಿಗೆ ಗುಂಡಿಕ್ಕಿ ಹತ್ಯೆ ಮಾಡಿದ್ದರು. ಹಾಜೀಪುರದಲ್ಲಿ ಏಳು ವರ್ಷಗಳ ಹಿಂದೆ ಅವರ ಮಗನನ್ನು ಇದೇ ರೀತಿ ಕೊಲೆ ಮಾಡಲಾಗಿತ್ತು.

‘ಘಟನೆ ನಡೆದ ಬೆನ್ನಲ್ಲೇ, ಪ್ರಕರಣದ ತನಿಖೆ ನಡೆಸಲು ಹಿರಿಯ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ’ ಎಂದು ಡಿಜಿಪಿ ತಿಳಿಸಿದ್ದಾರೆ.

ಬಿಹಾರ ಉಳಿಸಿ: ‘ಬಿಜೆಪಿ, ನಿತೀಶ್ ಕುಮಾರ್ ಸೇರಿಕೊಂಡು, ಬಿಹಾರವನ್ನು ದೇಶದ ಅಪರಾಧ ರಾಜಧಾನಿಯನ್ನಾಗಿ ಮಾಡಿದ್ದಾರೆ. ಬಿಹಾರ ಇಂದು ಲೂಟಿ, ಗುಂಡಿನ ದಾಳಿ ಹಾಗೂ ಕೊಲೆಗಳ ನೆರಳಿನಲ್ಲಿ ಬದುಕುತ್ತಿದೆ. ಅಪರಾಧ ಎಂಬುದು ಮಾಮೂಲಿಯಾಗಿದೆ. ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಈ ವರ್ಷದ ಅಕ್ಟೋಬರ್-ಡಿಸೆಂಬರ್ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಕೊಲೆ ನಡೆದಿರುವುದು ಆರೋಪ-ಪ್ರತ್ಯಾರೋಪಕ್ಕೆ ಕಾರಣವಾಗಿದೆ.

‘ಕೇರಳದಲ್ಲಿ ಜ್ಯೋತಿ ಪ್ರಚಾರ ವಿಡಿಯೊ’

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪಾಕಿಸ್ತಾನದ ಪರ ಗೂಢಚಾರಿಕೆ ನಡೆಸಿದ ಆರೋಪದ ಮೇಲೆ ಬಂಧಿತರಾದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಅವರನ್ನು ಈ ಹಿಂದೆ ಕೇರಳ ಪ್ರವಾಸೋದ್ಯಮ ಇಲಾಖೆಯೇ ಕರೆಸಿಕೊಂಡು ಪ್ರಚಾರದ ವಿಡಿಯೊ ಮಾಡಿಸಿದ್ದು ತಿಳಿದುಬಂದಿದೆ.

ಇಲಾಖೆಯ ಪರವಾಗಿ ಜ್ಯೋತಿ ಸೇರಿದಂತೆ ಸಾಮಾಜಿಕ ಜಾಲತಾಣದ ಹಲವು ಇನ್‌ಫ್ಲುಯೆನ್ಸರ್‌ಗಳು ಕಳೆದೆರಡು ವರ್ಷಗಳಿಂದ ಕೆಲಸ ಮಾಡಿದ್ದರು. ರಾಜ್ಯದಾದ್ಯಂತ ಓಡಾಡಿ, ವಿಡಿಯೊ ಮಾಡಲು ಇಲಾಖೆಯೇ ಸಂಪೂರ್ಣ ಪ್ರಾಯೋಜಕತ್ವ ವಹಿಸಿತ್ತು.

‘ಆಕೆಯ ವಿರುದ್ಧ ಗೂಢಚಾರಿಕೆ ಆರೋಪ ಕೇಳಿ ಬರುವ ಮುನ್ನವೇ ರಾಜ್ಯಕ್ಕೆ ಕರೆಸಿಕೊಳ್ಳಲಾಗಿತ್ತು. ಈ ಕುರಿತು ರಾಜ್ಯ ಸರ್ಕಾರಕ್ಕೆ ಯಾವುದೇ ಮಾಹಿತಿ ಇರಲಿಲ್ಲ’ ಎಂದು ಕೇರಳ ಪ್ರವಾಸೋದ್ಯಮ ಸಚಿವ ಮೊಹಮ್ಮದ್ ರಿಯಾಜ್ ಹೇಳಿದ್ದಾರೆ.


ಜ್ಯೋತಿ

ಮಲ್ಹೋತ್ರಾ ಕೇರಳಕ್ಕೆ ಭೇಟಿ ನೀಡಿ, ವಿಡಿಯೊ ಚಿತ್ರೀಕರಿಸಿದ್ದ ಕುರಿತು ಕೇಂದ್ರ ಗುಪ್ತಚರ ಇಲಾಖೆಯು ತನಿಖೆ ತೀವ್ರಗೊಳಿಸಿದೆ.

ಪಾಕಿಸ್ತಾನ ಪರ ಗೂಢಚಾರಿಕೆ ನಡೆಸಿದವರಿಗೆ ಸರ್ಕಾರವೇ ಪ್ರವಾಸವನ್ನು ಪ್ರಾಯೋಜಿಸಿರುವುದು ನಾಚಿಕೆಗೇಡಿನ ವಿಚಾರ’ ಎಂದು ಬಿಜೆಪಿ ಮುಖಂಡ ಕೆ.ಸುರೇಂದ್ರನ್ ಆರೋಪಿಸಿದ್ದಾರೆ.

‘ಮಹಾಯುತಿ’ ಪಾಳಯದಲ್ಲಿ ನಡುಕ: ರಾವುತ್

ಮುಂಬೈ (ಪಿಟಿಐ): ‘ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಮತ್ತು ಶಿವಸೇನಾ (ಉದ್ಧವ್ ಬಣ) ಉದ್ಧವ್ ಠಾಕ್ರೆ ಅವರು ಒಂದುಗೂಡಿರುವುದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸೇರಿದಂತೆ ಇಡೀ ‘ಮಹಾಯುತಿ’ ಪಾಳಯದಲ್ಲಿ ನಡುಕ ಹುಟ್ಟಿಸಿದೆ’ ಎಂದು ಶಿವಸೇನಾ (ಉದ್ಧವ್ ಬಣ) ಸಂಸದ ಸಂಜಯ್ ರಾವುತ್ ಪತ್ರಕರ್ತರಿಗೆ ಭಾನುವಾರ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಔಷಧ ಕಾರ್ಖಾನೆ ಸ್ಫೋಟ ಮೃತರ ಸಂಖ್ಯೆ 41ಕ್ಕೆ ಏರಿಕೆ



ಹೈದರಾಬಾದ್ (ಪಿಟಿಐ): ಇಲ್ಲಿನ ಸಂಗಾರೆಡ್ಡಿ ಜಿಲ್ಲೆಯ ಸಿಗಾಚಿ ಔಷಧ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಗಾಯಗೊಂಡಿದ್ದ ಮತ್ತೊಬ್ಬರು ಮೃತಪಟ್ಟಿದ್ದು, ಮೃತರ ಸಂಖ್ಯೆ 41ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ದುರಂತ ಸಂಭವಿಸಿದ ವೇಳೆ 143 ಮಂದಿ ಕೆಲಸ ಮಾಡುತ್ತಿದ್ದರು. ಈ ಪೈಕಿ 61 ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದರು. 14 ಮಂದಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. 18 ಮಂದಿ ಇನ್ನೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈವರೆಗೆ 40 ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಾತೃಭಾಷೆಯಲ್ಲಿ ಶಿಕ್ಷಣದಿಂದ ಜ್ಞಾನ ವೃದ್ಧಿ: ಬಿ.ಆರ್ ಗವಾಯಿ

ಮುಂಬೈ (ಪಿಟಿಐ): ‘ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವುದರಿಂದ ಜ್ಞಾನವು ಹೆಚ್ಚಾಗುತ್ತದೆ. ಇದು ನಮ್ಮ ಜೀವನದಲ್ಲಿ ಮೌಲ್ಯಗಳನ್ನು ತುಂಬುತ್ತದೆ’ ಎಂದು ಸಿಜೆಐ ಬಿ.ಆರ್ ಗವಾಯಿ ಹೇಳಿದರು.


ಗವಾಯಿ

ಮುಂಬೈಯಲ್ಲಿ ತಾವು ಕಲಿತ ಚಿಕಿತ್ಸಕ್ ಸಮೂಹ್ ಶಿರೋಡ್ಕರ್ ಶಾಲೆಗೆ ಭೇಟಿ ನೀಡಿದ್ದ ಗವಾಯಿ ಅವರು ತಮ್ಮ ಹಳೆಯ ಸಹಪಾಠಿಗಳೊಂದಿಗೆ ಮಾತನಾಡಿದರು.

ಈ ವೇಳೆ ತಮ್ಮ ಶಾಲಾ ದಿನಗಳನ್ನು ಮೆಲುಕು ಹಾಕಿದ ಅವರು, ‘ನನ್ನ ಜೀವನವನ್ನು ರೂಪಿಸಿದ ಶಿಕ್ಷಕರಿಗೆ ಕೃತಜ್ಞನಾಗಿರುತ್ತೇನೆ. ನಾನು ನನ್ನ ಮಾತೃಭಾಷೆ ಮರಾಠಿ ಮಾಧ್ಯಮದಲ್ಲಿ ಇಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ’ ಎಂದರು.

‘ಇಂದು ನಾನು ಯಾವುದೇ ಸ್ಥಾನ ತಲುಪಿದ್ದರೂ ಅದರಲ್ಲಿ ನನ್ನ ಶಿಕ್ಷಕರ ಹಾಗೂ ಈ ಶಾಲೆಯದ್ದು ಮಹತ್ವದ ಪಾತ್ರವಿದೆ. ಇಲ್ಲಿ ಪಡೆದ ಶಿಕ್ಷಣ ಮತ್ತು ಮೌಲ್ಯಗಳು ನನ್ನ ಜೀವನಕ್ಕೆ ಮಾರ್ಗದರ್ಶನ ನೀಡಿವೆ. ಭಾಷಣ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ನನ್ನಲ್ಲಿ ಹೆಚ್ಚು ಆತ್ಮವಿಶ್ವಾಸ ಮೂಡಿತು’ ಎಂದು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ತ್ಯಾಗ, ಪ್ರೀತಿ, ಕರುಣೆ, ವಿನಯ, ಪ್ರಾಮಾಣಿಕತೆಯೇ ನಿಜವಾದ ಶಿಕ್ಷಣ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಮಹಿಳೆಯರ ಅವಹೇಳನದ ಚಾಳಿ ರಾಜಕಾರಣದ ನೈತಿಕತೆಗೆ ಗರ?

ಜನಸಾಮಾನ್ಯರಿಗೆ ನೈತಿಕ ಮಾದರಿಗಳನ್ನು ಹಾಕಿಕೊಡಬೇಕಾದ ಜನಪ್ರತಿನಿಧಿಗಳು, ತಮ್ಮ ಬಾಯಿಬಡುಕ ಮಾತುಗಳಿಂದ ಲಿಂಗಸಂವೇದನೆಯನ್ನು ನಿರಂತರವಾಗಿ ಗಾಸಿಗೊಳಿಸುತ್ತಿದ್ದಾರೆ. ಇದಕ್ಕೆ ಹೊಸ ಸೇರ್ಪಡೆ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಕುರಿತು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ಆಡಿದ್ದಾರೆ ಎನ್ನಲಾದ ಅವಹೇಳನಕಾರಿ ಮಾತುಗಳು. ವಿವಾದದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗಿದೆ; ರವಿಕುಮಾರ್ ಅವರಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ. ಈ ಹಿಂದೆ ಕಲಬುರಗಿ ಜಿಲ್ಲಾಧಿಕಾರಿ ಬಗ್ಗೆಯೂ ರವಿಕುಮಾರ್ ಅವಹೇಳನಕಾರಿ ಪದ ಬಳಸಿದ್ದು, ಅವರಿಗೆ 'ಅಪರಾಧಿಕ ಚಾಳಿ' ಇದೆ ಎಂದು ಜಾಮೀನು ಅರ್ಜಿ ವಿಚಾರಣೆ ಸಂದರ್ಭದಲ್ಲಿ ರಾಜ್ಯ ಪ್ರಾಸಿಕ್ಯೂಟರ್ ಹೇಳಿರುವುದು ಹೆಳವ ಮಾತ್ರವಾಗಿರದೆ, ಸಮಕಾಲೀನ ರಾಜಕಾರಣದ ನೈತಿಕ ಅಧಃಪತನವನ್ನೂ ಸೂಚಿಸುವಂತಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಅನೇಕ ರಾಜಕಾರಣಿಗಳು ಒಂದಲ್ಲಾ ಒಂದು ಸಂದರ್ಭದಲ್ಲಿ ಸಕ್ಕಾಪ್ಪು ಉದಾಹರಣೆಗಳಿವೆ. ಕಳೆದ ಡಿಸೆಂಬರ್‌ನಲ್ಲಿ, ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನದ ಸಮಯದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕುರಿತು ಬಳಸಿದ ಪದವೊಂದು ಸದನದ ಒಳಹೊರಗೆ ಅಲ್ಲೋಲ ಕಲ್ಲೋಲ ಸೃಷ್ಟಿಸಿತ್ತು. ನಾಲಿಗೆಯ ಮೇಲೆ ನಿಯಂತ್ರಣ ಕಳೆದುಕೊಳ್ಳುವ ರಾಜಕಾರಣಿಗಳು ಪರಸ್ಪರ ದೂಷಿಸಿಕೊಳ್ಳುವ ಸಂದರ್ಭದಲ್ಲಿ ಮಹಿಳೆಯರ ಸೀರೆ, ಹೂವು, ಕುಂಕುಮ, ಬಳೆಗಳ ಬಗ್ಗೆ ನಿಕೃಷ್ಟವಾಗಿ ಮಾತನಾಡುವುದು ಎದ್ದು ಕಾಣುತ್ತದೆ. ವಿಷಾದದ ಸಂಗತಿ ಎಂದರೆ, ಆ ಮಾತುಗಳನ್ನು ಮಹಿಳಾ ಜನಪ್ರತಿನಿಧಿಗಳೂ ಆಕ್ಷೇಪಿಸದೆ ಮೌನವಾಗಿಯೇ ಒಪ್ಪಿಕೊಳ್ಳುತ್ತಿರುವಂತಿದೆ. ಅಸೂಕ್ಷ್ಮವಾಗಿ ಮಾತನಾಡುವ ರಾಜಕಾರಣಿಗಳ ಕಣ್ಣಿಗೆ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದಾಗಿ ಹಳ್ಳಿಗಳ ತಾಯಂದಿರು ದಾರಿ ತಪ್ಪಿರುವಂತೆ ಕಾಣಿಸಿದ್ದಾರೆ. ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗಿರಬೇಕು ಎಂದೊಬ್ಬರು ಅಪ್ಪಣೆ ಕೊಡಿಸಿದರೆ, ಮಹಿಳೆಯರೊಬ್ಬರು ಹಣಕ್ಕೆ ಬೇಡಿಕೆ ಇಡುವುದರ ಬಗ್ಗೆ ಮಾತನಾಡುವ ಅವಸರದಲ್ಲಿ ಹೆಣ್ಣನ್ನು ಅವಹೇಳನ ಮಾಡಿದ್ದಾರೆ. ಹೀಗೆ, ಲಿಂಗಸಂವೇದನೆಯ ಸೂಕ್ಷ್ಮ ಗಳನ್ನು ಮರೆತು ನಿರ್ಲಜ್ಜೆಯಿಂದ ಮಾತನಾಡುವ ಜನಪ್ರತಿನಿಧಿಗಳು, ಜನರ ಮೂಲಕ ತಮಗೆ ದೊರೆತ ಅಧಿಕಾರದಿಂದ ಏನನ್ನು ಬೇಕಾದರೂ ಮಾತನಾಡಿ ದಕ್ಕಿಸಿಕೊಳ್ಳಬಲ್ಲೆವು ಎನ್ನುವ ಭಂಡತನ ಹೊಂದಿರುವಂತಿದೆ.



ಮಹಿಳೆಯರ ಬಗೆಗಿನ ರಾಜಕಾರಣಿಗಳ ಅವಹೇಳನಕಾರಿ ಮಾತುಗಳ ಹಿಂದೆ ಅವಿವೇಕ, ಲಿಂಗಸಂವೇದನೆಯ ಅರಿವಿನ ಕೊರತೆ ಎದ್ದು ಕಾಣುತ್ತದೆ.

ಜನಪ್ರತಿನಿಧಿಗಳ ನಿರ್ಲಜ್ಜ ಮಾತುಗಳ ಹಿಂದೆ ಪುರುಷ ಅಹಂಕಾರ ಹಾಗೂ ಹೆಣ್ಣನ್ನು ಭೋಗದ ದೃಷ್ಟಿಕೋನದಿಂದಷ್ಟೇ ನೋಡುವ ಕೊಳಕು ಮನಸ್ಥಿತಿಯ ಜೊತೆಗೆ ಅಧಿಕಾರದ ಮದವೂ ಇರುತ್ತದೆ. ಮೊದಲ ಸಲದ ದುಡುಕಿನ ಮಾತನ್ನು ಬಾಯ್ತಪ್ಪಿನ ಅಪ್ರಜ್ಞಾಪೂರ್ವಕ ಹೇಳಿಕೆಯೆಂದು ಭಾವಿಸಿಕೊಳ್ಳಲು ಸಾಧ್ಯವಿದೆ. ಆದರೆ, ಪಕ್ಷಾತೀತವಾಗಿ ಕೆಲವರು ಅವಹೇಳನಕಾರಿ ಮಾತುಗಳನ್ನು ಮತ್ತೆ ಮತ್ತೆ ಆಡುವುದನ್ನು ಚಾಳಿ ಎಂದೇ ಪರಿಗಣಿಸಬೇಕಾಗುತ್ತದೆ. ಅಂಥ ಚಾಳಿಗೆ ಕಾನೂನು ಕ್ರಮದ ಜೊತೆಗೆ ಮಾನಸಿಕ ಚಿಕಿತ್ಸೆಯ ಅಗತ್ಯವೂ ಇದೆ. ತುಚ್ಛ ಮೀರಿ ಮಾತನಾಡುವವರನ್ನು ಸರಿಪಡಿಸುವ ಪ್ರಾಥಮಿಕ ಹೊಣೆಗಾರಿಕೆ ಆಯಾ ಪಕ್ಷದ ಹಿರಿಯರದ್ದಾಗಿರುತ್ತದೆ. ಆದರೆ, ರವಿಕುಮಾರ್ ಅವರ ಮಾತನಾಡಿರುವ ಸಂದರ್ಭದಲ್ಲಿ ಹೇಳುವ ನೈತಿಕತೆಯ ಬದಲು ಬಿಜೆಪಿಯ ಹಿರಿಯ ನಾಯಕರು ಪ್ರದರ್ಶಿಸುತ್ತಿರುವುದು ದುರದೃಷ್ಟಕರ. ತಪ್ಪು ಮಾಡಿದವರ ಕಿವಿಹಿಂಡುವ ಬದಲು, ಅಧಿಕಾರಿಗಳ ಬಗ್ಗೆ ಹಲವು ಬಾರಿ ಅವಹೇಳನಕಾರಿಯಾಗಿ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಏಕೆ ಕ್ರಮ ಕೈಗೊಳ್ಳಲಾಗಿಲ್ಲ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ. ಹೀಗೆ ಪ್ರಶ್ನಿಸುವ ಅವರು, 'ಇನ್ನೊಬ್ಬರು ಮಾಡಿರುವುದನ್ನು ತಪ್ಪು ತನ್ನ ತಪ್ಪಿಗೆ ಸಮರ್ಥನೆಯಾಗುವುದಿಲ್ಲ ಎನ್ನುವುದನ್ನು ಮರೆತಿರುವಂತಿದೆ. ಸಮಾಜಕ್ಕೆ ಮೇಲ್ಪಂಕ್ತಿ ಹಾಕಿಕೊಡಬೇಕಾದ ಜನಪ್ರತಿನಿಧಿಗಳು ಸಾರ್ವಜನಿಕ ಸಭ್ಯತೆಯನ್ನು ರೂಢಿಸಿಕೊಳ್ಳುವುದು ಅಗತ್ಯ. ಆಡುವ ಮಾತಿನ ಅರ್ಥ ಮತ್ತು ಪರಿಣಾಮದ ಅರಿವು ಅವರಿಗೆ ಇರಲೇಬೇಕಾಗುತ್ತದೆ. ಜನಪ್ರತಿನಿಧಿಗಳ ಮಾತುಗಳು ಅವರು ಪ್ರತಿನಿಧಿಸುವ ಶಾಸನಸಭೆ ಹಾಗೂ ಪಕ್ಷದ ಘನತೆಗೂ ಸಂಬಂಧಿಸಿದ್ದಾಗಿರುತ್ತವೆ. ಆಡಿದ ಮಾತಿಗೆ ಕ್ಷಮೆ ಕೇಳುವ ಸೌಜನ್ಯವೂ ಇಲ್ಲದೆ ಹೋದರೆ, ಅಂಥ ರಾಜಕಾರಣಿಗಳ ಸಾಮಾಜಿಕ ಬದ್ಧತೆ ಪ್ರಶ್ನಾರ್ಹವಾಗುತ್ತದೆ. ರವಿಕುಮಾರ್ ಅವರ ವಿವಾದ, ಲಿಂಗಸಂವೇದನೆಗೆ ಸಂಬಂಧಿಸಿದಂತೆ ಎಲ್ಲ ರಾಜಕಾರಣಿಗಳಿಗೆ ಪಾಠವಾಗಬೇಕು.

ವಿವಿಗಳಿಗೆ ಸ್ವಾಯತ್ತತೆ ಮರೀಚಿಕೆಯೆ?



ವಿಶ್ಲೇಷಣೆ

ಪ್ರೊ. ಬಿ.ಕೆ. ಚಂದ್ರಶೇಖರ್

ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾಲಯಗಳು ತಮ್ಮ ಔನ್ನತ್ಯ ಕಂಡುಕೊಳ್ಳುವುದಕ್ಕೆ ಅವು ಹೊಂದಿರುವ 'ಸ್ವಾಯತ್ತತೆ'ಯೇ ಪ್ರಮುಖ ಕಾರಣ. ಶೈಕ್ಷಣಿಕ ಮತ್ತು ಆಡಳಿತಾತ್ಮಕ ನಿರ್ಧಾರಗಳನ್ನು ಅನುಷ್ಠಾನಕ್ಕೆ ತರುವಲ್ಲಿ ವಿವಿಗಳಿಗೆ ಇರುವ 'ಸ್ವಾಯತ್ತತೆ' ಅವುಗಳ ಬೆಳವಣಿಗೆಗೆ ಪೂರಕವಾಗಿದೆ. ಇದಕ್ಕೆ ಅತ್ಯುತ್ತಮ ನಿದರ್ಶನಗಳು: ಆಕ್ಸ್‌ಫರ್ಡ್, ಹಾರ್ವರ್ಡ್, ಕೊಲಂಬಿಯಾ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳು. ಈ ವಿವಿಗಳು ತಮ್ಮದೇ ದೃಷ್ಟಿಕೋನ ಮತ್ತು ಸ್ಪಷ್ಟ ಧ್ಯೇಯೋದ್ದೇಶಗಳನ್ನು ಹೊಂದಿವೆ. ಅವುಗಳ ಕಾರ್ಯ ನಿರ್ವಹಣೆಯಲ್ಲಿ ಸರ್ಕಾರ ಮೂಗು ತೂರಿಸುವಂತಿಲ್ಲ. ಅಂದರೆ, ವಿವಿಗೆ ಅನುದಾನ ನೀಡುವ ಸರ್ಕಾರಕ್ಕಾಗಲೀ ಅಥವಾ ಉದಾರವಾಗಿ ಆರ್ಥಿಕ ನೆರವು ದಾನಿಗಳಿಗಾಗಲೀ, ಹಣ ನೀಡುವ ಕಾರಣದಿಂದಾಗಿ ವಿವಿಗಳನ್ನು ನಿಯಂತ್ರಿಸುವ ಅಧಿಕಾರ ದೊರೆಯುವುದಿಲ್ಲ. ಈ ಅರಿವು, ವಿಶ್ವಶ್ರೇಷ್ಠ ವಿವಿಗಳಿಗೂ ಇದೆ, ಅವುಗಳಿಗೆ ಅನುದಾನ ನೀಡುವವರಿಗೂ ಇದೆ.

ಸುಸ್ಥಿರ ಸಮಾಜದ ಸ್ವಾಸ್ಥ್ಯ ರಕ್ಷಿಸುವ ಉದ್ದೇಶದಿಂದ ಜ್ಞಾನ ಸಂಪಾದನೆ ಮತ್ತು ಕೌಶಲವುಳ್ಳ ಪರಿಣತರನ್ನು ಬೆಳೆಸುವ ಮಾಧ್ಯಮದ ರೂಪದಲ್ಲಿ ಶಿಕ್ಷಣವನ್ನು ನೋಡಬಹುದಾಗಿದೆ. ಸಾರ್ವಜನಿಕ ಹಿತವನ್ನು ಬಯಸುವ ಯಾವುದೇ ಶಿಕ್ಷಣ ಸಂಸ್ಥೆ, ತನ್ನ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡುವವರಿಗೆ ಬದ್ಧರಾಗಿರಲು ಬಯಸದೆ, ಸ್ಪಷ್ಟ ಮಾನದಂಡಗಳ ಮೂಲಕ ಸಮಾಜಕ್ಕೆ ಉತ್ತರದಾಯಿ ಆಗಿರುವುದನ್ನು ತನ್ನ ಮೌಲ್ಯ ಆಗಿಸಿಕೊಂಡಿರುತ್ತದೆ.

ಶಿಕ್ಷಣ ಸರ್ವರಿಗೂ ಬೇಕಾದುದು, ಅದನ್ನು ಯಾರೂ ಯಾರಿಗೂ ನಿರಾಕರಿಸುವಂತಿಲ್ಲ. ಅದು ಮಾರುಕಟ್ಟೆಯ ವ್ಯಾಪಾರೀ ವಸ್ತುವೂ ಅಲ್ಲ. ಆರೋಗ್ಯ, ಕುಡಿಯುವ ನೀರಿನಂತೆ ಶಿಕ್ಷಣವೂ ಜನರ ಮೂಲಭೂತ ಹಕ್ಕು. ಶಿಕ್ಷಕರ ಪಾಠ ಪ್ರವಚನಗಳು, ಸಂಶೋಧನೆ, ವಿದ್ಯಾರ್ಥಿಗಳ ಕಲಿಕೆ ಹಾಗೂ ಜ್ಞಾನದ ಪರೀಕ್ಷೆ, ಇವೆಲ್ಲವನ್ನೂ ಸಂಸ್ಥೆಯಲ್ಲೇ ಇರುವ ತಜ್ಞರು ಅಥವಾ ಅವರಿಗೆ ಸಮಾನವಾದ ಹೊರಗಿನ ವಿದ್ವಾಂಸರುಗಳೇ ನಿರ್ವಹಿಸಬೇಕು. ಆಕ್ಸ್‌ಫರ್ಡ್, ಹಾರ್ವರ್ಡ್‌ನಂತಹ ವಿವಿಗಳಲ್ಲಿ ಎಂದಿನಿಂದಲೂ ನಡೆದು ಬಂದಿರುವ ಪದ್ಧತಿ ಇದು.

ಆಕ್ಸ್‌ಫರ್ಡ್, ಹಾರ್ವರ್ಡ್ ವಿವಿಗಳ ಮಾದರಿಗಳನ್ನು ನಮ್ಮ ವಿಶ್ವವಿದ್ಯಾಲಯಗಳೂ ಅನುಸರಿಸಬಹುದಾಗಿದೆ. ನಮ್ಮ ವಿವಿಗಳಿಗೆ ಸರ್ಕಾರದಿಂದ (ಅಥವಾ ಯು.ಜಿ.ಸಿ.ಯಿಂದ) ಅನುದಾನ ದೊರೆಯುತ್ತದೆ. ಈ ಅನುದಾನದ ಹಣದಿಂದ ಮಾಡಲಾದ ವೆಚ್ಚದ ವರದಿಯನ್ನು ಹಲವು ಹಂತದ ಸರ್ಕಾರಿ ವ್ಯವಸ್ಥೆಯ ಮೂಲಕ ಸಲ್ಲಿಸಲಾಗುತ್ತದೆ. ಅದರ ಬದಲಾಗಿ, ಅಕೌಂಟೆಂಟ್ ಜನರಲ್ ಅವರಿಗೆ ನೇರವಾಗಿ ಲೆಕ್ಕಪತ್ರದ ವರದಿ ಕೊಡಬಹುದು. ಪರಿಶೀಲನೆಯ ನಂತರ, ಅವರು ಶಾಸಕಾಂಗ ಹಾಗೂ ಆರ್ಥಿಕ ಇಲಾಖೆಗೆ ರವಾನಿಸಬಹುದು. ಈ ಮೂಲಕ, ವಿವಿಗಳ ಸ್ವಾಯತ್ತತೆಯನ್ನು ಸರ್ಕಾರ ಬಹುಪಾಲು ಒಪ್ಪಿಕೊಂಡಂತಾಗುವುದು.

ಪ್ರಶ್ನಿಸುವ ಮನೋಭಾವ, ನಿರಂತರ ಸಂಶೋಧನೆ, ಮುಕ್ತ ಚರ್ಚೆ ಹಾಗೂ ಸಂವಾದಗಳು ವಿವಿಗಳು ಜೀವಂತವಾಗಿರಲು ಅಗತ್ಯ. ಇದು ಸಾಧ್ಯವಾಗಬೇಕಾದರೆ, ಅವುಗಳಿಗೆ ಸಂಪೂರ್ಣ ಸ್ವಾಯತ್ತತೆ ಅನಿವಾರ್ಯ. ಈ ಸ್ವಾಯತ್ತತೆಗೆ ಅಡ್ಡಗೋಡೆ ಆಗಿರುವುದು ರಾಜಕೀಯ ಹಸ್ತಕ್ಷೇಪ. ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರಗಳ ಹಸ್ತಕ್ಷೇಪದಿಂದಾಗಿ ವಿವಿಗಳ ಸ್ವಾಯತ್ತತೆಗೆ ಕೊಡಲಿಪೆಟ್ಟು ಬಿದ್ದಿದೆ. ಕೋಲ್ಕತ್ತ, ಮುಂಬೈ ಹಾಗೂ ಮದ್ರಾಸ್ ವಿವಿಗಳನ್ನು ಸ್ಥಾಪಿಸಿದ ಬ್ರಿಟಿಷ್ ಸರ್ಕಾರ, ಆ ಸಂಸ್ಥೆಗಳನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳಲಿಕ್ಕಾಗಿ, ಪ್ರಾಂತ್ಯಗಳ ರಾಜ್ಯಪಾಲರನ್ನು ಆಯಾ ವಿವಿಗಳ ಕುಲಪತಿಯನ್ನಾಗಿ ನೇಮಿಸಿತು. ಆ ವ್ಯವಸ್ಥೆಯೇ ಸ್ವಾತಂತ್ರ್ಯಾನಂತರವೂ ಮುಂದುವರೆದಿರುವುದು ಸಮಸ್ಯೆಗೆ ಕಾರಣವಾಗಿದೆ. 1960ರ ನಂತರದ ದಶಕಗಳಲ್ಲಿ ರಾಜ್ಯಪಾಲರು, ಕೇಂದ್ರ ಸರ್ಕಾರದ ರಾಜಕೀಯ ಪ್ರತಿನಿಧಿಗಳಾಗಿ ರೂಪಾಂತರ ಹೊಂದಿದರು. ಇತ್ತೀಚೆಗೆ, ತಮಿಳುನಾಡಿನ ಆರ್.ಎನ್. ರವಿ, ಕೇರಳದಲ್ಲಿದ್ದ ಅರಿಫ್ ಮೊಹಮ್ಮದ್ ಖಾನ್ ಹಾಗೂ ಪಶ್ಚಿಮ ಬಂಗಾಳದ ಆನಂದ ಬೋಸ್ ಅವರು, ತಮ್ಮ ರಾಜ್ಯಪಾಲರ ಹುದ್ದೆಯ ಧ್ಯೇಯವನ್ನು ಮರೆತು, ಕಿಂಚಿತ್ತೂ ಸಂಕೋಚವಿಲ್ಲದೆ ಕೇಂದ್ರದ ರಾಜಕೀಯ ಏಜೆಂಟರಂತೆ ವರ್ತಿಸಿದರು. ಈ ರಾಜ್ಯಪಾಲರು, ರಾಜ್ಯ ವಿವಿಗಳ ಉಪಕುಲಪತಿಯ ನೇಮಕ ಸೇರಿದಂತೆ ಶಾಸಕಾಂಗ ಅನುಮೋದಿಸಿದ ಹಲವು ಮಸೂದೆಗಳಿಗೆ ಅಂಕಿತ ಹಾಕದೆ, ಕಡತಗಳನ್ನು ದೀರ್ಘಕಾಲ ಉಳಿಸಿಕೊಂಡು ನಿರಂಕುಶಪ್ರಭುಗಳಂತೆ ವರ್ತಿಸಿದ್ದಾರೆ.

ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗುವ ಅಧಿಕಾರ ರಾಜ್ಯಪಾಲರಿಗೆ ಸಂವಿಧಾನದತ್ತವಾಗಿ ಬಂದಿಲ್ಲ. ಬದಲಾಗಿ, ವಿವಿಧ ರಾಜ್ಯ ಸರ್ಕಾರಗಳೇ ರಚಿಸಿರುವ 'ವಿಶ್ವವಿದ್ಯಾಲಯ ಅಧಿನಿಯಮ' ಕೊಟ್ಟಿರುವ ಅಧಿಕಾರವದು (ಉದಾ: ಸೆಕ್ಷನ್ 12: 'ಕರ್ನಾಟಕದ ರಾಜ್ಯಪಾಲರು ತಮ್ಮ ಪದದ ಕಾರಣದಿಂದಾಗಿ ವಿಶ್ವವಿದ್ಯಾಲಯದ ಕುಲಾಧಿಪತಿ ಆಗಿರತಕ್ಕದ್ದು'). ಹಾಗಾಗಿ, ಉಪಕುಲಪತಿ ನೇಮಿಸುವ ರಾಜ್ಯಪಾಲರ ಅಧಿಕಾರವನ್ನು ರಾಜ್ಯ ಸರ್ಕಾರ ಹಿಂಪಡೆಯಬಹುದು. ಕಳೆದ ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ, ಸಂವಿಧಾನದತ್ತವಾದ ಒಕ್ಕೂಟ ವ್ಯವಸ್ಥೆಯನ್ನು ತಮಿಳುನಾಡಿನ ರಾಜ್ಯಪಾಲರ ನಡವಳಿಕೆ ನಿರ್ಲಕ್ಷಿಸಿರುವುದನ್ನು ಗುರ್ತಿಸಿ ಟೀಕಿಸಿದೆ. ರಾಜ್ಯಪಾಲರ ಹುದ್ದೆ ರಾಜಕೀಯ ಸ್ವರೂಪ ಪಡೆದುಕೊಂಡಿರುವ ಕುರಿತು ತೀವ್ರ ಅಸಮಾಧಾನವನ್ನೂ ವ್ಯಕ್ತಪಡಿಸಿದೆ.

ರಾಜಕಾರಣದ ಪೂರ್ವಗ್ರಹ ಮಾತ್ರವಲ್ಲದೆ, ವಿವಿಗಳಂತಹ ಸೃಜನಶೀಲ ಜ್ಞಾನ ಕೇಂದ್ರಗಳಿಗೆ ಮಾರ್ಗದರ್ಶಿ ಆಗುವಂತಹ ಶೈಕ್ಷಣಿಕ ಅರ್ಹತೆ ಇರುವ ರಾಜ್ಯಪಾಲರುಗಳು ಅತ್ಯಂತ ವಿರಳ. ಉದಾ: 1950–2020ರ ಅವಧಿಯಲ್ಲಿ ನೇಮಕವಾದ ಶೇ 54ರಷ್ಟು ರಾಜ್ಯಪಾಲರು ಸಕ್ರಿಯ ರಾಜಕಾರಣಿ ಆಗಿದ್ದವರು!

> ಒಂದೆಡೆ 'ಮೆಕಾಲೆ ಶಿಕ್ಷಣ ಪದ್ಧತಿ'ಯನ್ನು ವಿರೋಧಿಸಲಾಗುತ್ತಿದೆ. ಇನ್ನೊಂದೆಡೆ, ವಿದೇಶಿ ವಿವಿಗಳನ್ನು ಸ್ವಾಗತಿಸುವ ಮೂಲಕ 'ಮೆಕಾಲೆ ಶಿಕ್ಷಣ ಪದ್ಧತಿ'ಯನ್ನೇ ಬಲಪಡಿಸಲಾಗುತ್ತಿದೆ. ರಾಜಕೀಯ ಹಸ್ತಕ್ಷೇಪಕ್ಕೆ ನಮ್ಮ ವಿವಿಗಳ ಸ್ವಾಯತ್ತತೆ ಬಲಿಯಾಗಿದೆ.

ಕುಲಪತಿ ಸ್ಥಾನಕ್ಕೆ ರಾಜ್ಯಪಾಲರು ಬೇಡ ಎನ್ನುವುದಾದರೆ, ಆ ಹುದ್ದೆಯನ್ನು ಮುಖ್ಯಮಂತ್ರಿ ಅಲಂಕರಿಸಬಹುದೆ? 'ಮುಖ್ಯಮಂತ್ರಿಯವರು ವಿವಿಗಳ ಕುಲಪತಿ ಆಗಲಿ' ಎಂದು ಬೆಂಗಳೂರು ಸೆಂಟ್ರಲ್ ಯೂನಿವರ್ಸಿಟಿಯ ಮಾಜಿ ಉಪಕುಲಪತಿ ಪ್ರೊ. ಎಸ್. ಜಾಫೆಟ್ ಇತ್ತೀಚೆಗೆ ಹೇಳಿದ್ದಾರೆ. ಯಾವುದೇ ನಿರ್ದಿಷ್ಟ ವ್ಯಕ್ತಿ ಅಥವಾ ಮುಖ್ಯಮಂತ್ರಿಯನ್ನು ಗಮನದಲ್ಲಿ ಇಟ್ಟುಕೊಳ್ಳದೆ ಈ ಪ್ರಶ್ನೆಗೆ ವಸ್ತುನಿಷ್ಠ ಉತ್ತರ ಕಂಡುಕೊಳ್ಳಬೇಕಾಗಿದೆ. ಜಾಫೆಟ್ ಅವರು ತಮ್ಮ ಮಾತಿಗೆ ಉದಾಹರಣೆಯಾಗಿ ಗುಜರಾತ್ ಮಾದರಿಯನ್ನು ಉಲ್ಲೇಖಿಸಿದ್ದರು!

'ಗುಜರಾತ್ ಉನ್ನತ ಶಿಕ್ಷಣ ಪರಿಷತ್ ಕಾಯ್ದೆ–2016'ರ ಪ್ರಕಾರ, ಶಿಕ್ಷಣ ತಜ್ಞರ ಬದಲು ಮುಖ್ಯಮಂತ್ರಿಯೇ ಅದರ ಮುಖ್ಯಸ್ಥರು! ವಿವಿಯ ಯಾವುದೇ ನಿರ್ಧಾರವನ್ನು ರದ್ದು ಮಾಡುವ, ವಿವಿಯ ದೈನಂದಿನ ವ್ಯವಹಾರದಲ್ಲಿ ಮಧ್ಯಪ್ರವೇಶಿಸುವ ಅಧಿಕಾರ ಗುಜರಾತ್‌ನ ಉನ್ನತ ಶಿಕ್ಷಣ ಪರಿಷತ್‌ಗಿದೆ. ಅಂದರೆ, ಸರ್ಕಾರ ತನ್ನ ರಾಜಕೀಯ ಲೆಕ್ಕಾಚಾರದಂತೆ ವಿವಿಯ ಸ್ವಾಯತ್ತತೆಯ ಪರಿಕಲ್ಪನೆಯನ್ನು ಪರಿಶೀಲಿಸದೇ ನಡೆದುಕೊಳ್ಳಲಿಕ್ಕೆ ಗುಜರಾತ್ ಮಾದರಿಯಲ್ಲಿ ಅವಕಾಶವಿದೆ. 2016ರಲ್ಲಿ ವಿದ್ಯಾರ್ಥಿಗಳ ಪಿಎಚ್.ಡಿ. ಅಧ್ಯಯನಕ್ಕೆ 'ಹಿಂದುತ್ವ'ದ ಅಜೆಂಡಾ ಒಳಗೊಂಡಂತೆ 83 ಪ್ರಬಂಧಗಳ ಪಟ್ಟಿಯನ್ನು ಪರಿಷತ್ ಕಳಿಸಿತ್ತು! ಅದು ಈಗಲೂ ಜಾರಿಯಲ್ಲಿದೆ.

ನನಗೆ ತಿಳಿದಂತೆ, ಯಾವ ದೇಶದ ಉನ್ನತ ಶಿಕ್ಷಣದಲ್ಲೂ ಇಂತಹ ದುಃಸ್ಥಿತಿ ಇಲ್ಲ. ಹಾರ್ವರ್ಡ್, ಆಕ್ಸ್‌ಫರ್ಡ್ ಸೇರಿದಂತೆ ಹಲವಾರು ವಿಶ್ವಪ್ರಸಿದ್ಧ ವಿವಿಗಳು ಸರ್ಕಾರದ ಹಸ್ತಕ್ಷೇಪದಿಂದ ಮುಕ್ತವಾಗಿವೆ. ಇತ್ತೀಚೆಗೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರಾಜಕೀಯ ಕಾರಣದಿಂದಾಗಿ ಸರ್ಕಾರದ ಅನುದಾನವನ್ನು ದಿಢೀರನೆ ಹಿಂಪಡೆದರು. ಆಗಲೂ ಹಾರ್ವರ್ಡ್ ವಿವಿ ರಾಜಕೀಯ ಒತ್ತಡಕ್ಕೆ ಶರಣಾಗಲಿಲ್ಲ. ವರ್ತಮಾನದ 'ಶಕ್ತಿ ರಾಜಕೀಯ' ಸಮೀಕರಣದಲ್ಲಿ ಯಾವ ಮುಖ್ಯಮಂತ್ರಿಯೂ ಸಾವಧಾನದಿಂದ ಕೆಲಸ ಮಾಡುವುದು ಸುಲಭವಲ್ಲ. ವಿವಿಯ ಶೈಕ್ಷಣಿಕ ಗುಣಮಟ್ಟದ ಶ್ರೇಷ್ಠತೆಯನ್ನು ಕಾಪಾಡಲು, ಸಮಾಜವನ್ನು ಅರ್ಥೈಸಲು ಅಗತ್ಯವಾದ ನಿರಂತರ ಬೆಳವಣಿಗೆಯ ಜ್ಞಾನವನ್ನು ಅಧ್ಯಯನ ಮಾಡಿ ಅನುಷ್ಠಾನಕ್ಕೆ ತರುವಂತೆ ವಿವಿಯನ್ನು ಪ್ರೇರೇಪಿಸಲು ಓರ್ವ ಮುಖ್ಯಮಂತ್ರಿಗೆ ಸಾಧ್ಯವೆ? ಹಾಗೆ ನಿರೀಕ್ಷಿಸುವುದಾದರೂ ನ್ಯಾಯವೇ? ಮುಖ್ಯಮಂತ್ರಿಯೇ ವಿವಿಗಳ ಕುಲಪತಿ ಆಗಲಿ ಎನ್ನುವ ಅಪೇಕ್ಷೆ ವಾಸ್ತವದಿಂದ ಬಹಳ ದೂರವಿದೆ.

ವಿವಿಗಳ ಹುದ್ದೆಗಳಿಗೆ ನೇಮಕಗೊಳ್ಳುತ್ತಿರುವ ಬೋಧಕರಿಗೆ ಅದೊಂದು ಜೀವನೋಪಾಯದ ಉದ್ಯೋಗದಂತಾಗಿದೆ; ಉಪಕುಲಪತಿ ಆಯ್ಕೆಯಲ್ಲಿ ರಾಜಕೀಯ ಹಸ್ತಕ್ಷೇಪ ನಡೆದರೆ ವಿವಿ ಅರಾಜಕಸ್ಥಿತಿಯ ಒಂದು ಸಂಸ್ಥೆಯಾಗಲಿದೆ ಎನ್ನುವ ಶಿಕ್ಷಣ ತಜ್ಞ ಡಾ. ಎಚ್.ಎ. ರಂಗನಾಥ್ ಅವರ ಅಭಿಪ್ರಾಯ, ಸದ್ಯದ ಉನ್ನತ ಶಿಕ್ಷಣದ ಸ್ಥಿತಿಗತಿಗೆ ಕನ್ನಡಿ ಹಿಡಿಯುವಂತಿದೆ. 'ಮೆಕಾಲೆ ಶಿಕ್ಷಣ ಪದ್ಧತಿಯನ್ನು ಕೊನೆಗೊಳಿಸಿ, ಅದರ ಸ್ಥಾನದಲ್ಲಿ ಶುದ್ಧ ಭಾರತೀಯ ಶಿಕ್ಷಣ'ವನ್ನು ತರುವುದಾಗಿ ಯಾವ ರಾಜಕೀಯ ಪಕ್ಷ ಹಾಗೂ ಅದರ ಸರ್ಕಾರ ಹೇಳಿಕೊಂಡೇ ಬಂದಿದೆಯೋ, ಅದೇ ಪಕ್ಷ– ಸರ್ಕಾರ ಈಗ ವಿದೇಶಿ ವಿವಿಗಳಿಗೆ ಅಂದರೆ, ಮೆಕಾಲೆ ಶಿಕ್ಷಣ ಪದ್ಧತಿಗೆ ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿದೆ. 10 ವರ್ಷಗಳ ಹಿಂದೆಯೇ ಗುಜರಾತ್‌ನಲ್ಲಿ ಅಲ್ಲಿನ ಸರ್ಕಾರ, 'ಗುಜರಾತ್ ಇಂಟರ್ ನ್ಯಾಷನಲ್ ಫೈನಾನ್ಸ್ ಟೆಕ್–ಸಿಟಿ' (ಗಿಫ್ಟ್ ಸಿಟಿ) ಎಂಬ ವಿಶಾಲವಾದ ಸ್ಥಳದಲ್ಲಿ ವಿದೇಶಿ ವಿವಿಗಳು ತಮ್ಮ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ವಿಶೇಷ ಅನುಕೂಲ ಮಾಡಿಕೊಟ್ಟಿತ್ತು. ಯು.ಜಿ.ಸಿ. ಅಥವಾ ಸರ್ಕಾರ ವಿಧಿಸುವ ಶುಲ್ಕವನ್ನು ಮೆಕಾಲೆ ವಿವಿಗಳು ಒಪ್ಪುವುದು ಅಸಂಭವ.

ತೀವ್ರ ಸ್ವರೂಪದ ಬೆಳವಣಿಗೆ ತಂತ್ರಜ್ಞಾನ ಕ್ಷೇತ್ರದಲ್ಲಿ ಇದೀಗ ಸಾಕಾರಗೊಂಡಿದ್ದು, ಶಿಕ್ಷಣದ ಎಲ್ಲ ಹಂತಗಳಲ್ಲಿ ಶಿಕ್ಷಕರ ಬೋಧನೆ ಮತ್ತು ವಿದ್ಯಾರ್ಥಿಗಳ ಕಲಿಕೆಯಲ್ಲಿ ತಂತ್ರಜ್ಞಾನ ಪಾತ್ರ ವಹಿಸುತ್ತಿದೆ. ಸಂಶೋಧನಾ ಲೇಖನಗಳು, ವಿಡಿಯೊ ಇತ್ಯಾದಿ ಡಿಜಿಟಲ್ ವ್ಯವಸ್ಥೆಯಲ್ಲಿ ಕೂಡಲೇ ಸಿಗುತ್ತಿವೆ. ಶಿಕ್ಷಣ ಮುಗಿಸಿ ಹೊರಬರುವ ವಿದ್ಯಾರ್ಥಿಗಳಿಗೆ ತಂತ್ರಜ್ಞಾನದ ಉತ್ಕರ್ಷದಿಂದಾಗಿ ಹಲವು ಉದ್ಯೋಗಗಳಿಗೆ ಮುಕ್ತ ಪ್ರವೇಶ ಸಿಗಲಿದೆ.

ಸಂವಿಧಾನದ ಮೌಲ್ಯಗಳ ಪ್ರತಿಪಾದನೆ, ನಿತ್ಯ ಜೀವನದಲ್ಲಿ ಮಾನವೀಯತೆ ಹಾಗೂ ವಿದ್ಯಾರ್ಥಿಗಳಲ್ಲಿ ನಾಗರಿಕ ಪ್ರಜ್ಞೆ ರೂಪಿಸುವುದು ಶಿಕ್ಷಣದ ಮುಖ್ಯ ಗುರಿ. ಬ್ರಿಟನ್ನಿನ ಉನ್ನತ ಶಿಕ್ಷಣವನ್ನು ನಿಯಂತ್ರಿಸುವ ಇಲಾಖೆಯ ಅಂಗಸಂಸ್ಥೆಯಾದ 'ವಿದ್ಯಾರ್ಥಿಗಳ ಕಚೇರಿ'ಯು (ಸ್ಟೂಡೆಂಟ್ ಆಫೀಸ್), ಇದೇ ವರ್ಷದ ಜೂನ್ 19ರಂದು ಹೊಸ ಮಾರ್ಗಸೂಚಿ ಹೊರಡಿಸಿ, 'ವಾಕ್ ಸ್ವಾತಂತ್ರ್ಯ' ಹಾಗೂ 'ಶೈಕ್ಷಣಿಕ ಸ್ವಾತಂತ್ರ್ಯ'ಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ವಿವಿಗಳ ಜವಾಬ್ದಾರಿ ಎಂದು ಸೂಚಿಸಿದೆ. ಈ ಎರಡೂ ಸ್ವಾತಂತ್ರ್ಯಗಳು ಉನ್ನತ ಶಿಕ್ಷಣದಲ್ಲಿ ನಿರ್ಣಾಯಕ ಪರಿಕಲ್ಪನೆಗಳು. ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಿಸುವುದರ ಜೊತೆಗೆ ಮುಜುಗರ, ಕೀಳರಿಮೆಯಿಂದ ಹೊರಬರಲೂ ಇವು ಅಗತ್ಯವಾಗಿವೆ. ತಂತ್ರಜ್ಞಾನದ ಅಪಾರ ಬೆಳವಣಿಗೆಯ ನಡುವೆಯೂ ಬ್ರಿಟಿಷ್ ಸರ್ಕಾರ, ಮಹತ್ವದ ಸಾಮಾಜಿಕ– ರಾಜಕೀಯ ಮೌಲ್ಯಗಳನ್ನು ಪ್ರತಿಪಾದಿಸಿರುವುದು ವಿಶೇಷ. ಭಾರತದಲ್ಲಿ ಇಂತಹ ನಿಲುವು, ಬೆಳವಣಿಗೆ ಸಾಧ್ಯವೆ?

ವಾಚಕರ ವಾಣಿ

ಸೂಪರ್ ಫಾಸ್ಟ್ ರೈಲು ಓಡಿಸಿ

ವಿಜಯಪುರದಿಂದ ಬೆಂಗಳೂರಿಗೆ ತಲುಪಲು ಸದ್ಯ ಎರಡು ರೈಲುಗಳಿದ್ದು, 14ರಿಂದ 17 ತಾಸು ಬೇಕಿದೆ. ಆದರೆ, ವಿಜಯಪುರದಿಂದ ಬಾಗಲಕೋಟೆ, ಗದಗ, ಹೊಸಪೇಟೆ, ಬಳ್ಳಾರಿ, ಗುಂತಕಲ್ ಮಾರ್ಗವಾಗಿ ಬೆಂಗಳೂರಿಗೆ ಒಂದು ಸೂಪರ್ ಫಾಸ್ಟ್ ರೈಲನ್ನು ಓಡಿಸಿದರೆ ತಲುಪಲು ಕೇವಲ 11 ಗಂಟೆ ಸಾಕು. ಹಾಗಾಗಿ, ಈ ಮಾರ್ಗವಾಗಿ 'ಕೆಎಸ್‌ಆರ್ ಬೆಂಗಳೂರು' ಅಥವಾ ಕೆಂಗೇರಿ ನಿಲ್ದಾಣಕ್ಕೆ ಸೂಪರ್ ಫಾಸ್ಟ್ ರೈಲನ್ನು ನಿತ್ಯ ಓಡಿಸಲು ರೈಲ್ವೆ ಇಲಾಖೆಯು ಮುಂದಾಗಬೇಕಿದೆ.

ಅಶೋಕ್ ಉಗಾರ, ವಿಜಯಪುರ

ಕನ್ನಡ ಭಾಷೆಗೆ ಸಂಚಕಾರ

ರಾಜ್ಯ ಸರ್ಕಾರವು 2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವಂತೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದ 4,137 ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಆಂಗ್ಲ ಮಾಧ್ಯಮ ತರಗತಿ ಆರಂಭಿಸಲು ನಿರ್ಧರಿಸಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಸರ್ಕಾರದ ಈ ನಡೆ ರಾಜ್ಯದ ಆಡಳಿತ ಭಾಷೆ, ಕನ್ನಡಿಗರ ಅಸ್ಮಿತೆಗೆ ಸಂಚಕಾರ ತರಲಿದೆ. ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಬೋಧಿಸಿದರೆ ಭವಿಷ್ಯದಲ್ಲಿ ಕನ್ನಡಕ್ಕೆ ಉಳಿಗಾಲವಿಲ್ಲ ಎಂಬುದನ್ನು ಆಳುವ ವರ್ಗವು ಮನಗಾಣಬೇಕಿದೆ.

ಕೂಡಲೇ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯು ತನ್ನ ಆದೇಶವನ್ನು ಹಿಂದಕ್ಕೆ ಪಡೆಯಬೇಕಿದೆ. ಇದು ಸ್ವಾಭಿಮಾನಿ ಕನ್ನಡಿಗರ ಒತ್ತಾಯವಾಗಿದೆ. ಮಕ್ಕಳಿಗೆ ಪ್ರಾಥಮಿಕ ಹಂತದ ಶಿಕ್ಷಣವನ್ನು ಕನ್ನಡದಲ್ಲಿಯೇ ಬೋಧಿಸಬೇಕಿದೆ. ಸರ್ಕಾರದ ನಡೆಯನ್ನು ಸಂಘ- ಸಂಸ್ಥೆಗಳು ಪ್ರಶ್ನಿಸಬೇಕಿದೆ. ಮುಖ್ಯಮಂತ್ರಿ ಮತ್ತು ಅಧಿಕಾರಿಗಳು ರಾಜ್ಯದಲ್ಲಿ ಕನ್ನಡದ ಸಾರ್ವಭೌಮತ್ವ ಉಳಿಸಲು ಆದ್ಯತೆ ನೀಡಬೇಕು.

ಬೀರಪ್ಪ ಡಿ. ಡಂಬಳಿ, ಅಥಣಿ

ಒಳ್ಳೆಯ ನಿರ್ಧಾರ

ಸಣ್ಣ ಅಪರಾಧಗಳಿಗೆ ಸಂಬಂಧಿಸಿದ ಕೆಲವು ಕಾನೂನುಗಳನ್ನು 'ಅಪರಾಧ ಮುಕ್ತ'ಗೊಳಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಒಳ್ಳೆಯ ನಿರ್ಧಾರ (ಪ್ರ.ವಾ., ಜುಲೈ 5). 2023ರಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ 'ಜನ ವಿಶ್ವಾಸ' ಮಸೂದೆಯಲ್ಲಿ ಸಣ್ಣ ತಪ್ಪುಗಳಿಗೆ ಜೈಲು ಶಿಕ್ಷೆಯ ಬದಲು ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರಗಳ ಈ ನಿರ್ಧಾರ ಸರಿ ಇದೆ. ಅಪರಾಧಿಗಳಿಗೆ ದಂಡದ ಮೊತ್ತ ತುಂಬಲೂ ಕೆಲವೊಮ್ಮೆ ಹಣ ಇರುವುದಿಲ್ಲ. ಈ ಬಗ್ಗೆ ಸರ್ಕಾರ ಕಾನೂನು ತಜ್ಞರ ಬಳಿ ಚರ್ಚಿಸಿ ಯೋಜನೆ ರೂಪಿಸಬೇಕಿದೆ.

ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ದ್ವಿಭಾಷಾ ನೀತಿ ಸೂಕ್ತ

'ಇದು ದ್ವಿಭಾಷಾ ಸೂತ್ರದ ಸಮಯ' (ಪುರುಷೋತ್ತಮ ಬಿಳಿಮಲೆ, ಪ್ರ.ವಾ., ಜುಲೈ 3) ಬರಹವು ಕನ್ನಡಿಗರ ಕಣ್ತೆರೆಸುವಂತಿದೆ. 1968ರಿಂದಲೇ ಶಿಕ್ಷಣದಲ್ಲಿ ತ್ರಿಭಾಷಾ ನೀತಿ ಅಳವಡಿಸಿಕೊಂಡ ಕರ್ನಾಟಕಕ್ಕೆ ಅದರಿಂದ ಯಾವುದೇ ಪ್ರಯೋಜನವಾಗಿಲ್ಲ. ಅದು ಹಿಂದಿ ಹೇರಿಕೆಗೆ ಬಳಕೆಯಾಗುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಕಳೆದ ವರ್ಷ 1.42 ಲಕ್ಷ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಯ ಹಿಂದಿ ಭಾಷಾ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವುದು ಆಘಾತಕಾರಿ. ಅನಗತ್ಯವಾದ ಭಾಷೆಯೊಂದನ್ನು ಶಿಕ್ಷಣದಲ್ಲಿ ಕಡ್ಡಾಯವಾಗಿ ಅಳವಡಿಸಿ ಮಕ್ಕಳ ಭವಿಷ್ಯಕ್ಕೆ ಕಂಟಕವಾಗಿರುವುದು ಶೋಚನೀಯ.

ಹಿಂದಿ ಕಲಿಕೆಯಿಂದ ಕರ್ನಾಟಕದ ಜನರಿಗೆ ಉದ್ಯೋಗದಲ್ಲಿ ಯಾವುದೇ ಪ್ರಯೋಜನವಾಗಿಲ್ಲ. ಬದಲಾಗಿ ಉತ್ತರ ಭಾರತದ ಹಿಂದಿ ಭಾಷಿಕರೇ ಕರ್ನಾಟಕದತ್ತ ದುಡಿಮೆಗಾಗಿ ಬರುತ್ತಿದ್ದಾರೆ. ಬಾಲ್ಯದಲ್ಲೇ ಮಕ್ಕಳಿಗೆ ಹಿಂದಿ ಕಲಿಕೆಯನ್ನು ಹೇರುವುದು ಸರ್ವಥಾ ಸಮರ್ಥನೀಯವಲ್ಲ. ಹಿಂದಿಯಾಗಲಿ, ಬೇರಾವುದೇ ಭಾಷೆಯಾಗಲಿ, ಅವರವರ ಅಗತ್ಯಕ್ಕೆ ತಕ್ಕಂತೆ ಆಯ್ಕೆಯಾಗಿರಬೇಕೇ ಹೊರತು ಹೇರಿಕೆಯಾಗಬಾರದು. ರಾಜ್ಯ ಸರ್ಕಾರವು ದ್ವಿಭಾಷಾ ನೀತಿಗೆ ಮರಳುವುದು ಅತ್ಯಂತ ಸೂಕ್ತ.

ವಿಕಾಸ್ ಹೆಗಡೆ, ಬೆಂಗಳೂರು

ಯಾತ್ರಿಕರಿಗೆ ಸ್ವಾಗತ: ಖುಷಿ ನೀಡಿತು

ಅಮರನಾಥ ಯಾತ್ರಿಕರಿಗೆ ಕಾಶ್ಮೀರದ ಸ್ಥಳೀಯ ಮುಸ್ಲಿಮರು ಹೂವಿನ ಪಕಳೆಗಳನ್ನು ಚೆಲ್ಲಿ ಸ್ವಾಗತ ಕೋರಿದ್ದಾರೆ. ಪಹಲ್ಗಾಮ್ ಘಟನೆ ಬಳಿಕ ಬಾಡಿಹೋಗಿದ್ದ ಭಾರತೀಯರ ಮನಸ್ಸುಗಳಿಗೆ ಉಲ್ಲಾಸ ನೀಡುವ ಸುದ್ದಿ ಇದಾಗಿದೆ. ಇದನ್ನು ಓದಿ ನನ್ನ ಹೃದಯ ಅರಳಿತು.

ಭಾರತೀಯರ ಜೀವನಾಡಿಯಲ್ಲಿ ಸಾಮರಸ್ಯ, ನಂಬಿಕೆ, ಗೌರವ, ಧರ್ಮ ನಿರಪೇಕ್ಷತೆ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಇದು ನಿದರ್ಶನ. ನಾಲ್ಕಾರು ದಶಕದ ಹಿಂದೆ ಗ್ರಾಮೀಣ ಪರಿಸರದಲ್ಲಿ ಹಾಸು ಹೊಕ್ಕಾಗಿದ್ದ ಹಿರಿಯರ ಆದರ್ಶ ನಡೆ ನೆನಪಾಯಿತು.

ಯಲುವಹಳ್ಳಿ ಸೊಣ್ಣೇಗೌಡ, ಚಿಕ್ಕಬಳ್ಳಾಪುರ

ಚಾಮುಂಡಿ ಬೆಟ್ಟ: ವಸ್ತ್ರಸಂಹಿತೆ ಅಗತ್ಯ

'ನಾಡದೇವತೆ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಬರುವ ಭಕ್ತರಿಗೆ ವಸ್ತ್ರಸಂಹಿತೆ ಜಾರಿಯಾಗಬೇಕು. ಇದರಿಂದ ಭಕ್ತರಿಗೂ ಸಮಸ್ಯೆಯಾಗಬಾರದು' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿರುವುದು ಶ್ಲಾಘನೀಯ. ತಿರುಪತಿ ಮಾದರಿಯಲ್ಲಿ ಚಾಮುಂಡಿ ಬೆಟ್ಟದಲ್ಲಿಯೂ ಮೊಬೈಲ್ ಫೋನ್ ಹಾಗೂ ಇತರ ವಿದ್ಯುನ್ಮಾನ ಸಾಧನಗಳ ಬಳಕೆಗೆ ನಿಷೇಧ ಹೇರಬೇಕು. ಪ್ರತಿದಿನವೂ ಈ ಕ್ಷೇತ್ರಕ್ಕೆ ಸಾವಿರಾರು ಭಕ್ತರು ಭೇಟಿ ನೀಡುತ್ತಾರೆ. ಅವರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಸರ್ಕಾರ ಮುಂದಾಗಬೇಕು.

ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು

ಚಾವಡಿ

ಅಮ್ಮನ ಹೆಸರಿರಲಿ



ಪಾಲಕರು ಎಂಬ ಜಾಗದಲ್ಲಿ ತಂದೆಯ ಹೆಸರಿನ ಬದಲಿಗೆ ತಾಯಿಯ ಹೆಸರು ಮಾತ್ರವೇ ಇರುವಂತಹ ಕಾನೂನು ಬರಲಿ. ಅದರಿಂದ, ಎಷ್ಟೋ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಮುಜುಗರ ತಪ್ಪುತ್ತದೆ. ಮಗುವಿನ ಜವಾಬ್ದಾರಿಯನ್ನೇ ತೆಗೆದುಕೊಳ್ಳದೆ ಎಲ್ಲೋ ಇರುವವರ ಹೆಸರನ್ನು ಪ್ರತೀ ಸಲ ಬರೆಯುವಾಗ ಆಗುವ ಹಿಂಸೆ ಮತ್ತು ಮುಜುಗರ ತಪ್ಪಬೇಕು.

ಕೆ.ಜೆ. ಜಯಲಕ್ಷ್ಮಿ ನಾಯಕ, ಸಾಮಾಜಿಕ ಕಾರ್ಯಕರ್ತೆ, ಫೇಸ್‌ಬುಕ್‌ನಿಂದ

ಕಿಡಿನುಡಿ



ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ಸತ್ಯ. ನಾನು ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡುವುದಿಲ್ಲ. ಆದರೆ, ಸರ್ಕಾರ ನಡೆಸುತ್ತಿರುವವರೇ ಲೂಟಿ ಹೊಡೆಯುತ್ತಿದ್ದಾರೆ, ಅದು ನಿಲ್ಲಬೇಕು. ಲೂಟಿ ಹೊಡೆಯುವುದು ನಿಂತರೆ ರಾಜ್ಯ ಅಭಿವೃದ್ಧಿಯಾಗುತ್ತದೆ.

ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 7-7-2000

• ಸೇಡಂ: ಕಮಲಾವತಿ ನದಿಯಲ್ಲಿ ಪ್ರವಾಹ– 500 ಮನೆ ಜಲಾವೃತ

ಬೆಂಗಳೂರು, ಜುಲೈ 6– ರಾಜ್ಯದ ಹಲವೆಡೆ ಮುಂಗಾರು ಚುರುಕಾಗಿದ್ದು, ಸೇಡಂ ಪಟ್ಟಣದ ಪಕ್ಕದಲ್ಲೇ ಹರಿಯುವ ಕಮಲಾವತಿ ನದಿ ಉಕ್ಕಿ ಹರಿದು 500ಕ್ಕೂ ಹೆಚ್ಚು ಮನೆಗಳು ಜಲಾವೃತವಾಗಿವೆ. ಮರವೊಂದು ಜೀಪ್ ಮೇಲೆ ಬಿದ್ದು ಅದರ ಚಾಲಕ ಮೃತಪಟ್ಟಿದ್ದಾರೆ. ಕಾರವಾರದಲ್ಲಿ ಇಂದು ಭಾರಿ ಮಳೆ ಸುರಿದ ಕಾರಣ ಶಾಲಾ– ಕಾಲೇಜುಗಳಿಗೆ ರಜೆ ಘೋಷಿಸಲಾಯಿತು. ಮಂಗಳೂರು, ಮಡಿಕೇರಿ ಜಿಲ್ಲೆಗಳಲ್ಲೂ ಬಿರುಸಿನ ಮಳೆಯಾಗಿರುವುದು ವರದಿಯಾಗಿದೆ.

• ಟೊಮೆಟೊ ಮದ್ದು

ನವದೆಹಲಿ, ಜುಲೈ 6 (ಯುಎನ್‌ಐ)– ಟೊಮೆಟೊ ರಸ, ವಿಟಮಿನ್ ಸಿ ಮತ್ತು ಇ ಗಳ ಬಳಕೆಯಿಂದ ಮಧುಮೇಹಿಗಳ ಹೃದಯಸ್ತಂಭನ ತಡೆಯಲು ಸಾಧ್ಯ. ರೋಗ ಕಾಣಿಸಿಕೊಳ್ಳುವವರೆಗೆ ಕಾಯದೇ ಟೊಮೆಟೊ, ಹಣ್ಣು, ತರಕಾರಿ ಹೆಚ್ಚಾಗಿ ಸೇವಿಸಿದಲ್ಲಿ ಮಧುಮೇಹ ಬೇಗ ಬಾರದಂತೆ ನೋಡಿಕೊಳ್ಳಬಹುದು ಎಂದು ದೆಹಲಿ ಮಧುಮೇಹ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಎ.ಕೆ. ಜಿಂಗನ್ ಸಲಹೆ ನೀಡಿದ್ದಾರೆ. ಟೊಮೆಟೊ ರಸದಲ್ಲಿರುವ ಲೈಕೊಪಿನ್ ಕೊಲೆಸ್ಟರಾಲ್ ಆಮ್ಲೀಕರಣವನ್ನು ತಪ್ಪಿಸುತ್ತದೆ.

75 ವರ್ಷಗಳ ಹಿಂದೆ

ಶುಕ್ರವಾರ, 7-7-1950

• ಸಂಕುಚಿತ ಪ್ರಾಂತೀಯ ಭಾವಕ್ಕೆ ಎಳ್ಳಷ್ಟೂ ಸೊಪ್ಪು ಹಾಕಬೇಡಿ

ನವದೆಹಲಿ, ಜುಲೈ 6– 'ತಾನು ಭಾರತೀಯನೆಂದು ಕರೆದುಕೊಳ್ಳುವ' ಪ್ರತಿಯೊಬ್ಬನೂ ಸಂಕುಚಿತ ಪ್ರಾಂತೀಯತೆಯ ಪ್ರತಿಯೊಂದು ಚಿಹ್ನೆಯನ್ನೂ ದೇಶದ ಇತಿಹಾಸದ ಇಂದಿನ ಸನ್ನಿವೇಶದಲ್ಲಿ ಖಂಡಿಸಬೇಕೆಂದು ಕೇಂದ್ರ ಸರ್ಕಾರದ ಶಿಕ್ಷಣ ಸಚಿವ ಮೌಲಾನ ಅಬ್ದುಲ್ ಕಲಾಂ ಆಜಾದರು ಇಂದು ಮನವಿ ಮಾಡಿಕೊಂಡಿದ್ದಾರೆ.

'ದೇಶದ ಜನರೆಲ್ಲರೂ, ಅವರು ಯಾವುದೇ ಪ್ರದೇಶದವರಾಗಲೀ, ಭಾರತೀಯರೇ. ಭಾರತದ ನಿಷ್ಠೆಯನ್ನು ಮೀರಿದ ಯಾವ ನಿಷ್ಠೆಯೂ ಅವರಿಗೆ ಇರಕೂಡದು' ಎಂದೂ ಅವರು ಘೋಷಿಸಿದ್ದಾರೆ. ಮೌಲಾನ ಆಜಾದರು 'ಭಾಷೆ, ಪ್ರಾಂತ ಅಥವಾ ಇತರ ಸಂಕುಚಿತ ಭಾವನೆಯನ್ನು ಲಂಬಿಸಿದ ವಿಚ್ಛಿದ್ರಕಾರಕ ಪ್ರವೃತ್ತಿಗಳ' ಬೆಳವಣಿಗೆಗಳನ್ನು ತೆಗಳಿದ್ದಾರೆ.

ಚುರುಮುರಿ



ಇದುವೇ ಭಾಗ್ಯ!

• ಸುಮಂಗಲಾ

'ಇದು ಭಾಗ್ಯ, ಇದು ಭಾಗ್ಯವಯ್ಯಾ' ಎಂದು ಬೆಕ್ಕಣ್ಣ ರಾಗವಾಗಿ ಹಾಡುತ್ತಿತ್ತು.

'ಎಂಥಾ ಭಾಗ್ಯ... ಯಾರಿಗೆ ಭಾಗ್ಯ' ನನಗೆ ಅಚ್ಚರಿಯಾಯಿತು.

'ಸಿದ್ದು ಅಂಕಲ್ಲಿಗೆ ಸಿಎಂ ಕುರ್ಚಿ ಭಾಗ್ಯ ಇನ್ನೂ ಮೂರು ವರ್ಷಕ್ಕೆ ಪಕ್ಕಾ ಆಗೈತಿ. ಉಳಿದವರಿಗೂ ಅವರವರ ಕುರ್ಚಿ ಭಾಗ್ಯ ಮುಂದುವರೀತೈತೆ. ಮಂತ್ರಿಮಹೋದಯರ ಅಧಿಕಾರ ಭಾಗ್ಯವೇ ಶ್ರೀಸಾಮಾನ್ಯರ ಸೌಭಾಗ್ಯವಯ್ಯಾ!' ಬೆಕ್ಕಣ್ಣ ಕಣಿ ನುಡಿಯಿತು.

'ಅಲ್ಲಲೇ... ದೇವನಹಳ್ಳಿ- ಚನ್ನರಾಯಪಟ್ಟಣದಲ್ಲಿ 1,777 ಎಕರೆ ಭೂಸ್ವಾಧೀನಕ್ಕೆ ಮುಂದಾಗ್ಯಾರೆ. ರೈತರ ಅನ್ನ ಕಸಿದುಕೊಂಡರೆ, ಅವರಿಗೆಲ್ಲಿಯ ಭಾಗ್ಯ' ಎಂದೆ ಸಿಟ್ಟಿನಿಂದ.

'ಪಾಟೀಲ ಅಂಕಲ್ಲು ಅವರ ಸ್ವಂತಕ್ಕೆ ಮಾಡಾಕೆ ಹತ್ತಿಲ್ಲ! ಅಷ್ಟ್ ದೊಡ್ ಏರೊಸ್ಪೇಸ್ ಪಾರ್ಕ್ ಮಾಡಿದರೆ ರಾಜ್ಯಕ್ಕೆ ಬಂಡವಾಳ ಬರತೈತೆ... ಕೈಗಾರಿಕಾ ಪ್ರಗತಿ ಆಗತೈತೆ... ಇಡೀ ವಿಶ್ವವೇ ಬೆಂಗಳೂರಿನ ಕಡೆ ತಿರುತಿರುಗಿ ನೋಡತೈತೆ' ಬೆಕ್ಕಣ್ಣ ಕನಸುಗಣ್ಣಿನಿಂದ ವಿವರಿಸಿತು.

'ಅದು ಭಲೋ ಫಲವತ್ತಾಗಿರೋ ಭೂಮಿ. ರೈತರು ತರಕಾರಿ, ಹಣ್ಣುಹಂಪಲು, ಹೂವು ಬೆಳೀತಾರೆ ಅಲ್ಲಿ... ಏರೊಸ್ಪೇಸ್ ಬಂಜರು ನೆಲದಾಗೆ ಮಾಡಬೇಕು'.

'ರೈತರಿಗೆ ಪರಿಹಾರ ಕೊಡ್ತಾರೇಳು'.

'ಕೋಟಿಗಟ್ಟಲೆ ಬೆಲೆಬಾಳೋ ಜಮೀನಿಗೆ ಬರೇ ಎಂಬತ್ತು ಲಕ್ಷ ಕೊಡ್ತಾರಂತೆ. ಹತ್ತಾರು ಸಲ ಅಲೆದಾಡಿಸಿ ಅರ್ಧಂಬರ್ಧ ಕೊಡತಾರೆ, ಅದ್ರಾಗೂ ಬ್ರೋಕರ್‌ಗಳಿಗೆ ಲಂಚ ಕೊಡಬೇಕು' ಎಂದೆ ಬೇಸರದಿಂದ.

'ಎಲ್ಲಾನೂ ಒಕ್ಕಣ್ಣಿನಿಂದ ನೋಡಬ್ಯಾಡ! ಇಮಾನ ಕಂಪನಿಗಳಿಂದ ಉದ್ಯೋಗಾವಕಾಶ, ಕೈಗಾರಿಕಾ ಪ್ರಗತಿ, ತಾಂತ್ರಿಕ ಅಭಿವೃದ್ಧಿ, ಬಂಡವಾಳದ ಹರಿವು ಹೆಚ್ಚಾಗತೈತಿ'.

'ರೈತರಿಗೇನು ಭಾಗ್ಯ ಸಿಗತೈತೆ?'

'ಅವರಿಗೂ ಏರೊಸ್ಪೇಸ್ ಕಂಪನಿಗಳಲ್ಲಿ ಚಪರಾಸಿ ಕೆಲಸ, ಹೌಸ್‌ಕೀಪಿಂಗ್ ಕೆಲಸ, ಸೆಕ್ಯುರಿಟಿ ಕೆಲಸ ಕೊಡತಾರಲ್ಲ... ಇನ್ನೇನು ಬೇಕು?'

'ಮಂಗ್ಯಾನಂಥವನೇ... ಹೊಲಕ್ಕೆ ಮಾಲೀಕರಾಗಿರಾಗಿದ್ದವರು ಚಪರಾಸಿ ಆಗಬೇಕನಲೇ? ಫಲವತ್ತಾದ ಭೂಮಿಯನ್ನ ಕಾರ್ಪೊರೇಟ್ ಕುಳಗಳಿಗೆ ಕೊಟ್ಟು, ಮಂತ್ರಿಗಳು ಆಮೇಲೆ ಹೊಟ್ಟೆಗೇನು ತಿಂತಾರಂತೆ?' ನಾನು ಗುರ್ ಎಂದೆ. ಬೆಕ್ಕಣ್ಣ ಬಾಲ ಮುದುರಿ ಗಪ್ಪಾಯಿತು.

ಸಂಗತ

ನಿಂತ ನೆಲ ನುಂಗುವ ಅಂತರಗಂಗೆ

ಅಂತರಗಂಗೆ ಹೂವು ನೋಡಲಿಕ್ಕೆ ಮೋಹಕ. ಅದರ ಪರಿಣಾಮ ಮಾರಕ. ಈ ಕಳೆಸಸ್ಯಕ್ಕೆ ಜಲಮೂಲಗಳನ್ನು ಆಪೋಶನ ತೆಗೆದುಕೊಳ್ಳುವ ಸಾಮರ್ಥ್ಯವಿದೆ.

• ಮನೋಜ ಗೋಡಬೋಲೆ

ಕೆರೆಗಳಲ್ಲೋ ಮಡುಗಳಲ್ಲೋ ತಲೆಯೆತ್ತಿ ನಿಲ್ಲುವ ತಾವರೆ ಹೂಗಳು ತಮ್ಮ ಸುತ್ತಮುತ್ತಲಿನ ಪರಿಸರದ ಸೌಂದರ್ಯ ಹೆಚ್ಚಿಸುತ್ತವೆ. ಇತ್ತೀಚೆಗೆ, 'ಪ್ರಜಾವಾಣಿ'ಯಲ್ಲಿ ಕುಶಾಲನಗರದ ಬೈಚನಹಳ್ಳಿಯಲ್ಲಿ ಇರುವ ತಾವರೆಕೆರೆಯ ಒಂದು ಫೋಟೊ ಪ್ರಕಟಗೊಂಡಿತ್ತು (ಜೂನ್ 30, ಚಿತ್ರ: ರಂಗಸ್ವಾಮಿ). ಆ ಚಿತ್ರದಲ್ಲಿ ಇದ್ದುದು ತಾವರೆಗಳಲ್ಲ, ಅಂತರಗಂಗೆಯ ಹೂಗಳು!

ಅಂತರಗಂಗೆಯ ಪುಷ್ಪಗುಚ್ಛಗಳನ್ನು ಒಳಗೊಂಡ ಕೆರೆಯ ಚಿತ್ರ ಪತ್ರಿಕೆಯ ಮುಖಪುಟದ ಶೋಭೆ ಹೆಚ್ಚಿಸಿತ್ತು. ಆದರೆ, ಜೀವವಿಜ್ಞಾನದ ವಿದ್ಯಾರ್ಥಿಯಾದ ನನ್ನ ಅಂತರಂಗವನ್ನು ಆ ಚಿತ್ರಪಟ ಕಲಕಿತ್ತು. ಕಾಕತಾಳೀಯ ಎನ್ನುವಂತೆ, ಕುಶಾಲನಗರಕ್ಕೆ ಪ್ರವಾಸ ಹೋದ ಪರಿಚಯದವರೊಬ್ಬರ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲೂ ಅಂತರಗಂಗೆ ಆಚ್ಛಾದಿತ ಕೆರೆಯ ವಿಡಿಯೊ ನೋಡಿದೆ. ಅಂತರಗಂಗೆ ಬಗ್ಗೆ ತಿಳಿಯದವರಿಗೆ ಆ ಸಸ್ಯ ಹಾಗೂ ಅದರ ಹೂಗಳು ಸುಂದರವಾಗಿ ಕಾಣಿಸಬಹುದು. ಅಂತರಗಂಗೆ ಉಂಟು ಮಾಡುವ ಅಪಾಯಗಳನ್ನು ಅರಿತವರಿಗೆ ಮಾತ್ರ, ಅದು ಮೃತ್ಯುಪಾಶದಂತೆ ಕಾಣಿಸುತ್ತದೆ.

ಹಳೆಯ ಶಾಲಾ ಪಠ್ಯಗಳಲ್ಲಿ ಅಂತರಗಂಗೆ ಸಸ್ಯವನ್ನು 'ಐ ಕಾರ್ನಿಯಾ' ಎಂದು ಕರೆಯಲಾಗಿದೆ. ಇತ್ತೀಚೆಗೆ, ಈ ಸಸ್ಯಕ್ಕೆ 'ಪಾಂಟೆಡೇರಿಯಾ ಕ್ರಾಸ್ಸಿಪಸ್' ಎಂದು ಹೊಸತಾಗಿ ಹೆಸರಿಡಲಾಗಿದೆ. ಈ ಸಸ್ಯ ನೋಡಲು ಚೆಂದ ಎನ್ನುವುದು ನಿಜ. ಹೂಬಿಟ್ಟರಂತೂ ಇನ್ನೂ ಅಂದ. ಇದರ ಹೂಗಳನ್ನು ಕೆರೆಗಳಲ್ಲಿ ನೋಡುವುದು ಚಂದ ಕಾಣುತ್ತದಾದರೂ, ಅಲ್ಲಿನ ಪರಿಸರಕ್ಕೆ ಈ ಸಸ್ಯ ಹೊಂದುವುದಿಲ್ಲ. ಅಂತರಗಂಗೆಯನ್ನು ಕೆರೆಗಳಲ್ಲಿ ಬೆಳೆಸಲು ಶುರು ಮಾಡಿದರೆ, ನೀರಿನ ಗುಣಮಟ್ಟ ಕುಸಿಯುತ್ತದೆ ಹಾಗೂ ಈ ಸಸ್ಯ ಜಲಚರಗಳಿಗೂ ಮಾರಕ ಆಗಬಹುದು. ಮೈಯೆಲ್ಲ ವಿಷ ತುಂಬಿಕೊಂಡ ವಿಷಕನ್ನಿಕೆಯರು ಅಪೂರ್ವ ಸೌಂದರ್ಯವತಿಯರೂ ಆಗಿರುವಂತೆ, ಅಂತರಗಂಗೆಯ ಸೌಂದರ್ಯದ ಹಿಂದೆ ಭಸ್ಮಾಸುರ ಹಸ್ತ ಇರುವುದನ್ನು ನಾವು ಮರೆಯಬಾರದು.

ಅಂತರಗಂಗೆಯು ವ್ಯಾಪಕವಾಗಿ ಆವರಿಸಿ ಬೆಳೆಯುವ ಕಳೆಸಸ್ಯ. ದಕ್ಷಿಣ ಅಮೆರಿಕದ ಅಮೆಜಾನ್ ಪ್ರಾಂತ್ಯವು ಈ ಸಸ್ಯದ ಮೂಲ. ಅಮೆರಿಕದ ಫ್ಲೋರಿಡಾ ರಾಜ್ಯಕ್ಕೆ 1884ರಲ್ಲಿ ದಕ್ಷಿಣ ಅಮೆರಿಕದಿಂದ ಆಲಂಕಾರಿಕ ಸಸ್ಯವಾಗಿ ಇದನ್ನು ತರಲಾಯಿತು. ಸಣ್ಣ ಕೆರೆಯೊಂದರಲ್ಲಿ ಬೆಳೆಸಲಾಗುತ್ತಿದ್ದ ಈ ಗಿಡ, ಸಮೀಪದ ತೊರೆಯೊಂದಕ್ಕೆ ಆಕಸ್ಮಿಕವಾಗಿ ಸೇರಿಕೊಂಡಿತು. ನೋಡನೋಡುತ್ತಿದ್ದಂತೆ ಅದು ಆ ಪ್ರಾಂತ್ಯದ ಕಾಲುವೆ ಹಾಗೂ ನದಿಗಳ ಜಾಲವನ್ನೆಲ್ಲ ಆವರಿಸಿಕೊಂಡುಬಿಟ್ಟಿತು.



'ಪಾಂಟೆಡೇರಿಯಾ ಕ್ರಾಸ್ಸಿಪಸ್' ಸಸ್ಯದ ಪುನರುತ್ಪಾದನೆಯ ವೇಗ ಎಷ್ಟೆಂದರೆ, ಬರೀ 10 ಗಿಡಗಳು 8 ತಿಂಗಳ ಅವಧಿಯಲ್ಲಿ 6 ಲಕ್ಷ ಗಿಡಗಳಾಗಬಲ್ಲವು! ರಕ್ತಬೀಜಾಸುರ ಸಂತತಿಯಂತೆ ವಿಸ್ತರಣೆಗೊಂಡ ಅಂತರಗಂಗೆಯ ಸಾಮ್ರಾಜ್ಯದಿಂದ ಫ್ಲೋರಿಡಾ ರಾಜ್ಯದ ಜಲವ್ಯೂಹದ ಕತ್ತು ಹಿಸುಕಿದಂತಾಯಿತು. ಪರಿಣಾಮ, ಸ್ಥಳೀಯ ಜಲಸಸ್ಯಗಳು ನಾಪತ್ತೆಯಾದವು. ಅವುಗಳ ಜಾಗದಲ್ಲಿ ನೀರನ್ನೆಲ್ಲಾ ಆವರಿಸಿ ಅಂತರಗಂಗೆ ಒತ್ತಾಗಿ ಬೆಳೆದುದರಿಂದ, ನೀರಿನಲ್ಲಿ ಕರಗಿದ ಆಮ್ಲಜನಕದ ಪ್ರಮಾಣವು ಕುಸಿಯಿತು; ಅಸಂಖ್ಯಾತ ಜಲಚರಗಳು ಸಾವಿಗೀಡಾದವು. ಹಿಂದೊಮ್ಮೆ ಈ ಸಸ್ಯ, ಫ್ಲೋರಿಡಾ ಹಾಗೂ ಕ್ಯಾಲಿಫೋರ್ನಿಯಾ ರಾಜ್ಯಗಳ 8 ಲಕ್ಷ ಹೆಕ್ಟೇರ್‌ನಷ್ಟು ಜಲಪ್ರದೇಶವನ್ನು ಆವರಿಸಿಕೊಂಡಿತ್ತು!

ಪ್ರಸ್ತುತ, ಫ್ಲೋರಿಡಾ ರಾಜ್ಯವು ಪ್ರತಿ ವರ್ಷ ಸುಮಾರು 20 ಲಕ್ಷ ಡಾಲರ್‌ಗಳನ್ನು ಅಂತರಗಂಗೆಯ ನಾಶಕ್ಕೆ ಖರ್ಚು ಮಾಡುತ್ತಿದೆ. ಇಂತಹ ಅಂಕಿಅಂಶಗಳು ಭಾರತದಲ್ಲಿ ಸದ್ಯಕ್ಕೆ ಲಭ್ಯವಿಲ್ಲವಾದರೂ, ಅಂತರಗಂಗೆಯ ಹಾವಳಿಯಂತೂ ಕಣ್ಣಿಗೆ ರಾಚುವಂತೆಯೇ ಇದೆ.

ಪಶ್ಚಿಮ ಬಂಗಾಳದಲ್ಲಿ ಅಂತರಗಂಗೆ ಸಸ್ಯವನ್ನು ದೊಡ್ಡ ಪಿಡುಗು ಎಂದೇ ಭಾವಿಸಲಾಗುತ್ತಿದೆ. ಈ ಸಸ್ಯದ ವ್ಯಾಪಕ ಬೆಳವಣಿಗೆಯಿಂದಾಗಿ, ನೀರಿನಲ್ಲಿನ ಮೀನುಗಳು ಆಮ್ಲಜನಕದ ಕೊರತೆಯಿಂದ ಸಾಯುತ್ತವೆ. ಈ ವಿದ್ಯಮಾನ, ನಿತ್ಯವೂ ಮೀನನ್ನೇ ಬಳಸುವ ಬೆಂಗಾಲಿ ಜನರಿಗೆ ಗಾಬರಿ ಹುಟ್ಟಿಸಿದೆ. ಸ್ಥಳೀಯ ಮೀನು ಪ್ರಭೇದಗಳು ನಾಪತ್ತೆ ಆಗುತ್ತಿವೆ; ಮೀನುಗಳ ಇಳುವರಿ ಕಡಿಮೆಯಾದುದರಿಂದ ಸ್ಥಳೀಯ ಮೀನುಗಾರರೂ ತೊಂದರೆಗೆ ಒಳಗಾಗಿದ್ದಾರೆ.

ನೀರನ್ನೆಲ್ಲ ಅಂತರಗಂಗೆ ಆವರಿಸಿಕೊಳ್ಳುವುದರಿಂದ ದೋಣಿ ನಡೆಸಲೂ ಕಷ್ಟವಾಗುತ್ತದೆ. ಗಿಡಗಳು ಸತ್ತ ನಂತರವೂ ನೀರಿನಾಳದಲ್ಲಿ ಕೊಳೆತು ಶೇಖರಗೊಳ್ಳುತ್ತಾ ಹೋಗಿ, ಕ್ರಮೇಣ ಜಲಮೂಲಗಳ ಆಳ ಕಡಿಮೆಯಾಗುತ್ತದೆ.

ಸೌಂದರ್ಯದ ಪರಿಕಲ್ಪನೆಯಲ್ಲಿ ಬೇಕಾದುದನ್ನೂ ಬೇಡವಾದುದನ್ನೂ ಎಲ್ಲೆಲ್ಲಿಂದಲೋ ತಂದು ಹಿತ್ತಲಲ್ಲಿ ಗುಡ್ಡೆ ಹಾಕಿಕೊಳ್ಳುತ್ತೇವೆ. ಕೆಲವೊಮ್ಮೆ ಅದರ ಪರಿಣಾಮ ಭೀಕರವಾಗಿರುತ್ತದೆ. ನಮ್ಮಲ್ಲಿ ಹೆಚ್ಚಿನ ಜಲಮೂಲಗಳು ಮಲಿನಗೊಂಡಿವೆ. ಅಂತರಗಂಗೆಯು ಮಾಲಿನ್ಯಗೊಂಡ ಜಲಾಶಯಗಳಲ್ಲೂ ಯಥೇಚ್ಛವಾಗಿ ಬೆಳೆಯುತ್ತದೆ. ಬೆಳೆಯುತ್ತಾ ಹೋದಂತೆ ಅದರ ಅಂಗಾಂಗಗಳಲ್ಲಿ ಮಲಿನಕಾರಕಗಳು ಶೇಖರಗೊಳ್ಳುತ್ತಾ ಹೋಗುತ್ತವೆ.

ಕರ್ನಾಟಕದಲ್ಲಿ ಜಲಮೂಲಗಳ ಪುನಶ್ಚೇತನ ಕಾರ್ಯ ಗಣನೀಯ ಪ್ರಮಾಣದಲ್ಲಿ ನಡೆಯುತ್ತಿದೆ. ಆ ಕೆಲಸದಲ್ಲಿ ತೊಡಗಿಸಿಕೊಂಡವರಿಗೆ ಅಂತರಗಂಗೆ ಸಸ್ಯದ ಅಪಾಯಗಳ ಅರಿವಿದೆ. ಅಂತರಗಂಗೆಯಿಂದ ತುಂಬಿಕೊಂಡಿರುವ ಬೈಚನಹಳ್ಳಿಯ ತಾವರೆಕೆರೆಯಂತಹ ಜಲಮೂಲಗಳನ್ನು ನೋಡಿದಾಗ, ಅವು 'ನಮ್ಮನ್ನು ಉಳಿಸಿ' ಎಂದು ಆರ್ತವಾಗಿ ಬೇಡಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಭಾರತೀಯರ ಸಾಲದ ಪ್ರಮಾಣ ಏರಿಕೆ ಆಗುತ್ತಿದೆ. ಜನರು ವಿವಿಧ ಬಗೆಯ ಸಾಲಗಳ ಮರುಪಾವತಿ ಕಂತುಗಳಿಗೆ ಮೀಸಲಿಡಬೇಕಿರುವ ಹಣದ ಮೊತ್ತವು ಹೆಚ್ಚಾಗುತ್ತಿದೆ. ನೇರವಾಗಿ ಆಸ್ತಿ ಸೃಷ್ಟಿಗೆ ಒದಗಿಬರದ ಸಾಲಗಳ ಪ್ರಮಾಣವೂ ಜಾಸ್ತಿ ಆಗುತ್ತಿದೆ. ಆದರೆ ಆರ್‌ಬಿಐ ಈಚೆಗೆ ಬಿಡುಗಡೆ ಮಾಡಿರುವ ಹಣಕಾಸು ಸ್ಥಿರತೆ ವರದಿಯು ಹೇಳುತ್ತಿರುವುದು ಇಂತಹ ಅಂಶಗಳನ್ನಷ್ಟೇ ಅಲ್ಲ. ಸಾಲದ ಗುಣಮಟ್ಟದ ಬಗ್ಗೆ, ಕುಟುಂಬಗಳ ಹಣಕಾಸು ಆಸ್ತಿ ಮೌಲ್ಯವು ಹೆಚ್ಚಳ ಕಂಡಿರುವುದರ ಬಗ್ಗೆ ಅದು ವಿವರಗಳನ್ನು ನೀಡಿದೆ. ಸಾಲ ನೀಡಿಕೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಲಾಗಿದೆ ಎಂಬ ಸಕಾರಾತ್ಮಕ ಅಂಶದತ್ತಲೂ ವರದಿಯು ಬೊಟ್ಟುಮಾಡಿದೆ

ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ಸ್ಥಿರತೆ ವರದಿ

ಕುಟುಂಬ ಮಟ್ಟದ ಸಾಲ ಹೆಚ್ಚಳ



• ವಿಜಯ್ ಜೋಷಿ

ದೇಶದಲ್ಲಿ ಕುಟುಂಬಗಳ ಮಟ್ಟದಲ್ಲಿ ಸಾಲದ ಮೊತ್ತ ಹೆಚ್ಚಳ ಕಾಣುತ್ತಿರುವುದನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಚೆಗೆ ಬಿಡುಗಡೆ ಮಾಡಿರುವ ಹಣಕಾಸು ಸ್ಥಿರತೆ ವರದಿಯು ತಿಳಿಸಿದೆ. 'ಸಾಲ' ಎಂದಾಕ್ಷಣ ಸಾಮಾನ್ಯವಾಗಿ ಮನಸ್ಸನ್ನು ಆವರಿಸುವುದು ನಕಾರಾತ್ಮಕ ಚಿತ್ರಣವೇ ಆದರೂ ಆರ್‌ಬಿಐ ವರದಿಯು ಭಿನ್ನ ಚಿತ್ರಣಗಳನ್ನು ನೀಡಿದೆ.

ದೇಶದ ಕುಟುಂಬಗಳ ಸಾಲವು 2021–22ನೆಯ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿ (2021ರ ಜುಲೈ–ಸೆಪ್ಟೆಂಬರ್ ಅವಧಿ) ದೇಶದ ಒಟ್ಟು ಆಂತರಿಕ ಉತ್ಪಾದನೆಗೆ (ಜಿಡಿಪಿ) ಹೋಲಿಸಿದರೆ ಶೇ 38.3ರಷ್ಟು ಮಾತ್ರ ಇತ್ತು. ಅವು ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಜಾರಿಗೆ ಬಂದಿದ್ದ ಲಾಕ್‌ಡೌನ್‌ನ ಆರ್ಥಿಕ ಪರಿಣಾಮಗಳು ತೀವ್ರವಾಗಿದ್ದ ದಿನಗಳು.

ಆದರೆ, 2024ರ ಡಿಸೆಂಬರ್ ಅಂತ್ಯಕ್ಕೆ ದೇಶದ ಕೌಟುಂಬಿಕ ಸಾಲದ ಪ್ರಮಾಣವು ಜಿಡಿಪಿಯ ಶೇ 41.9ಕ್ಕೆ ಹೆಚ್ಚಳ ಕಂಡಿದೆ ಎಂಬ 'ಕಳವಳಕಾರಿ' ಅಂಶವು ಆರ್‌ಬಿಐ ವರದಿಯಲ್ಲಿ ಇದೆ. ಸಾಲದ ತಲಾವಾರು ಮೊತ್ತವು ಈ ವರ್ಷದ ಮಾರ್ಚ್ ವೇಳೆಗೆ ₹4.8 ಲಕ್ಷ ಆಗಿದೆ. ಇದು 2023ರ ಮಾರ್ಚ್‌ನಲ್ಲಿ ₹3.9 ಲಕ್ಷ ಮಾತ್ರ ಆಗಿತ್ತು. ಎರಡು ವರ್ಷಗಳಲ್ಲಿ ಸಾಲದ ತಲಾವಾರು ಮೊತ್ತ ₹90 ಸಾವಿರದಷ್ಟು ಹೆಚ್ಚಾಗಿದೆ. ಸಾಲದ ತಲಾವಾರು ಮೊತ್ತ ಜಾಸ್ತಿ ಆಗಿದೆ ಎಂಬುದಷ್ಟನ್ನೇ ಹೇಳಿದರೆ ಗಾಬರಿ ಆಗಬಹುದು. ಆದರೆ, ಕ್ರೆಡಿಟ್ ಸ್ಕೋರ್ ಚೆನ್ನಾಗಿ ಇರುವವರು (ಹೈ-ರೇಟೆಡ್) ಸಾಲವನ್ನು ಪಡೆದಿರುವುದು ಸಾಲದ ಮೊತ್ತ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂಬುದನ್ನು ಆರ್‌ಬಿಐ ವರದಿ ಉಲ್ಲೇಖಿಸಿದೆ.



'ಒಟ್ಟು ಸಾಲಗಾರರಲ್ಲಿ ಉತ್ತಮ ಕ್ರೆಡಿಟ್ ಸ್ಕೋರ್ ಇರುವವರ ಪ್ರಮಾಣ ಹೆಚ್ಚಾಗುತ್ತಿದೆ. ಇದು ಸಾಲದ ಮರುಪಾವತಿ ಹಾಗೂ ಹಣಕಾಸಿನ ಸ್ಥಿರತೆ ದೃಷ್ಟಿಯಿಂದ ಮಹತ್ವದ್ದಾಗುತ್ತದೆ. ಒಟ್ಟಾರೆಯಾಗಿ ಕೌಟುಂಬಿಕ ಆರ್ಥಿಕ ಸ್ಥಿತಿಯು ಗಟ್ಟಿಗೊಂಡಿರುವುದನ್ನು ಇದು ತೋರಿಸುತ್ತಿದೆ' ಎಂದು ಆರ್‌ಬಿಐ ವರದಿಯು ವಿವರಿಸಿದೆ.

ದೇಶದ ಕೌಟುಂಬಿಕ ಸಾಲದ ಪ್ರಮಾಣವು ಜಿಡಿಪಿಯ ಶೇ 41.9ರಷ್ಟು ಇದೆಯಾದರೂ ಪ್ರವರ್ಧಮಾನಕ್ಕೆ ಬರುತ್ತಿರುವ ಇತರ ದೇಶಗಳ ಅರ್ಥವ್ಯವಸ್ಥೆಗೆ ಹೋಲಿಸಿದರೆ ಇದು ಕಡಿಮೆಯೇ ಆಗಿದೆ ಎಂದು ವರದಿ ಹೇಳಿದೆ.

'ಸಾಲದ ಗುಣಮಟ್ಟ ಮುಖ್ಯ'


ಭಾರತದ ಕೌಟುಂಬಿಕ ಸಾಲದ ಪ್ರಮಾಣವು ಒಟ್ಟು ಜಿಡಿಪಿಯ ಶೇ 41.9ರ ಮಟ್ಟಕ್ಕೆ ಏರಿಕೆ ಆಗಿರುವುದು ಕಳವಳ ಮೂಡಿಸುವಂತಹ ಸಂಗತಿ ಅಲ್ಲ ಎನ್ನುತ್ತಾರೆ ಚಾರ್ಟರ್ಡ್ ಅಕೌಂಟೆಂಟ್ ಪ್ರಕಾಶ ಹೆಗಡೆ.

ಜಿಡಿಪಿಗೆ ಹೋಲಿಸಿದರೆ ಸಾಲದ ಪ್ರಮಾಣವು ಎಷ್ಟು ಎಂಬುದು ಮುಖ್ಯವಾಗುವುದಿಲ್ಲ. ಅದರ ಬದಲಿಗೆ, ಸಾಲವನ್ನು ಯಾರಿಗೆ ನೀಡಲಾಗಿದೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ. 2019ರ ನಂತರದಲ್ಲಿ, ಉತ್ತಮ ಕ್ರೆಡಿಟ್ ಸ್ಕೋರ್ ಹೊಂದಿರುವವರಿಗೆ ನೀಡಿದ ಸಾಲದ ಪ್ರಮಾಣವು ಶೇ 44ರಷ್ಟು ಹೆಚ್ಚಳ ಕಂಡಿದೆ. ಇದೇ ಅವಧಿಯಲ್ಲಿ, ಕಡಿಮೆ ಕ್ರೆಡಿಟ್ ಸ್ಕೋರ್ ಹೊಂದಿರುವವರಿಗೆ ನೀಡಿದ ಸಾಲದ ಪ್ರಮಾಣದಲ್ಲಿ ಶೇ 4.8ರಷ್ಟು ಇಳಿಕೆ ಕಂಡುಬಂದಿದೆ. ಇದು ಬಹಳ ಉತ್ತಮವಾದ ಬೆಳವಣಿಗೆ ಎಂದು ಅವರು ವಿವರಿಸಿದರು.

ಕೌಟುಂಬಿಕ ಸಾಲದ ಪ್ರಮಾಣವು ಜಿಡಿಪಿಯ ಶೇ 5ರಷ್ಟು ಮಾತ್ರವೇ ಇದ್ದು, ಆ ಎಲ್ಲ ಸಾಲವೂ ಕಳಪೆ ಕ್ರೆಡಿಟ್ ಸ್ಕೋರ್ ಇರುವವರಿಗೆ ನೀಡಿದ್ದು ಎಂದಾಗಿದ್ದರೆ, ಅಷ್ಟೂ ಸಾಲವು ಅಪಾಯಕ್ಕೆ ಸಿಲುಕುತ್ತಿತ್ತು. ಆದರೆ, ನಮ್ಮಲ್ಲಿ ಆ ರೀತಿ ಆಗಿಲ್ಲ. ಉತ್ತಮ ಮರುಪಾವತಿ ಸಾಮರ್ಥ್ಯ ಹೊಂದಿರುವವರಿಗೆ ನೀಡುವ ಸಾಲದ ಪ್ರಮಾಣ ಹೆಚ್ಚಾಗುತ್ತಿದೆ. ಹೀಗಾಗಿ ಸಾಲದ ಬಗ್ಗೆ ನಿಲುವು ತಾಳುವಾಗ, ಸಾಲದ ಮೊತ್ತವನ್ನು ದೇಶದ ಜಿಡಿಪಿ ಜೊತೆ ಹೋಲಿಕೆ ಮಾಡುವುದಷ್ಟೇ ಅಲ್ಲದೆ, ಸಾಲದ ಗುಣಮಟ್ಟವನ್ನೂ ಪರಿಶೀಲಿಸಬೇಕು ಎಂದು ಅವರು ಹೇಳಿದರು.

ಕೈಗೆ ಸಿಗುವ ವರಮಾನದಲ್ಲಿ ಶೇ 25.7ರಷ್ಟು ಪಾಲು ಕೆಲವು ಬಗೆಯ ಸಾಲಗಳ ಮರುಪಾವತಿಗೆ ವೆಚ್ಚವಾಗುತ್ತಿರುವುದರ ಬಗ್ಗೆ ಪ್ರತಿಕ್ರಿಯೆ ನೀಡಿದ ಹೆಗಡೆ, 'ಉಳಿತಾಯ ಪ್ರಮಾಣವು ಒಂದಿಷ್ಟು ಕಡಿಮೆ ಆಗುತ್ತಿರಬಹುದು. ಆದರೆ ಈಗಿನ ಸಂದರ್ಭದಲ್ಲಿ ವೇತನ, ವರಮಾನ ಏರಿಕೆ ಪ್ರಮಾಣಕ್ಕಿಂತಲೂ ಮನೆ, ಕಾರುಗಳ ಬೆಲೆ ಏರಿಕೆ ಪ್ರಮಾಣ ಹೆಚ್ಚಿದೆ. ಅವುಗಳನ್ನು ಖರೀದಿಸಿದವರ ವರಮಾನದಲ್ಲಿ ಹೆಚ್ಚಿನ ಪಾಲು ಸಾಲ ಮರುಪಾವತಿಗೆ ವಿನಿಯೋಗ ಆಗುತ್ತಿರಬಹುದು' ಎಂದರು.

ಹಣಕಾಸು ಆಸ್ತಿ: ಏನು, ಎತ್ತ?



ಕಳವಳ ಮೂಡಿಸುವಂಥದ್ದು ಏನೂ ಇಲ್ಲವೇ?

ಕೌಟುಂಬಿಕ ಸಾಲಗಳಲ್ಲಿ, ಗೃಹಸಾಲ ಹೊರತುಪಡಿಸಿದ ಸಾಲಗಳ ಪ್ರಮಾಣವು ಈ ವರ್ಷದ ಮಾರ್ಚ್ ವೇಳೆಗೆ ಶೇ 54.9ರಷ್ಟು ಇತ್ತು ಎಂದು ಆರ್‌ಬಿಐ ವರದಿ ಬೊಟ್ಟು ಮಾಡಿದೆ. ಗೃಹಸಾಲ ಹೊರತುಪಡಿಸಿದ ಸಾಲಗಳು ಅಂದರೆ, ವೈಯಕ್ತಿಕ ಸಾಲ, ವಿವಿಧ ಉತ್ಪನ್ನಗಳನ್ನು ಖರೀದಿಸುವ ಉದ್ದೇಶದಿಂದ ಪಡೆಯುವ ಸಾಲ, ಕ್ರೆಡಿಟ್ ಕಾರ್ಡ್ ಸಾಲ. ಇಂತಹ ಬಗೆಯ ಸಾಲಗಳು ಮಾರುಕಟ್ಟೆಯಲ್ಲಿ ಬೇಡಿಕೆ ಸೃಷ್ಟಿಸಲು ನೆರವಾಗುತ್ತವೆಯಾದರೂ ಇವು ಸಾಲ ಪಡೆದ ವ್ಯಕ್ತಿಯ ಪಾಲಿಗೆ ಆಸ್ತಿ ಸೃಷ್ಟಿಸಲು ಸಾಮಾನ್ಯವಾಗಿ ನೆರವಾಗುವುದಿಲ್ಲ. ಈ ವರ್ಗದ ಸಾಲದ ಪ್ರಮಾಣವು ಹೆಚ್ಚಾಗಿರುವುದು ಕಳವಳಕಾರಿ ಎಂಬ ಅಭಿಪ್ರಾಯ ಒಂದು ವರ್ಗದಲ್ಲಿದೆ.

ಇಲ್ಲಿ ಇನ್ನೂ ಹೆಚ್ಚು ಗಮನ ಸೆಳೆಯುವ ಅಂಶವೆಂದರೆ, ಈ ಬಗೆಯ ಸಾಲಗಳನ್ನು ತೀರಿಸಲು ಜನರು ತಮ್ಮ ಬಳಕೆಗೆ ಸಿಗುವ ಆದಾಯದ ಶೇ 25.7ರಷ್ಟು ಮೊತ್ತವನ್ನು ವಿನಿಯೋಗ ಮಾಡುತ್ತಿರುವುದು. ವ್ಯಕ್ತಿಯೊಬ್ಬನಿಗೆ ತಿಂಗಳಿಗೆ ಕೈಗೆ ಸಿಗುವ ಸಂಬಳ ₹30 ಸಾವಿರ ಎಂದಾದರೆ, ಅದರಲ್ಲಿ ₹7,710 ಇಂತಹ ಸಾಲಗಳನ್ನು ತೀರಿಸಲಿಕ್ಕೇ ಬಳಕೆ ಆಗುತ್ತಿದೆ.

ಈ ಅಂಶವನ್ನು ಮುಂದಿಟ್ಟುಕೊಂಡು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ. '...ಈ ಹಣದುಬ್ಬರದ ನಡುವೆ ಕುಟುಂಬಗಳಿಗೆ ಜೀವನ ಸಾಗಿಸುವುದು ಕಷ್ಟವಾಗುತ್ತಿದೆ, ಅವು ಸಾಲ ಪಡೆಯಲೇಬೇಕಾದ ಒತ್ತಡ ಸೃಷ್ಟಿಯಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

'ಈ ಬಗೆಯ ಸಾಲಗಳ (ಗೃಹಸಾಲ, ಕೃಷಿ ಮತ್ತು ಉದ್ಯಮ ಸಂಬಂಧಿ ಸಾಲ ಹೊರತುಪಡಿಸಿದ್ದು) ಪ್ರಮಾಣವು ಕೆಲವು ವರ್ಷಗಳಿಂದ ಸ್ಥಿರ ಏರಿಕೆ ಕಾಣುತ್ತಿದೆ. ಈ ಸಾಲಗಳ ಬೆಳವಣಿಗೆ ಪ್ರಮಾಣವು ಗೃಹಸಾಲ, ಕೃಷಿ ಮತ್ತು ಉದ್ಯಮ ಸಂಬಂಧಿ ಸಾಲದ ಬೆಳವಣಿಗೆ ಪ್ರಮಾಣಕ್ಕಿಂತ ಹೆಚ್ಚಾಗಿದೆ' ಎಂದು ಆರ್‌ಬಿಐ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಗೃಹಸಾಲ, ಕೃಷಿಸಾಲ ಮತ್ತು ಉದ್ಯಮ ಸಂಬಂಧಿ ಸಾಲಗಳು ಆಸ್ತಿ ಸೃಷ್ಟಿಗೆ ವಿನಿಯೋಗ ಆಗುತ್ತವೆ.

ಕೌಟುಂಬಿಕ ಸಾಲಗಳಲ್ಲಿ ಶೇ 29ರಷ್ಟು ಗೃಹಸಾಲವಾಗಿದೆ. ಗೃಹಸಾಲ ಪ್ರಮಾಣವು ಸ್ಥಿರವಾಗಿ ಹೆಚ್ಚಳ ಕಾಣುತ್ತಿದೆ. ಆದರೆ, ಈಗಾಗಲೇ ಗೃಹಸಾಲ ಪಡೆದಿರುವ ವ್ಯಕ್ತಿಗಳು ಹೆಚ್ಚುವರಿ ಸಾಲ ಪಡೆಯುತ್ತಿರುವುದು ಗೃಹಸಾಲದಲ್ಲಿನ ಏರಿಕೆಗೆ ಪ್ರಮುಖ ಕಾರಣ ಆಗುತ್ತಿದೆ ಎಂಬುದನ್ನು ಬಿಡಿಬಿಡಿಯಾದ ಅಂಕಿ–ಅಂಶಗಳು ಹೇಳುತ್ತಿವೆ. ಹೀಗೆ ಹೆಚ್ಚುವರಿ ಸಾಲ ಪಡೆದವರ ಪಾಲು ಈ ವರ್ಷದ ಮಾರ್ಚ್ ವೇಳೆಗೆ ಒಟ್ಟು ಗೃಹಸಾಲದ ಮೂರನೆಯ ಒಂದಕ್ಕಿಂತ ಹೆಚ್ಚಾಗಿದೆ. ಸಾಲ ಪಡೆದವರು ಅದನ್ನು ಹಿಂದಿರುಗಿಸದೆ ಇರುವ ಪ್ರಮಾಣವು ಹೆಚ್ಚಾಗಿರುವುದು ಕಡಿಮೆ ಕ್ರೆಡಿಟ್ ಸ್ಕೋರ್ ಇರುವವರಲ್ಲಿ ಹಾಗೂ ಅತಿಯಾಗಿ ಸಾಲ ಮಾಡಿಕೊಂಡಿರುವವರಲ್ಲಿ. ಹೀಗಿದ್ದರೂ, ಇದು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಕಂಡಿದ್ದ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ ಇದೆ ಎಂದು ಆರ್‌ಬಿಐ ಹೇಳಿದೆ.

'ಬ್ಯಾಂಕ್‌ನತ್ತ ಬರುತ್ತಿದ್ದಾರೆ'

'ಮೊದಲೂ ಸಾಲವು ಇದೇ ಪ್ರಮಾಣದಲ್ಲಿ ಇತ್ತು. ಆದರೆ ಅದು ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಜನರನ್ನು ತಲುಪುತ್ತಿರಲಿಲ್ಲ. ಲೇವಾದೇವಿ ವ್ಯವಹಾರ ನಡೆಸುವವರ ಪ್ರಭಾವ ಇಲ್ಲಿ ಹೆಚ್ಚಿತ್ತು. ಈಗ ಜನರು ಸಾಲಕ್ಕೆ ಬ್ಯಾಂಕಿಂಗ್ ವಲಯದತ್ತ ಹೆಚ್ಚಾಗಿ ಬರುತ್ತಿದ್ದಾರೆ, ಲೇವಾದೇವಿಯವರ ಪ್ರಭಾವ ತಗ್ಗುತ್ತಿದೆ. ಹೀಗಾಗಿ ಸಾಲದ ಪ್ರಮಾಣಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಅಧಿಕೃತವಾಗಿ ಸಿಗುತ್ತಿವೆ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ನಿರ್ದೇಶಕ, ಚಾರ್ಟರ್ಡ್ ಅಕೌಂಟೆಂಟ್ ರವೀಂದ್ರ ಕೋರೆ ಅಭಿಪ್ರಾಯಪಟ್ಟರು.

'ಗೃಹಬಳಕೆ ಉಪಕರಣಗಳ ಖರೀದಿಗೆ ಬಳಸುವ ಸಾಲದ ಪ್ರಮಾಣದಲ್ಲಿ ಹೆಚ್ಚಳ ಆಗಿದೆ ಎಂಬುದನ್ನು ವರದಿ ಹೇಳುತ್ತಿದೆ. ಇಂತಹ ಉಪಕರಣಗಳು ಇಂದಿನ ಜೀವನಶೈಲಿಯ ಭಾಗವಾಗಿವೆ. ಅವುಗಳನ್ನು ಖರೀದಿಸುವುದು ಅರ್ಥವ್ಯವಸ್ಥೆಯ ಬೆಳವಣಿಗೆಗೆ ನೆರವಾಗುತ್ತಿದೆ. ಜನರ ಜೀವನಶೈಲಿ ಹಾಗೂ ಜೀವನಮಟ್ಟದಲ್ಲಿ ಬದಲಾವಣೆ ಆಗಿದೆ ಎಂಬುದನ್ನು ನಾವು ಗುರುತಿಸಬೇಕು. ಸಾಲದ ಪ್ರಮಾಣವು ಅಪಾಯಕಾರಿ ಮಟ್ಟದಲ್ಲಿ ಇಲ್ಲ' ಎಂದು ಕೋರೆ ಹೇಳಿದರು.

ಹಣಕಾಸು ಆಸ್ತಿಯಲ್ಲಿ ಹೆಚ್ಚಳ

2023–24ನೇ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಕೌಟುಂಬಿಕ ಮಟ್ಟದಲ್ಲಿ ಹಣಕಾಸು ಆಸ್ತಿಗಳ ಮೊತ್ತವು ಹೆಚ್ಚಳ ಕಂಡಿದೆ. 2019–20ನೇ ಆರ್ಥಿಕ ವರ್ಷದ ನಂತರದಲ್ಲಿ ಆಸ್ತಿ ಮೌಲ್ಯದಲ್ಲಿನ ಏರಿಕೆಯು ಮೊತ್ತ ಹೆಚ್ಚಳಕ್ಕೆ ಒಂದು ಮುಖ್ಯ ಕಾರಣವಾಗಿ ಒದಗಿಬಂದಿದೆ. ಜನರು ಹಣಕಾಸು ಆಸ್ತಿಗಳ ರೂಪದಲ್ಲಿ ಉಳಿತಾಯ ಮಾಡುತ್ತಿರುವುದು ಕೂಡ ಇವುಗಳ ಮೌಲ್ಯ ಹೆಚ್ಚಾಗಲು ದೊಡ್ಡ ಕಾರಣವಾಗಿದೆ. 2024ರ ಮಾರ್ಚ್ ವೇಳೆಗೆ ಠೇವಣಿಗಳು, ವಿಮೆಗಳು ಮತ್ತು ಪಿಂಚಣಿ ನಿಧಿಗಳು ಕೌಟುಂಬಿಕ ಹಣಕಾಸು ಆಸ್ತಿಗಳಲ್ಲಿ ಶೇ 70ರಷ್ಟು ಪಾಲನ್ನು ಹೊಂದಿದ್ದವು. ಷೇರುಗಳು ಹಾಗೂ ಹೂಡಿಕೆ ನಿಧಿಗಳ ಪಾಲು ಕೂಡ ಹೆಚ್ಚಳ ಕಂಡಿದೆ ಎಂಬುದನ್ನು ಆರ್‌ಬಿಐ ವರದಿಯು ವಿವರಿಸಿದೆ. ❖

ರಾಷ್ಟ್ರೀಯ

ಭಾರತಕ್ಕೆ ಎಚ್ಚರಿಕೆಯ ಘಂಟೆ



• ಜ್ಞಾನೇಂದ್ರ ಕೇಶ್ರಿ

ಮುಖ್ಯಾಂಶಗಳು

- ಏಪ್ರಿಲ್‌ನಿಂದ ರಫ್ತಿಗೆ ನಿರ್ಬಂಧ ಹೇರಿರುವ ಚೀನಾ
- ಆಟೊಮೊಬೈಲ್ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ
- ಒಟ್ಟಾರೆ ಮಾರುಕಟ್ಟೆಯಲ್ಲಿ ಶೇ 90ರಷ್ಟು ಚೀನಾ ಹಿಡಿತ

ನವದೆಹಲಿ: ಎಲೆಕ್ಟ್ರಿಕ್ ವಾಹನಗಳ ತಯಾರಿಕೆಯಲ್ಲಿ ಪ್ರಮುಖವಾಗಿ ಬೇಕಿರುವ ವಿರಳ ಲೋಹಗಳ ರಫ್ತಿನ ಮೇಲೆ ಚೀನಾ ನಿರ್ಬಂಧ ಹೇರಿರುವುದು ಭಾರತಕ್ಕೆ ಎಚ್ಚರಿಕೆಯ ಘಂಟೆಯಾಗಿ ಪರಿಣಮಿಸಿದೆ. ದೇಶದ ಕೈಗಾರಿಕೆಯ ಬೆಳವಣಿಗೆಗೆ ಬೇಕಿರುವ ಅಗತ್ಯ ವಸ್ತುಗಳಿಗೆ ಇತರ ದೇಶಗಳನ್ನು ಅವಲಂಬಿಸದೆ, ತನ್ನಲ್ಲೇ ಅವುಗಳ ಉತ್ಪಾದನೆಯನ್ನು ಹೆಚ್ಚಿಸಲು ಭಾರತ ತುರ್ತಾಗಿ ಗಮನಹರಿಸಬೇಕಿದೆ.

ಭಾರತದ ಆಟೊಮೊಬೈಲ್ ವಲಯವು ವಿರಳ ಲೋಹಗಳಿಗೆ ಚೀನಾವನ್ನು ಹೆಚ್ಚು ಅವಲಂಬಿಸಿದೆ. ಇದೀಗ ಚೀನಾ ರಫ್ತಿನ ಮೇಲೆ ನಿರ್ಬಂಧ ಹೇರಿರುವುದು ಈ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

'ವಾಹನ ತಯಾರಿಕಾ ವಲಯದಲ್ಲಿ ನಾವು ಅಂದುಕೊಂಡದ್ದಕ್ಕಿಂತಲೂ ಹೆಚ್ಚಿನ ಕಳವಳ ಉಂಟಾಗಿದೆ ಎಂದು ನಾನು ಹೇಳಬಲ್ಲೆ' ಎಂಬುದು ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಅಧ್ಯಕ್ಷ ರಾಜೀವ್ ಮೆಮಾನಿ ಅವರ ನುಡಿ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸುಂಕ ಹೆಚ್ಚಿಸಿರುವುದಕ್ಕೆ ಪ್ರತಿಯಾಗಿ ಚೀನಾ ಏಪ್ರಿಲ್‌ನಿಂದ ವಿರಳ ಲೋಹಗಳು ಮತ್ತು ಅವುಗಳ ಮೌಲ್ಯವರ್ಧಿತ ಉತ್ಪನ್ನಗಳ ರಫ್ತಿನ ಮೇಲೆ ಕೆಲವು ನಿರ್ಬಂಧಗಳನ್ನು ಹೇರಿದೆ.

ವಿರಳ ಲೋಹಗಳ ಒಟ್ಟಾರೆ ಮಾರುಕಟ್ಟೆಯಲ್ಲಿ ಶೇ 90ರಷ್ಟು ಚೀನಾ ಹಿಡಿತದಲ್ಲಿದೆ. ಈ ಲೋಹಗಳು ವಾಹನ ತಯಾರಿಕೆಗೆ ಮಾತ್ರವಲ್ಲದೆ, ಶುದ್ಧ ಇಂಧನ ಮತ್ತು ಗೃಹೋಪಯೋಗಿ ಉಪಕರಣಗಳ ತಯಾರಿಕೆಗೂ ನಿರ್ಣಾಯಕವಾಗಿವೆ.

ವಿರಳ ಲೋಹಗಳ ಕೊರತೆಯ ಸಮಸ್ಯೆ ಬಗೆಹರಿಯದಿದ್ದರೆ ಆಟೊಮೊಬೈಲ್ ವಲಯದ ಹಲವು ಕಂಪನಿಗಳು ಉತ್ಪಾದನೆಯಲ್ಲಿ ಅಡಚಣೆ ಎದುರಿಸಬೇಕಾಗುತ್ತದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.

'ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಪ್ರಸ್ತುತ ಬಿಕ್ಕಟ್ಟು ಭಾರತಕ್ಕೆ ಎಚ್ಚರಿಕೆಯ ಗಂಟೆಯಾಗಿ ಪರಿಣಮಿಸಬಹುದು ಎಂದು ಭಾವಿಸುತ್ತೇನೆ. ವಿರಳ ಲೋಹಗಳು ಮಾತ್ರವಲ್ಲ, ಇನ್ನಷ್ಟು ಉತ್ಪನ್ನಗಳಿಗೆ ನಾವು ಆ ದೇಶವನ್ನು ಅವಲಂಬಿಸಿದ್ದೇವೆ' ಎಂದು ರಾಜೀವ್ ಮೆಮಾನಿ ಹೇಳಿದ್ದಾರೆ.

'ಭಾರತವು ವ್ಯವಸ್ಥಿತ ಯೋಜನೆ ರೂಪಿಸಿದರೆ ಕಡಿಮೆ ಮತ್ತು ಮಧ್ಯಮ ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಚೀನಾದ ಮೇಲಿನ ಅವಲಂಬನೆಯನ್ನು ತಪ್ಪಿಸಬಹುದು. ಆದರೆ ಉನ್ನತ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಚೀನಾದ ಮೇಲಿನ ಅವಲಂಬನೆ ಕಡಿಮೆ ಮಾಡಲು ದೀರ್ಘಾವಧಿಯ ಯೋಜನೆ ಅಗತ್ಯ' ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಹೇಳಿದೆ.

'ಸರ್ಕಾರ ಮಧ್ಯಪ್ರವೇಶಿಸಲಿ'

ವಿರಳ ಲೋಹಗಳ ಕೊರತೆಯಿಂದ ಎದುರಾಗಿರುವ ಬಿಕ್ಕಟ್ಟು ಬಗೆಹರಿಸಲು ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಭಾರತೀಯ ವಾಹನ ಬಿಡಿಭಾಗಗಳ ತಯಾರಕರ ಒಕ್ಕೂಟ (ಎಸಿಎಂಎ) ಮತ್ತು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಆಗ್ರಹಿಸಿವೆ.

ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಭಾರತದ ಅಧಿಕಾರಿಗಳು ಚೀನಾದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಇತ್ತೀಚೆಗೆ ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಕಿಯೊಬ್ಬರು ವಯೊಲಿನ್ ವಾದನ ಕಾರ್ಯಕ್ರಮ ನೀಡುತ್ತಿದ್ದು, ಕಾರ್ಯಕ್ರಮದ ನಡುವೆ ಅವರು ದಿಢೀರ್ ವಯೊಲಿನ್ ವಾದನ ನಿಲ್ಲಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಕೇರಳದಲ್ಲಿ ನಡೆದ ಘಟನೆಯಾಗಿದ್ದು, ಮುಸ್ಲಿಂ ಸಮುದಾಯದ ಕೆಲವರು ಕಾರ್ಯಕ್ರಮ ನಡೆಯುತ್ತಿದ್ದಾಗಲೇ ಮಧ್ಯಪ್ರವೇಶ ಮಾಡಿ ಅಡ್ಡಿಪಡಿಸಿದರು ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಅನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರ ಮೇಲೆ 'ಮನೋರಮಾ ನ್ಯೂಸ್' ಲೋಗೊ ಇರುವುದು ಕಂಡಿತು. ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಡಿದಾಗ 2025ರ ಮಾರ್ಚ್‌ನ ವಿಡಿಯೊಕ್ಕೆ ಅದು ಸಂಪರ್ಕ ನೀಡಿತು. 12 ವರ್ಷದ ಗಂಗಾ ಶಶಿಧರನ್ ಎನ್ನುವ ಬಾಲಕಿ ನಿಗದಿತ ಅವಧಿ ಮೀರಿ ಕಾರ್ಯಕ್ರಮ ಮುಂದುವರಿಸುತ್ತಿದ್ದಾಗ, ಅಲ್ಲಿಗೆ ಆಗಮಿಸಿದ ಪೊಲೀಸರು ಕಾರ್ಯಕ್ರಮವನ್ನು ತಡೆದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಗಂಗಾ ಶಶಿಧರನ್ ಅವರ ತಂದೆಯೂ ಕಾರ್ಯಕ್ರಮ ನಿಲ್ಲಲು ಹಿಂದೂ–ಮುಸ್ಲಿಂ ವಿಚಾರ ಕಾರಣವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಹಳೆಯ ವಿಡಿಯೊಕ್ಕೆ ಕೋಮು ಆಯಾಮ ನೀಡಿ ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ತಿಳಿಸಿದೆ.

ವಿರೋಧ ಸಕಾರಣವಾಗಿರಲಿ, ಪ್ರೀತಿ ನಿಷ್ಕಾರಣವಾಗಿರಲಿ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

'ಅವನಿಗೆ ಮಗಳನ್ನು ಕೊಟ್ಟು ಉಪಕಾರ ಮಾಡಿದ್ದೇನೆ' ಅಂತ ಮಾವನ ಭಾವನೆ. 'ಕಳೆ ತೆಗೆಯಲಿಲ್ಲ, ಗೊಬ್ಬರ ಹಾಕಲಿಲ್ಲ, ಫಲ ಬಿಟ್ಟ ಮರಕ್ಕೆ ಬೊಗಸೆ ತುಂಬ ನೀರು ಬಿಟ್ಟು, 'ನಾನೇ ಸಾಕಿದ ಮರ' ಅಂದರೆ ಕೇಳುವವರಾರು' ಅಂತ ಅಳಿಯನ ಪ್ರಶ್ನೆ.

ಮಾವ ಅಳಿಯನ ನಡುವಿನ ಈ ತಾಕಲಾಟದಲ್ಲಿ ವರುಷ ತುಂಬುವುದರೊಳಗೆ ಮಗಳು ಚೊಚ್ಚಲ ಹೆರಿಗೆಗಾಗಿ ತವರು ಸೇರಿದಳು. 'ನಮ್ಮ ಕೈಲಾದ ಮಟ್ಟಿಗೆ ಆದರಾತಿಥ್ಯ ಮಾಡಿ ಗೌರವದಿಂದ ಕಳಿಸಿಕೊಡುತ್ತಿದ್ದೆವು. ನಮ್ಮನ್ನು ಒಂದು ಮಾತು ಕೇಳದೆ ಕರೆದುಕೊಂಡು ಹೋಗಿದ್ದಾರೆ. ಅವರ ಮಗಳು ಅವರ ಮನೆಯಲ್ಲಿ ಇರಲಿ ಬಿಡು, ಅವರಾಗಿ ಬಂದು ಕರೆಯುವವರೆಗೆ ಅಲ್ಲಿಗೆ ಕಾಲಿಟ್ಟರೆ ನಮ್ಮನ್ನು ಮರೆತುಬಿಡು' ಅಂತ ಹುಡುಗನನ್ನು ಕಟ್ಟಿ ಹಾಕಿದ ತಂದೆ ತಾಯಿ.

ಹೆರಿಗೆಯ ನಂತರ ಮಗುವನ್ನಾದರೂ ನೋಡಲು ಗಂಡ ಬರುತ್ತಾನೆ ಎಂಬ ವಿಶ್ವಾಸ ಆಕೆಗಿತ್ತು. ಆತ ಬರಲಿಲ್ಲ. ನನ್ನದೇನು ತಪ್ಪು, ನಾನೇನು ಮಾಡಲಿ, ಕಡೆಯ ಪಕ್ಷ ಮಗುವಿನ ಮೇಲಾದರೂ ಮಮತೆ ಬೇಡವೇ ಎನ್ನುವುದು ಅವಳ ಕಳವಳ.

ಅಳಿಯ-ಮಾವರಿಬ್ಬರ ನಡುವಿನ ಸಣ್ಣದೊಂದು ಭಾವನಾತ್ಮಕ ವಿರೋಧ ಹಲವರ ನಡುವಿನ ವಿರೋಧವಾಗಿ ವಿಸ್ತರಣೆಗೊಂಡಿದೆ. ಒಲವು ತೀವ್ರವಾಗಬೇಕಿದ್ದ ಸಂದರ್ಭದಲ್ಲಿ ಅನಪೇಕ್ಷಿತ ವಿರಸ ಮಡುಗಟ್ಟಿದೆ. ಮುಖಕ್ಕೆ ಮುಖ ಕೊಟ್ಟು ಮಾತಾಡಲಾಗದ ಹಟ ಪ್ರತಿಷ್ಠೆಯಾಗಿ ಬದಲಾಗಿದೆ.

ಒಂದು ಸಂಸಾರವಾಗಿ, ಸಮಾಜವಾಗಿ ನಮ್ಮ ಸಂಬಂಧಗಳಲ್ಲಿ ನಾನಾ ಕಾರಣಕ್ಕೆ ಮಾತಿಗೆ ಮಾತು ಬೆಳೆದು ಭಿನ್ನಾಭಿಪ್ರಾಯಗಳು ಹುಟ್ಟುತ್ತವೆ. ವ್ಯಕ್ತಿಗತ ಸಂವೇದನೆ ಮತ್ತು ಅಭಿರುಚಿಗಳು ಸದಾ ವಿಭಿನ್ನವಾಗಿರುತ್ತವೆ. ಇಂಥ ವೈವಿಧ್ಯದ ನಡುವೆ ತೀವ್ರ ಜಾಗರೂಕತೆಯಿಂದ ಸಂಬಂಧಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುವವರು ಕಡಿಮೆ. ಆದರೆ, ನಾವು ನಾಗರಿಕರಾದಂತೆ ಯಾರ ಜೊತೆ ನಮ್ಮ ವಿರೋಧವಿದೆಯೋ ಅವರನ್ನು ಮಾತ್ರ ತಾತ್ವಿಕವಾಗಿಯೋ ಭಾವನಾತ್ಮಕವಾಗಿಯೋ ವ್ಯಾವಹಾರಿಕವಾಗಿಯೋ ಎದುರಿಸಬೇಕು. ಬದಲಾಗಿ ವಿರೋಧ ಹೊಂದಿರುವ ವ್ಯಕ್ತಿಗೆ ಸಂಬಂಧಿಸಿದವರನ್ನು ದೂರುವುದು, ಅವರ ಮೇಲೆ ಮುನಿಸಿಕೊಳ್ಳುವುದು ಪ್ರಬುದ್ಧತೆಯ ಲಕ್ಷಣವಲ್ಲ. ಇದು ವ್ಯಕ್ತಿಗತ ಸಂಬಂಧವನ್ನೂ ಹಲವು ಬಗೆಯ ಭಾಷೆ, ಜಾತಿ, ಧರ್ಮಗಳು ಒಟ್ಟಿಗೆ ಉಸಿರಾಡುತ್ತಿರುವ ಸಮಾಜದ ಸ್ವಾಸ್ಥ್ಯವನ್ನೂ ಕಾಪಾಡಿಕೊಳ್ಳಲು ಅಗತ್ಯವಾದ ಬೌದ್ಧಿಕ ಎತ್ತರ. ಇಲ್ಲದಿದ್ದರೆ 'ಮುನಿಸು ಮಾವನ ಮೇಲೆ ಮಗಳೇನು ಮಾಡಿದಳು' ಎಂಬ ಪ್ರಶ್ನೆಗೆ ಉತ್ತರಿಸಲೇಬೇಕಾದ ಹೊಣೆಗಾರಿಕೆಯನ್ನು ಯಾರು ಹೊರಬೇಕು? ಮಾವನ ಮೇಲಿನ ಮುನಿಸು ತನ್ನೊಲವಿನ ಮಡದಿಯನ್ನು ಘಾತಿಸುವ ಆಯುಧವಾಗಬಾರದು.

ವೈಯಕ್ತಿಕವಾದ ಯಾವುದೋ ಕಾರಣಕ್ಕೆ ಇರುವ ವಿರೋಧವನ್ನು ವ್ಯಕ್ತಿಯ ಜೊತೆಗೆ ಆತನ ಭಾಷೆ, ಧರ್ಮ, ದೇವರು, ನಂಬಿಕೆ, ಜಾತಿಗಳಂಥ ವಿಷಯಗಳಿಗೂ ಅಂಟಿಸಿಕೊಂಡು ಮನಸ್ಸುಗಳನ್ನು ಮಲಿನಗೊಳಿಸುವುದು ನ್ಯಾಯಸಮ್ಮತವಲ್ಲ. ಸಕಾರಣ ವಿರೋಧ ಮತ್ತು ನಿಷ್ಕಾರಣ ಪ್ರೀತಿ ನಮ್ಮ ಬದುಕಿನ ಆಶಯವಾಗಬೇಕಾಗಿದೆ.

ಸಂಸಾರದಲ್ಲಿನ ನೆಮ್ಮದಿ ಸಮಾಜದ ನೆಮ್ಮದಿಗೆ ಪ್ರೇರಣೆಯಾಗಿದೆ. 'ಮನೆ ಗೆದ್ದು ಮಾರು ಗೆಲ್ಲು' ಎನ್ನುವ ಮಾತನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಎಲ್ಲರೊಳಗೊಂದಾಗಿ ಬದುಕುವ ರೀತಿಗೆ ಇದು ಮಾರ್ಗವೂ ಮಾದರಿಯೂ ಆಗಿದೆ. ❖

ಗುಂಡಣ್ಣ



ಪದಬಂಧ 6096


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ನೇರವಲ್ಲದ ಕೊಂಕು ಮಾತು (3)
4.ದನದೊಳಗಿನ ಕಾಣ್ಕೆ (3)
5.ಈತ ಸೂಕ್ಷ್ಮವಾಗಿ ಪರಿಶೀಲಿಸುವವನು (4)
6.ಪಾಪಭೀರುವು ನಡೆಸಿದ ಮೇಲ್ವಿಚಾರಣೆ (4)
7.ಕವಿತೆಯನ್ನು ಬರೆಯುವವನು (2)
9.ತರಬೇತಿ ನೀಡುವಾಗ ಸೇರಿದ ಗುಂಪು (2)
13.ದಾರ ಹಿಡಿರುವ ಸೈನ್ಯದ ಮುಖ್ಯಸ್ಥ (4)
14.ನಡುವೆ ರಾಜನಿದ್ದರೂ ರಾಜನಿಲ್ಲದ ಸ್ಥಿತಿ (4)
15.ದಾವಣಿ ಧರಿಸಿ ಹಾಡಿದ್ದು ಜನಪದ ಹಾಡು (3)
16.ಊರೊಳಗೆ ಬಂದಿರುವ ಹಾವು (3)

ಮೇಲಿಂದ ಕೆಳಕ್ಕೆ

1.ಅದೇ ತಾನೆ ಅಭಿವೃದ್ಧಿ ಹೊಂದುತ್ತಿರುವುದು (5)
2.ಈತ ಕಾಡಿನ ರಕ್ಷಕ (5)
3.ಪ್ರದಕ್ಷಿಣೆ ಮಾಡುತ್ತಾ ನೀರನ್ನು ಸಿಂಪಡಿಸುವಿಕೆ (3)
5.ಯಾವಾಗಲೂ ನಿಜವನ್ನು ನುಡಿಯುವವನು (4)
8.ನಾಶಮಾಡುವವನು ಇಲ್ಲಿದ್ದಾನೆ (4)
10.ತಿರುಗಿ ಹಾಕುವ ಲಾಗ (5)
11.ಊರಲ್ಲಿ ರಭಸದಿಂದ ಮುಂದೆ ನುಗ್ಗು (5)
12.ಗುಣಿ ತೋಡುವಾಗ ಹಿಡಿದ ಢಾಲು (3)



6095ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಜಗಜಾಂತರ 4.ವಿದೂಷಕ 5.ಗಗನ 8.ಬಲ್ಲಿದ 9.ಮರಣಕಾಲ 10.ಕಾಮನೆ 12.ನವಿರು 13.ಚಾಡಿಕೋರ 15.ಮನೋವಿಶ್ಲೇಷಣೆ

ಮೇಲಿಂದ ಕೆಳಕ್ಕೆ:
1.ಅಜಗರ 2.ರವಿ 3.ಮಕರಂದ 6.ನಡುಮನೆ 7.ಇಣಚಿ 8.ಬಲಹೀನ 10.ಕಾಟಾಚಾರ 11.ಉರುಟಣೆ 14.ರಮ

ಸುಡೊಕು 6480

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4					6		1
9						2	7	
	7	2						8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6

6479 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ಜುಲೈ 2025 ಸೋಮವಾರ, ಶ್ರೀ ವಿಶ್ವಾವಸು ನಾಮಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ದ್ವಾದಶಿ ಗಂ. 23-11 **ನಕ್ಷತ್ರ:** ಅನುರಾಧ ಗಂ. 25-12 **ಯೋಗ:** ಶುಭ ಗಂ. 22-03 **ಕರಣ:** ಬವ ಗಂ 10-16, ಮಿಥುನ ಮಾಸದ 23 ನೇ ದಿನ. **ಮಳೆ ನಕ್ಷತ್ರ:** ಪುನರ್ವಸು 1 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 – 09-00 **ಸೂರ್ಯೋದಯ:** 06-13 **ಸೂರ್ಯಾಸ್ತ:** 06-58, **ಮುಸ್ಲಿಂ ದಿನಾಂಕ:** 11 ಮೊಹರಮ್, **ಅದೃಷ್ಟ ಸಂಖ್ಯೆ:** 5, 12

ಮೇಷ: ದೇವತಾ ಕಾರ್ಯಗಳು ಕೈಗೊಳ್ಳುವ ತೀರ್ಮಾನ ಮಾಡುವಿರಿ. ಶತ್ರುಪೀಡೆ, ಕಿರುಕುಳ ಆಗಾಗ ತೋರಿಬಂದರೂ ದೇವರ ಕೃಪೆಯಿಂದ ಎಲ್ಲವು ನಿರ್ಮೂಲವಾಗುವುದು. ಕಾರ್ಯಗಳು ಪೂರ್ಣಗೊಳ್ಳಲಿವೆ.

ವೃಷಭ: ವ್ಯವಹಾರಸ್ಥರಿಗೆ ಲಾಭ ಸಿಗಲಾರದು . ನಷ್ಟವೂ ಇರಲಾರದು. ಆರೋಗ್ಯ ಸ್ಥಿತಿಯಲ್ಲಿ ಸುಧಾರಣೆ ಇರಲಿದೆ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ದೊರಕುತ್ತದೆ. ನರಸಿಂಹ ದೇವರ ಸೇವೆಯಿಂದ ಉತ್ತಮ ಫಲ.

ಮಿಥುನ: ಎಣಿಕೆಯ ಕಾರ್ಯಗಳೆಲ್ಲ ದೈಹಿಕ ಶ್ರಮವಿಲ್ಲದೆ ಪೂರ್ಣಗೊಳ್ಳುವುದರಿಂದ ಸಮಯವನ್ನು ಸಂತೋಷದಿಂದ ಕಳೆಯಲಿದ್ದೀರಿ. ಪರಸ್ಪರ ಕಾಳಜಿಗಳ ಬಗ್ಗೆ ಪಾಲುದಾರರು ಸಂತಸದ ಒಪ್ಪಿಗೆ ನೀಡುತ್ತಾರೆ.

ಕರ್ಕಾಟಕ: ಹಿರಿಯರ ಪ್ರಭಾವ ಹಾಗೂ ಗುರುವಿನ ಕೃಪೆಯಿಂದ ಜನೋಪಕಾರಿ ಕೆಲಸಗಳು ಕೈಗೂಡಲಿವೆ. ಗೌರವ ಸಿಗಲಿದೆ. ಪತ್ನಿ ಮಕ್ಕಳೊಂದಿಗೆ ಸಂತಸದ ವಾತಾವರಣವಿರುವುದು.

ಸಿಂಹ: ಮಿತ್ರರಲ್ಲಿ, ಬಂಧು-ಬಾಂಧವರ ವಿಚಾರದಲ್ಲೂ ವಿರೋಧವನ್ನು ವ್ಯಕ್ತಪಡಿಸಬೇಡಿ. ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಿ.

ಕನ್ಯಾ: ಧನಾಗಮನಕ್ಕೇನೂ ಕೊರತೆಯಿರದು. ಹೆಜ್ಜೆ ಹೆಜ್ಜೆಗೂ ಎಚ್ಚರಿಕೆ ಅಗತ್ಯವಿದೆ. ಶೀತ, ಕಫದಂತಹ ಬೇನೆಯನ್ನು ನಿರ್ಲಕ್ಷಿಸಬೇಡಿ. ಸ್ವಂತ ಕಾರ್ಯಗಳೆಲ್ಲವೂ ಜಯಪ್ರದವಾಗಲಿವೆ.

ತುಲಾ: ಕತ್ತಲೆಯ ಪ್ರಪಂಚದಲ್ಲಿರುವ ಜೀವನಕ್ಕೆ ದೂರದಲ್ಲೊಂದು ಜ್ಯೋತಿ ಕಾಣಲಿದೆ. ಮೇಲಧಿಕಾರಿಗಳ ಕಿರುಕುಳದಿಂದ ಹೊರಬರುವ ಕಾಲ ಸಮೀಪದಲ್ಲಿದೆ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲ ಸಿಗದಿರಬಹುದು.

ವೃಶ್ಚಿಕ: ಆನುವಂಶಿಕ ಬೇಡಿಕೆಯೊಂದು ಈಡೇರುವುದರಿಂದ ಕೊಂಚ ನೆಮ್ಮದಿ ಸಿಗಲಿದೆ. ಪ್ರಯಾಣದಲ್ಲಿ ವಂಚನೆ, ನಷ್ಟದ ಪ್ರಸಂಗಗಳಿವೆ. ಎಚ್ಚರಿಕೆಯಿಂದಿರಿ. ಇಟ್ಟಿಗೆ, ಕಬ್ಬಿಣ, ಯಂತ್ರಸಾಮಗ್ರಿಗಳ ಮಾರಾಟ ಏರುಗತಿಯಲ್ಲಿ ನಡೆದೀತು.

ಧನು: ವಾಹನ ಖರೀದಿಯ ಆಲೋಚನೆ ನಿಮ್ಮಿಷ್ಟದಂತೆಯೇ ನೆರವೇರಲಿದೆ. ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿದರೆ ಲೇಸು. ರಕ್ತಸಂಬಂಧಿ ಕಾಯಿಲೆಯ ಲಕ್ಷಣ ಕಾಣಿಸೀತು. ದೈವ ಆರಾಧನೆ ಬಿಡದಿರಿ.

ಮಕರ: ಕೆಲಸಕ್ಕೆ ದುಪ್ಪಟ್ಟು ಸಂಪಾದನೆಯಾಗುವ ಯೋಗವಿದೆ. ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ ವೃತ್ತಿಯಲ್ಲಿ ಬಡ್ತಿ ಅಥವಾ ಸನ್ಮಾನಗಳು ದೊರಕಲಿವೆ.

ಕುಂಭ: ತಂದೆ-ತಾಯಿಯ ಆರೋಗ್ಯದ ಕಡೆಗೆ ಗಮನ ಕೊಡುವುದು ಅನಿವಾರ್ಯ. ವಿದ್ಯಾರ್ಥಿಗಳಿಗೆ ಶ್ರೇಯಸ್ಸು, ಮೇಧಾಶಕ್ತಿ ಹೆಚ್ಚಲಿದೆ. ಸರ್ವತೋಮುಖ ಅಭಿವೃದ್ಧಿಗೆ ಸೋದರವರ್ಗದವರ ಬೆಂಬಲ ಸಿಗಲಿದೆ.

ಮೀನ: ಸುಖಾಸುಮ್ಮನೆ ಅಪವಾದದ ಆರೋಪ ಹೊತ್ತಿರುವ ನಿಮಗೆ ನ್ಯಾಯ ಸಿಗಲಿದೆ. ವ್ಯಾಪಾರಿಗಳಿಗೆ ಲಾಭದಾಯಕ ಬೆಳವಣಿಗೆ. ಸೇವಕ ವರ್ಗದವರಿಗೆ, ಆರಕ್ಷಕರಿಗೆ, ತಾಂತ್ರಿಕರಿಗೆ ಉದ್ಯೋಗದಲ್ಲಿ ಉನ್ನತ ಸ್ಥಾನಮಾನ ದೊರಕಲಿದೆ.



ವಿಕಸಿತ ಭಾರತಕ್ಕೆ ಶೇ 10ರಷ್ಟು ಬೆಳವಣಿಗೆ ಬೇಕು: ಸಿಐಐ

ನವದೆಹಲಿ (ಪಿಟಿಐ): 2047ಕ್ಕೆ ವಿಕಸಿತ ಭಾರತದ ನಿರ್ಮಾಣ ಆಗಬೇಕು ಎಂದು ಕೇಂದ್ರ ಸರ್ಕಾರ ಹೊಂದಿರುವ ಗುರಿ ತಲುಪಬೇಕು ಎಂದಾದರೆ ದೇಶದ ಜಿಡಿಪಿ ಬೆಳವಣಿಗೆ ದರವು (ಹಣದುಬ್ಬರ ಪ್ರಮಾಣವನ್ನು ಪರಿಗಣನೆಗೆ ತೆಗೆದುಕೊಳ್ಳದೆ) ವಾರ್ಷಿಕ ಶೇಕಡ 10ರಷ್ಟು ಇರಬೇಕು ಎಂದು ಭಾರತೀಯ ಕೈಗಾರಿಕಾ ಮಹಾಸಂಘದ (ಸಿಐಐ) ಅಧ್ಯಕ್ಷ ರಾಜೀವ್ ಮೆಮಾನಿ ಹೇಳಿದ್ದಾರೆ.

ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಮೆಮಾನಿ ಅವರು, 'ಭಾರತ ಮತ್ತು ಅಮೆರಿಕದ ನಡುವಿನ ವಾಣಿಜ್ಯ ಒಪ್ಪಂದವು ಅನಿಶ್ಚಿತತೆಯ ಕಾರ್ಮೋಡವನ್ನು ನಿವಾರಿಸಲಿದೆ, ಭಾರತದ ಕಂಪನಿಗಳಿಗೆ ದೊಡ್ಡ ಮಾರುಕಟ್ಟೆ ಲಭ್ಯವಾಗುತ್ತದೆ' ಎಂದು ಹೇಳಿದ್ದಾರೆ.

ಎರಡೂ ದೇಶಗಳ ನಡುವಿನ ವಾಣಿಜ್ಯ ಒಪ್ಪಂದವು ತಂತ್ರಜ್ಞಾನ ವರ್ಗಾವಣೆಗೆ, ಇನ್ನಷ್ಟು ಹೆಚ್ಚಿನ ಸಂಖ್ಯೆಯ ಜಂಟಿ ಪಾಲುದಾರಿಕೆ ಉದ್ದಿಮೆಗಳಿಗೆ ಕೂಡ ದಾರಿ ಮಾಡಿಕೊಡಲಿದೆ ಎಂದು ಅವರು ಹೇಳಿದ್ದಾರೆ.

'ಅರ್ಥ ವ್ಯವಸ್ಥೆಯ ದೃಷ್ಟಿಯಿಂದ ನಮ್ಮ ಸ್ಥಿತಿ ಬಹಳ ಉತ್ತಮವಾಗಿದೆ, ಸ್ಥಿರವಾಗಿದೆ. ನಮ್ಮ ಬಂಡವಾಳ ಮಾರುಕಟ್ಟೆ, ಕೇಂದ್ರೀಯ ಬ್ಯಾಂಕ್, ಬ್ಯಾಂಕುಗಳು ಒಳ್ಳೆಯ ಸ್ಥಿತಿಯಲ್ಲಿ ಇವೆ. ಕಾರ್ಪೊರೇಟ್ ಕಂಪನಿಗಳ ಹಣಕಾಸಿನ ಸ್ಥಿತಿ ಕೂಡ ಚೆನ್ನಾಗಿದೆ' ಎಂದಿದ್ದಾರೆ.

ಅದಾನಿ: ಎನ್‌ಸಿಡಿ ಮೂಲಕ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ಷೇರುಗಳಾಗಿ ಪರಿವರ್ತಿಸ ಲಾಗದ ಸಾಲಪತ್ರದ (ಎನ್‌ಸಿಡಿ) ಹಂಚಿಕೆ ಮೂಲಕ ₹1 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಅದಾನಿ ಸಮೂಹದ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ನಿರ್ಧರಿಸಿದೆ.

ಹಂಚಿಕೆಯು ಜುಲೈ 9ರಂದು ಆರಂಭವಾಗಲಿದ್ದು, 22ರಂದು ಮುಕ್ತಾಯ ಗೊಳ್ಳಲಿದೆ. ಎನ್‌ಸಿಡಿಯ ಮುಖಬೆಲೆ ₹1 ಸಾವಿರವಾಗಿದೆ. ಕನಿಷ್ಠ 10 ಎನ್‌ಸಿಡಿ-ಗಳನ್ನು ಖರೀದಿಸಬೇಕು. ವಾರ್ಷಿಕ ಬಡ್ಡಿ ದರವು ಶೇ 9.30ರಷ್ಟಿದೆ. ಎನ್‌ಸಿಡಿ, 24 ತಿಂಗಳು, 36 ತಿಂಗಳು ಮತ್ತು 60 ತಿಂಗಳ ಅವಧಿ ಹೊಂದಿದೆ.

ಸಂಗ್ರಹಿಸಿದ ಬಂಡವಾಳದ ಪೈಕಿ ಶೇ 75ರಷ್ಟನ್ನು ಬಾಕಿ ಪಾವತಿಗೆ ಬಳಸಲಾಗುವುದು. ಉಳಿದ ಶೇ 25ರಷ್ಟನ್ನು ಕಂಪನಿಯ ಸಾಮಾನ್ಯ ಉದ್ದೇಶಕ್ಕೆ ಬಳಸಲಾಗುವುದು ಎಂದು ಕಂಪನಿ ಭಾನುವಾರ ತಿಳಿಸಿದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಮೊದಲ ಬಾರಿಗೆ ಎನ್‌ಸಿಡಿ ಹಂಚಿಕೆ ಮೂಲಕ ₹800 ಕೋಟಿ ಬಂಡವಾಳ ಸಂಗ್ರಹಿಸಿತ್ತು.

ಐಪಿಒ ಹೂಡಿಕೆ: ಅದೃಷ್ಟ ಪರೀಕ್ಷೆ ಬೇಡ

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಫೋನ್‌ಪೇ, ಜೆಪ್ಟೊ, ಫ್ಯಾಬ್ ಇಂಡಿಯಾ, ಓಯೊ, ಮೀಶೊ, ಕಾರ್ ದೇಖೊ, ಫಿಸಿಕ್ಸ್ ವಾಲಾ, ಕಲ್ಟ್ ಫಿಟ್, ಹಲ್ದಿರಾಮ್ಸ್ ಹೀಗೆ ಸಾಲು ಸಾಲು ಕಂಪನಿಗಳ ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಈ ವರ್ಷ ನಡೆಯಲಿದೆ. ಜನರಿಗೆ ಈ ಬ್ರ್ಯಾಂಡ್‌ಗಳ ಪರಿಚಯವಿರುವ ಕಾರಣ ಸಹಜವಾಗಿಯೇ ಐಪಿಒದಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿರುತ್ತಾರೆ. ಮಾರುಕಟ್ಟೆಯಲ್ಲಿ ನಿರ್ದಿಷ್ಟ ಕಂಪನಿಯ ಷೇರಿನ ವಹಿವಾಟು ಶುರುವಾದಾಗ ಸಿಗುವ ಸಂಭಾವ್ಯ ಗಳಿಕೆ ಅಂದಾಜು (ಗ್ರೇ ಮಾರ್ಕೆಟ್ ಪ್ರೀಮಿಯಂ) ನೋಡಿ ಹಲವರು ಈ ಐಪಿಒಗಳತ್ತ ಆಕರ್ಷಿತರಾಗುತ್ತಾರೆ.

ಷೇರು ಉತ್ತಮ ಬೆಲೆಗೆ ಮಾರುಕಟ್ಟೆಯಲ್ಲಿ ಲಿಸ್ಟ್ ಆದರೆ ಧುತ್ತೆಂದು ಲಾಭ ಗಳಿಸಿಕೊಳ್ಳಬಹುದು (ಲಿಸ್ಟಿಂಗ್ ಗೇನ್ಸ್) ಎನ್ನುವುದು ಇಲ್ಲಿ ಬಹುತೇಕರ ಅಂದಾಜು. ಆದರೆ ಲೆಕ್ಕಾಚಾರ ಮಾಡದೆ ಐಪಿಒಗಳ ಮೇಲೆ ಹೂಡಿಕೆ ಮಾಡಿದರೆ ನಷ್ಟ ಉಂಟಾಗುವ ಸಾಧ್ಯತೆಯೇ ಹೆಚ್ಚು.

ಲಿಸ್ಟಿಂಗ್ ಗೇನ್ಸ್‌ಗಾಗಿ ಹೂಡಿಕೆ: ಕಂಪನಿಯೊಂದರ ಐಪಿಒ ಷೇರಿನ ಬೆಲೆ ₹100 ಇರುತ್ತದೆ ಎಂದುಕೊಳ್ಳಿ. ಆ ಷೇರಿನ ಬೆಲೆ ಷೇರು ಮಾರುಕಟ್ಟೆ ಸೇರ್ಪಡೆ ವೇಳೆ (ಲಿಸ್ಟಿಂಗ್ ಡೇ) ₹150 ಆಗಬಹುದು ಎಂದು ಅಂದಾಜು ಮಾಡಿ ಐಪಿಒದಲ್ಲಿ ಹೂಡಿಕೆ ಮಾಡುವುದನ್ನು ಲಿಸ್ಟಿಂಗ್ ಗೇನ್ಸ್‌ಗಾಗಿ ಹೂಡಿಕೆ ಮಾಡುವುದು ಎನ್ನಬಹುದು. ಆದರೆ, ಷೇರು ಮಾರುಕಟ್ಟೆಯಲ್ಲಿ ವಹಿವಾಟು ಆರಂಭಿಸುವ ಎಲ್ಲಾ ಷೇರುಗಳು ಲಿಸ್ಟಿಂಗ್ ಗೇನ್ಸ್ ಕೊಡುವುದಿಲ್ಲ. ಸೆಬಿ ವರದಿಯ ಪ್ರಕಾರ 2021ರ ಏಪ್ರಿಲ್‌ನಿಂದ 2023ರ ಡಿಸೆಂಬರ್ ನಡುವೆ 144 ಕಂಪನಿಗಳು ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆಗಿವೆ. ಈ ಪೈಕಿ ಶೇ 75ರಷ್ಟು ಕಂಪನಿಗಳು ಮಾತ್ರ ಷೇರು ಮಾರುಕಟ್ಟೆ ಸೇರ್ಪಡೆ ವೇಳೆ ಲಾಭ ಕೊಟ್ಟಿವೆ. ಶೇ 25ರಷ್ಟು ಕಂಪನಿಗಳು ಯಾವುದೇ ಲಾಭ ಕೊಟ್ಟಿಲ್ಲ.

ಪೇಟಿಎಂನಂತಹ ಕಂಪನಿ ಷೇರು ಮಾರುಕಟ್ಟೆ ಲಿಸ್ಟಿಂಗ್ ವೇಳೆ ಶೇ 27ರಷ್ಟು ಕುಸಿದಿದೆ. ಎಲ್‌ಐಸಿ ಶೇ 7ರಷ್ಟು ಇಳಿಕೆ ಕಂಡು ಲಿಸ್ಟ್ ಆಗಿದೆ. ಹುಂಡೈ ಮೋಟರ್ಸ್ ಲಿಸ್ಟಿಂಗ್ ವೇಳೆ ಶೇ 7ರಷ್ಟು ತಗ್ಗಿದೆ. ಹಾಗೆಂದ ಮಾತ್ರಕ್ಕೆ ಲಿಸ್ಟಿಂಗ್ ಡೇ ವೇಳೆ ಒಳ್ಳೆಯ ಲಾಭ ಕೊಟ್ಟ ಕಂಪನಿ ಇಲ್ಲ ಎಂದಲ್ಲ. ಟಾಟಾ ಟೆಕ್ನಾಲಜೀಸ್ ಮತ್ತು ಜೊಮಾಟೊದಂತಹ ಕಂಪನಿಗಳು ಲಿಸ್ಟಿಂಗ್ ಡೇ ವೇಳೆ ಕ್ರಮವಾಗಿ ಶೇ 162 ಹಾಗೂ ಶೇ 65ರಷ್ಟು ಗಳಿಕೆ ನೀಡಿವೆ. ಈ ವಿವರಣೆಯ ಒಟ್ಟು ತಾತ್ಪರ್ಯ ಇಷ್ಟೆ, ಐಪಿಒ ಹೂಡಿಕೆ ವೇಳೆ ಲಾಟರಿ ಟಿಕೆಟ್ ಲೆಕ್ಕಾಚಾರದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿಯಬಾರದು.

ಅರಿಯದೇ ಹೂಡಿಕೆ: ಬಹುತೇಕರು ಐಪಿಒಗಳಲ್ಲಿ ಹೂಡಿಕೆ ಮಾಡುವಾಗ ಅರಿತು ಹಣ ತೊಡಗಿಸುವುದಿಲ್ಲ. ಸ್ನೇಹಿತರು, ಪರಿಚಯದವರ ಮಾತು ಕೇಳಿ, ಸಾಮಾಜಿಕ ಜಾಲತಾಣಗಳಲ್ಲಿನ ಪೋಸ್ಟ್ ನೋಡಿ ಪೂರ್ವಾಪರ ಅರಿಯದೇ, ಲಾಭದ ಆಸೆಗಾಗಿ ಕಣ್ಣುಮುಚ್ಚಿ ಐಪಿಒಗಳಲ್ಲಿ ಹಣ ತೊಡಗಿಸುವ ಪರಿಪಾಠವಿದೆ. ಯಾವುದೇ ಕಂಪನಿಯ ಮೇಲೆ ಹೂಡಿಕೆ ಮಾಡುವಾಗ ಆ ಕಂಪನಿ ಏನು ಕೆಲಸ ಮಾಡುತ್ತದೆ, ಅದರ ವ್ಯವಹಾರದ ಮಾದರಿ ಏನು, ಆರ್ಥಿಕ ಪರಿಸ್ಥಿತಿ ಹೇಗಿದೆ, ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಐಪಿಒದ ಉದ್ದೇಶ ಸಾಲ ಮರು ಪಾವತಿಯೋ ಅಥವಾ ಕಂಪನಿಯ ಬೆಳವಣಿಗೆಯೋ, ಕಂಪನಿಯಲ್ಲಿರುವ ರಿಸ್ಕ್‌ಗಳೇನು ಎನ್ನುವ ಬಗ್ಗೆ ಅರಿತುಕೊಳ್ಳಬೇಕು. ಯಾವುದೇ ಕಂಪನಿ ಐಪಿಒ ನಡೆಸುವಾಗ ಡಿಆರ್‌ಎಚ್‌ಪಿ ಬಿಡುಗಡೆ ಮಾಡುತ್ತದೆ. ಅದರಲ್ಲಿ ಈ ಮಾಹಿತಿ ಸಿಗುತ್ತದೆ.

ಕಳೆದುಕೊಳ್ಳುವ ಭಯ: 2023ರಲ್ಲಿ ನಾನು ಆಯ್ದ ಉತ್ತಮ ಕಂಪನಿಗಳ ಐಪಿಒಗಳಲ್ಲಿ ಬಿಡ್ ಮಾಡಿದೆ. ಅರ್ಜಿ ಹಾಕಿದ 5 ಐಪಿಒಗಳ ಪೈಕಿ 2 ಐಪಿಒಗಳು ಸಿಕ್ಕಿದವು. ಇದನ್ನು ತಿಳಿದ ನನ್ನ ಸ್ನೇಹಿತ ಯಾವುದೇ ಅಧ್ಯಯನ, ಆಲೋಚನೆ ಮಾಡದೆ ಅಷ್ಟು ಉತ್ತಮವಲ್ಲದ ಕಂಪನಿಯ ಐಪಿಒ ಮೇಲೆ ಹೂಡಿಕೆ ಮಾಡಿ ಅಲಾಟ್‌ಮೆಂಟ್ ಕೂಡ ಪಡೆದ. ಆದರೆ ಷೇರು ಮಾರುಕಟ್ಟೆ ಸೇರ್ಪಡೆಯ ದಿನವೇ ಐಪಿಒ ನಷ್ಟ ಅನುಭವಿಸಿದ ಕಾರಣ ಅವನ ಅಸಲಿನ ಮೊತ್ತವೂ ಕೊಂಚ ಕರಗಿತು. ನಂತರ ನನ್ನ ಬಳಿ ಬಂದು ಹೀಗೇಕೆ ಆಯಿತು ಎಂದು ಕೇಳಿದ. ಐಪಿಒ ಬಗ್ಗೆ ನಿನಗೆ ಏನು ಗೊತ್ತು ಎಂದು ಕೇಳಿದೆ. ನೀನು ಹೂಡಿಕೆ ಮಾಡಿ ಲಾಭ ಮಾಡಿದೆಯಲ್ಲಾ ಅದಕ್ಕಾಗಿ ನಾನೂ ಮಾಡಿದೆ ಅಂದ. ಅಲ್ಲಿಗೆ ಸಮಸ್ಯೆ ಎಲ್ಲಾಗಿದೆ ಎನ್ನುವುದು ನನ್ನ ಅರಿವಿಗೆ ಬಂತು. ನೆನಪಿಡಿ, ಅನುಕರಣೆ ಮಾಡಿ ಎಂದಿಗೂ ಹೂಡಿಕೆ ಮಾಡಬೇಡಿ, ಅಧ್ಯಯನ ಮಾಡಿ ಮುಂದುವರಿಯಿರಿ.

ಗ್ರೇ ಮಾರ್ಕೆಟ್ ಪ್ರೀಮಿಯಂ ಅಂದಾಜಿನಲ್ಲಿ ಐಪಿಒಗಳ ಮೇಲೆ ಹೂಡಿಕೆ ಮಾಡುವುದು ದೊಡ್ಡ ತಪ್ಪು. ಗ್ರೇ ಮಾರ್ಕೆಟ್ ಪ್ರೀಮಿಯಂ ಅಂದರೆ ನಿರ್ದಿಷ್ಟ ಕಂಪನಿಯ ಐಪಿಒ ಷೇರು ಮಾರುಕಟ್ಟೆಗೆ ಸೇರ್ಪಡೆಯಾಗುವ ಮುನ್ನ ಪಡೆಯುತ್ತಿರುವ ಅನಧಿಕೃತ ಬೆಲೆ. ಉದಾಹರಣೆಗೆ ಐಪಿಒ ಒಂದರಲ್ಲಿ ಷೇರಿನ ಬೆಲೆ ₹100 ಆಗಿದ್ದು ಗ್ರೇ ಮಾರ್ಕೆಟ್ ಪ್ರೀಮಿಯಂ ₹60 ಇದ್ದರೆ ಜನ ಆ ಕಂಪನಿಯ ಷೇರು ಮಾರುಕಟ್ಟೆಯಲ್ಲಿ ವಹಿವಾಟು ಆರಂಭಿಸುವ ಹೊತ್ತಿನಲ್ಲಿ ₹160ಕ್ಕೆ ಪಡೆಯುತ್ತದೆ ಎಂದು ಭಾವಿಸುತ್ತಾರೆ. ಆದರೆ ಗ್ರೇ ಮಾರ್ಕೆಟ್ ಪ್ರೀಮಿಯಂ ಎಂಬುದು ನಿಯಂತ್ರಿತ ವ್ಯವಸ್ಥೆ ಅಲ್ಲ. ನಿರ್ದಿಷ್ಟ ಐಪಿಒ ಷೇರಿನ ಬೆಲೆ ಹೀಗೆಯೇ ಆಗುತ್ತದೆ ಎಂದು ಹೇಳಲು ಗ್ರೇ ಮಾರ್ಕೆಟ್ ಪ್ರೀಮಿಯಂ ನಿಖರ ಮಾನದಂಡವಲ್ಲ. ಕಂಪನಿಗಳ ಷೇರು ಗ್ರೇ ಮಾರ್ಕೆಟ್ ಪ್ರೀಮಿಯಂಗಿಂತ ಕಡಿಮೆ ಬೆಲೆಗೆ ಮಾರುಕಟ್ಟೆಯಲ್ಲಿ ವಹಿವಾಟು ಆರಂಭಿಸಿದ ನಿದರ್ಶನಗಳು ಹಲವು ಇವೆ.

ಐಪಿಒ ಹೂಡಿಕೆ ಮಾಡುವಾಗ ನೆನಪಿಡಿ

- ಕಂಪನಿಯಲ್ಲಿ ಆರಂಭದಲ್ಲಿ ಹಣ ತೊಡಗಿಸಿದ ಹೂಡಿಕೆದಾರರಿಗೆ ನಗದೀಕರಣ ಮಾಡಿಕೊಳ್ಳಲು ಕೆಲ ಬಾರಿ ಐಪಿಒಗಳು ನಡೆಯುತ್ತವೆ. ಅದನ್ನು ನಿಮ್ಮ ಲಾಭ ಗಳಿಕೆಯ ಗಣಿ ಎಂದು ಭಾವಿಸುವುದು ತಪ್ಪು
- ನಿರ್ದಿಷ್ಟ ಐಪಿಒಗಳಲ್ಲಿ ಹೂಡಿಕೆ ಮಾಡುವಾಗ ಅದೇ ವಲಯದ ಇತರ ಕಂಪನಿಗಳ ಬೆಲೆ ನೋಡಿ. ಬೆಲೆ ಜಾಸ್ತಿ ಇದ್ದರೆ ಹೂಡಿಕೆ ಪರಿಗಣಿಸಬೇಡಿ
- ಐಪಿಒ ನಡೆಸುತ್ತಿರುವುದು ಜನಪ್ರಿಯ ಕಂಪನಿ ಎಂದಾಕ್ಷಣ ಅದು ಲಾಭ ಕೊಡುತ್ತದೆ ಎಂದಲ್ಲ
- ನಿಮ್ಮ ಪೋರ್ಟ್‌ಫೋಲಿಯೊದ ಶೇ 10ಕ್ಕಿಂತ ಹೆಚ್ಚಿನ ಮೊತ್ತವನ್ನು ಐಪಿಒಗಳ ಮೇಲೆ ಹೂಡಿಕೆ ಮಾಡದಿರಿ

ಇಸ್ರೇಲ್ ನಿಯೋಗ ಕತಾರ್‌ಗೆ

ದೀರ್ ಅಲ್-ಬಲಾಹ್ (ಗಾಜಾಪಟ್ಟಿ) (ಎಪಿ): ಕದನ ವಿರಾಮ ಮಾತುಕತೆಗಾಗಿ ಇಸ್ರೇಲ್ ನಿಯೋಗವನ್ನು ಕತಾರ್‌ಗೆ ಭಾನುವಾರ ಕಳುಹಿಸಲಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿ ತಿಳಿಸಿದೆ.

'ಸ್ವೀಕಾರಾರ್ಹವಲ್ಲದ' ಬದಲಾವಣೆಗಳ ಪ್ರಸ್ತಾವನೆಯನ್ನು ಹಮಾಸ್ ಮುಂದಿಟ್ಟಿದೆ ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಒಪ್ಪಂದ ಮಾಡಿಕೊಳ್ಳಲು ಒತ್ತಾಯಿಸಿದ್ದು, ಆ ಕುರಿತು ಚರ್ಚಿಸಲು ನೆತನ್ಯಾಹು ಅವರನ್ನು ಶ್ವೇತಭವನಕ್ಕೆ ಸೋಮವಾರ ಆಹ್ವಾನಿಸಿದ್ದಾರೆ.

ಇಸ್ರೇಲ್ ವೈಮಾನಿಕ ದಾಳಿಗೆ ಗಾಜಾದಲ್ಲಿ ಸುಮಾರು 14 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ ಮತ್ತು ಆಹಾರ ನೆರವಿಗಾಗಿ ಅಲೆದಾಡುತ್ತಿದ್ದ ಇತರ 10 ಜನರು ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯೊಂದರ ಅಧಿಕಾರಿಗಳು ತಿಳಿಸಿದ್ದಾರೆ.

ಆಹಾರದ ನೆರವು ನೀಡುತ್ತಿದ್ದ 'ಗಾಜಾ ಹ್ಯುಮ್ಯಾನಿಟೇರಿಯನ್ ಫೌಂಡೇಶನ್'ನ ಅಮೆರಿಕದ ಇಬ್ಬರು ಸ್ವಯಂಸೇವಕರಿಗೂ ದಾಳಿಯಲ್ಲಿ ಗಾಯಗಳಾಗಿವೆ. ಈ ದಾಳಿಯನ್ನು ಹಮಾಸ್ ಮಾಡಿದೆ ಎಂದು ಆರೋಪಿಸಲಾಗಿದೆ.

50 ಸಾವಿರ ಸಿಬ್ಬಂದಿ ನೇಮಕ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರಿ ವಲಯದ 12 ಬ್ಯಾಂಕ್‌ಗಳಿಂದ ನೇಮಕಾತಿ

ನವದೆಹಲಿ (ಪಿಟಿಐ): ಹೆಚ್ಚುತ್ತಿರುವ ವ್ಯವಹಾರದ ಅಗತ್ಯತೆ ಪೂರೈಸಲು ಮತ್ತು ವಹಿವಾಟು ವಿಸ್ತರಿಸಲು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರಿ ವಲಯದ ಬ್ಯಾಂಕ್‌ಗಳು 50 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಮುಂದಾಗಿವೆ.

ಈ ಪೈಕಿ 21 ಸಾವಿರ ಹುದ್ದೆಗಳು ಅಧಿಕಾರಿ ಹಂತದವು. ಇನ್ನುಳಿದವು ಗುಮಾಸ್ತ ಹಾಗೂ ಇತರ ಹುದ್ದೆಗಳು. ವಿವಿಧ ಬ್ಯಾಂಕ್‌ಗಳಿಂದ ಈ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ದೇಶದ ಸರ್ಕಾರಿ ಬ್ಯಾಂಕ್‌ಗಳ ಪೈಕಿ ಅತಿದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) 20 ಸಾವಿರ ಸಿಬ್ಬಂದಿ ನೇಮಕಕ್ಕೆ ನಿರ್ಧರಿಸಿದೆ. ಈ ಪೈಕಿ 505 ಪ್ರೊಬೇಷನರಿ ಅಧಿಕಾರಿಗಳು ಮತ್ತು 13,455 ಕಿರಿಯ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಂಡಿದೆ. ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಬ್ಯಾಂಕ್ ಶಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ಗುರಿಯನ್ನು ಬ್ಯಾಂಕ್ ಹೊಂದಿದೆ.

2025ರ ಮಾರ್ಚ್ ಅಂತ್ಯದ ವೇಳೆಗೆ ಎಸ್‌ಬಿಐನಲ್ಲಿ ಒಟ್ಟು 2,36,226 ಸಿಬ್ಬಂದಿ ಇದ್ದಾರೆ. ಎಸ್‌ಬಿಐನಲ್ಲಿ ಪ್ರತಿ ವರ್ಷ ಕೆಲಸ ತೊರೆಯುವವರ ಪ್ರಮಾಣ ಶೇ 2ಕ್ಕಿಂತ ಕಡಿಮೆ ಇದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) 5,500 ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಿದೆ. ಮಾರ್ಚ್ ಅಂತ್ಯದ ವೇಳೆಗೆ ಬ್ಯಾಂಕ್ 1,02,746 ಸಿಬ್ಬಂದಿಯನ್ನು ಹೊಂದಿದೆ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ 4 ಸಾವಿರ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಯೋಜಿಸಿದೆ.

ಸರ್ಕಾರಿ ವಲಯದ ಬ್ಯಾಂಕ್‌ಗಳು ತಮ್ಮ ಅಧೀನ ಸಂಸ್ಥೆಗಳನ್ನು ಷೇರುಪೇಟೆಯಲ್ಲಿ ನೋಂದಾಯಿಸಿ, ಅವುಗಳಲ್ಲಿ ಹೂಡಿಕೆಯ ನಗದೀಕರಣದ ಬಗ್ಗೆ ಪರಿಶೀಲನೆ ನಡೆಸುವಂತೆ ಹಣಕಾಸು ಸಚಿವಾಲಯವು ಸೂಚಿಸಿದೆ.

ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಅಥವಾ ಷೇರು ವಿಕ್ರಯಕ್ಕಾಗಿ ಸುಮಾರು 15 ಅಧೀನ ಸಂಸ್ಥೆಗಳು ಅಥವಾ ಸರ್ಕಾರಿ ವಲಯದ ಬ್ಯಾಂಕ್‌ಗಳ ಜಂಟಿ ಸಂಸ್ಥೆಗಳನ್ನು ಗುರುತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ನೇಮಕಾತಿ
- ಎಸ್‌ಬಿಐನಲ್ಲಿ ಪ್ರಸ್ತುತ ಒಟ್ಟು 2,36,226 ಸಿಬ್ಬಂದಿ
- ಎಸ್‌ಬಿಐನಲ್ಲಿ ಕೆಲಸ ಬಿಡುವವರ ಪ್ರಮಾಣ ಶೇ 2ಕ್ಕಿಂತ ಕಡಿಮೆ

'ಅಮೆರಿಕ ಪಕ್ಷ' ಸ್ಥಾಪನೆ: ಮಸ್ಕ್

ನ್ಯೂಯಾರ್ಕ್ (ಪಿಟಿಐ): ಅಮೆರಿಕನ್ನರಿಗೆ ಅವರ ಸ್ವಾತಂತ್ರ್ಯವನ್ನು ಮರಳಿ ದಕ್ಕಿಸಿಕೊಡಲು ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಿರುವುದಾಗಿ ಇಲಾನ್ ಮಸ್ಕ್ ಘೋಷಿಸಿದ್ದಾರೆ.

'ದೇಶದಲ್ಲಿರುವ ಎರಡು ಪಕ್ಷಗಳಿಗೆ ಸವಾಲೊಡ್ಡಲು 'ಅಮೆರಿಕ ಪಕ್ಷ' ಸ್ಥಾಪಿಸಿದ್ದೇನೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ನಿಮ್ಮ ಸ್ವಾತಂತ್ರ್ಯವನ್ನು ಮರಳಿ ದಕ್ಕಿಸಿಕೊಡಲು ಇಂದು ಅಮೆರಿಕ ಪಕ್ಷವು ರಚನೆಯಾಗಿದೆ' ಎಂದು ತಿಳಿಸಿದರು. ಆದರೆ, ಪಕ್ಷವನ್ನು ಎಲ್ಲಿ ನೋಂದಾಯಿಸಿದ್ದಾರೆ ಎಂದು ಅವರು ಮಾಹಿತಿ ನೀಡಿಲ್ಲ.

ಒಂದು ಪಕ್ಷವನ್ನು ಕಾನೂನುಬದ್ಧವಾಗಿ ರಚಿಸಲು ಫೆಡರಲ್ ಎಲೆಕ್ಷನ್ ಕಮಿಷನ್‌ನಲ್ಲಿ (ಎಫ್‌ಇಸಿ) ನೋಂದಣಿ ಮಾಡಬೇಕು. ಆದರೆ, ಎಫ್‌ಇಸಿನಿಂದ ಪಕ್ಷದ ರಚನೆಯ ಕುರಿತು ಯಾವುದೇ ಮಾಹಿತಿ ದೊರೆತಿಲ್ಲ.

ಪಹಲ್ಗಾಮ್ ರೀತಿ ಭಾಷೆ ಆಧಾರದಲ್ಲಿ ದಾಳಿ: ಆಶೀಷ್

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಭಯೋತ್ಪಾದಕರು ಪಹಲ್ಗಾಮ್‌ನಲ್ಲಿ ಧರ್ಮದ ಆಧಾರಲ್ಲಿ ದುಷ್ಕೃತ್ಯ ಮೆರೆದರೆ, ಮಹಾರಾಷ್ಟ್ರದಲ್ಲಿ ಭಾಷೆಯ ಆಧಾರದಲ್ಲಿ ಜನರ ಮೇಲೆ ದಾಳಿ ನಡೆಸುತ್ತಿರುವುದು ವಿಷಾದದ ಸಂಗತಿ ಎಂದು ಮಹಾರಾಷ್ಟ್ರ ಸಚಿವ ಆಶೀಷ್ ಶೇಲಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ರಾಜ್ಯದ ಅತಿ ದೊಡ್ಡ ಪಕ್ಷವಾಗಿರುವ ಬಿಜೆಪಿಯು ಮರಾಠಿಗರ ಅಸ್ಮಿತೆಯನ್ನು ಕಾಪಾಡುವ ಜೊತೆಗೆ ಮರಾಠಿಗರಲ್ಲದ ನಿವಾಸಿಗಳನ್ನೂ ರಕ್ಷಿಸುತ್ತದೆ. ನಮಗೆ ಮರಾಠಿ, ರಾಜಕೀಯ ವಿಷಯ ಅಲ್ಲ' ಎಂದು ಅವರು ಹೇಳಿದರು.

'ಹಿಂದೂಗಳಿಗೆ ಥಳಿಸುವುದನ್ನು ಆನಂದಿಸುತ್ತಿರುವ ನಾಯಕರನ್ನು ರಾಜ್ಯವು ಗಮನಿಸುತ್ತಿದೆ' ಎಂದು ಯಾರ ಹೆಸರನ್ನೂ ಉಲ್ಲೇಖಿಸದೆ ವಾಗ್ದಾಳಿ ನಡೆಸಿದರು.

ಆಶೀಷ್ ಅವರ ಹೇಳಿಕೆಯನ್ನು ಕೇಂದ್ರ ಸಚಿವ ರಾಮದಾಸ್ ಅಠವಲೆ ಅವರು ಸಮರ್ಥಿಸಿಕೊಂಡಿದ್ದಾರೆ. 'ಆಶೀಷ್ ಸತ್ಯವನ್ನೇ ಹೇಳಿದ್ದಾರೆ' ಎಂದು ಅವರು ಹೇಳಿದ್ದಾರೆ.

ಭಾರಿ ಮಳೆ ನಡುವೆಯೂ ಸಾವಿರಾರು ಜನರಿಂದ ಧರ್ಮ ಗುರುವಿನ ಜನ್ಮ ದಿನಾಚರಣೆ

ದಲೈ ಲಾಮಾಗೆ 90: ಜಾಗತಿಕ ನಾಯಕರ ಶುಭಾಶಯ

ಧರ್ಮಶಾಲಾ (ಪಿಟಿಐ): ಭಾರಿ ಮಳೆಯ ನಡುವೆಯೂ ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಅವರ 90ನೇ ಹುಟ್ಟುಹಬ್ಬವನ್ನು ತ್ಸುಗ್ಲಾಖಾಂಗ್ ದೇವಾಲಯದ ಮುಂಭಾಗ ಸೇರಿದ ಸಾವಿರಾರು ಜನರು ಸಂಭ್ರಮದಿಂದ ಆಚರಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಟಿಬೆಟಿಯನ್ ಬೌದ್ಧ ಪಂಗಡಗಳ ಪ್ರತಿನಿಧಿಗಳು, ಶಾಲಾ ಮಕ್ಕಳು, ವಿವಿಧ ದೇಶಗಳ ನರ್ತಕರು ಮತ್ತು ಗಾಯಕರು ಭಾಗವಹಿಸಿದ್ದರು.

ಭಾರತ, ಅಮೆರಿಕ, ತೈವಾನ್ ಸೇರಿದಂತೆ ಜಾಗತಿಕ ನಾಯಕರು ಅವರಿಗೆ ಶುಭಾಶಯ ಕೋರಿದ್ದು, ಟಿಬೆಟಿಯನ್ ಜನರಿಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿದ್ದಾರೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಅಮೆರಿಕದ ಶುಭಾಶಯಗಳನ್ನು ತಿಳಿಸಿ, 'ಟಿಬೆಟಿಯನ್ನರ ಮೂಲಭೂತ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಪರವಾಗಿ ದೃಢವಾಗಿ ನಿಲ್ಲುತ್ತದೆ' ಎಂದು ಒತ್ತಿ ಹೇಳಿದ್ದಾರೆ.

ಚೀನಾಕ್ಕೆ ತಿರುಗೇಟು ನೀಡಿರುವ ಅವರು, ತಮ್ಮ ಧಾರ್ಮಿಕ ನಾಯಕರ ಆಯ್ಕೆಯು ಟಿಬೆಟಿಯನ್ನರ ಹಕ್ಕು ಎಂದು ಹೇಳಿದ್ದಾರೆ. ದಲೈ ಲಾಮಾ ಅವರ ಉತ್ತರಾಧಿಕಾರಿ ಆಯ್ಕೆಗೆ ತನ್ನ ಒಪ್ಪಿಗೆ ಬೇಕು ಮತ್ತು ಅದು ತನ್ನ ನೆಲದಲ್ಲೆ ನಡೆಯಬೇಕು ಎಂದು ಚೀನಾ ತಾಕೀತು ಮಾಡಿತ್ತು.

ತನ್ನ ಪ್ರದೇಶ ಎಂದು ಚೀನಾ ಪ್ರತಿಪಾದಿಸುವ ತೈವಾನ್ ಕೂಡಾ ದಲೈ ಲಾಮಾ ಅವರಿಗೆ ಶುಭಾಶಯ ಕೋರಿದ್ದು, ಅದರ ಅಧ್ಯಕ್ಷ ಲೈ ಚಿಂಗ್, 'ತೈವಾನ್‌ನಲ್ಲಿ ತೀವ್ರವಾಗಿ ಪ್ರತಿಧ್ವನಿಸುವ ಮೌಲ್ಯಗಳಾದ ಶಾಂತಿ ಮತ್ತು ಮಾನವ ಹಕ್ಕುಗಳಿಗಾಗಿ ನೀವು ಮಾಡುವ ಸಮರ್ಪಿತ ಕೆಲಸಕ್ಕಾಗಿ ಶ್ಲಾಘನೆ ವ್ಯಕ್ತಪಡಿಸುತ್ತೇವೆ' ಎಂದು ಹೇಳಿದ್ದಾರೆ.

ಅಮೆರಿಕದ ಮೂವರು ಮಾಜಿ ಅಧ್ಯಕ್ಷರಾದ ಬರಾಕ್ ಒಬಾಮ, ಬಿಲ್ ಕ್ಲಿಂಟನ್ ಮತ್ತು ಜಾರ್ಜ್ ಡಬ್ಲು ಬುಷ್ ಅವರು ಕೂಡಾ ದಲೈ ಲಾಮಾ ಅವರಿಗೆ ವಿಡಿಯೊ ಮೂಲಕ ಶುಭಾಶಯ ಕೋರಿದ್ದಾರೆ.



ಟಿಬೆಟಿಯನ್ ಧರ್ಮಗುರು ದಲೈ ಲಾಮಾ ತಮ್ಮ ಹುಟ್ಟುಹಬ್ಬ ಆಚರಣೆಯ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಭಾನುವಾರ ಭಾಗವಹಿಸಿದರು —ಎಎಫ್‌ಪಿ ಚಿತ್ರ

> ದಲೈ ಲಾಮಾ ಅವರಿಗೆ ಹುಟ್ಟುಹಬ್ಬದ ಶುಭಾಶಯ. ಅವರು ಪ್ರೀತಿ, ಕರುಣೆ, ತಾಳ್ಮೆ ಮತ್ತು ನೈತಿಕ ಶಿಸ್ತಿನ ಶಾಶ್ವತ ಸಂಕೇತವಾಗಿದ್ದಾರೆ. ಅವರ ಆರೋಗ್ಯ, ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸುತ್ತೇನೆ
> **ನರೇಂದ್ರ ಮೋದಿ,** ಭಾರತದ ಪ್ರಧಾನಿ

ನೆಹರೂ ಜೊತೆಗಿನ ಮಾತುಕತೆ ಮೆಲುಕು ಹಾಕಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ದಲೈ ಲಾಮಾ ಅವರ ಹುಟ್ಟುಹಬ್ಬಕ್ಕೆ ಕಾಂಗ್ರೆಸ್ ಶುಭಾಶಯ ಕೋರಿದೆ. 1959ರ ಏಪ್ರಿಲ್ 24ರಂದು ಜವಾಹರಲಾಲ್ ನೆಹರೂ ಮತ್ತು ದಲೈ ಲಾಮಾ ಅವರು ಮುಸ್ಸೋರಿಯಲ್ಲಿ ನಡೆಸಿದ್ದ ನಾಲ್ಕು ಗಂಟೆಗಳ ಮಾತುಕತೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡಿದೆ.

ಈ ವೇಳೆ ವಿದೇಶಾಂಗ ಕಾರ್ಯದರ್ಶಿ ಸುಬಿಮಲ್ ದತ್ ಮತ್ತು ದುಭಾಷಿಗಳು ಮಾತ್ರ ಉಪಸ್ಥಿತರಿದ್ದರು ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹೇಳಿದ್ದಾರೆ. ದಲೈ ಲಾಮಾ 1959ರ ಮಾರ್ಚ್ 31ರಿಂದ ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

ಅದರ ನಂತರ ಅವರು ದೇಶದಾದ್ಯಂತ ವಿಸ್ತೃತ ಪ್ರವಾಸ ಕೈಗೊಂಡರು. ನಂತರ ಧರ್ಮಶಾಲೆಯಲ್ಲಿ ಅವರ ಸಂಸ್ಥೆ ಸ್ಥಾಪನೆಯಾಯಿತು. ತದನಂತರ ಬೈಲಕುಪ್ಪೆ, ಮುಂಡಗೋಡ್, ಮತ್ತು ಹುಣಸೂರಿನಂತಹ ವಿವಿಧ ಪ್ರದೇಶಗಳಲ್ಲಿ ಟಿಬೆಟಿಯನ್ ನೆಲೆಗಳು ಆರಂಭವಾದವು ಎಂದು ಜೈರಾಮ್ ಹೇಳಿದ್ದಾರೆ.

ಆನ್‌ಲೈನ್ ಬೆಟ್ಟಿಂಗ್‌ಗೆ ಅಂಕುಶ

ಒಂದನೇ ಪುಟದಿಂದ...

ಪ್ರಾಧಿಕಾರದಲ್ಲಿ ಯಾರೆಲ್ಲ ಇರುತ್ತಾರೆ?: ಕಾನೂನು, ಸಾರ್ವಜನಿಕ ಆಡಳಿತ ಅಥವಾ ತಂತ್ರಜ್ಞಾನದಲ್ಲಿ ಅನುಭವ ಹೊಂದಿರುವವರನ್ನು ಈ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಬೇಕು. ಮಾಹಿತಿ ತಂತ್ರಜ್ಞಾನ, ಹಣಕಾಸು ಮತ್ತು ಸಮಾಜ ಕಲ್ಯಾಣ ಈ ಮೂರು ಕ್ಷೇತ್ರಗಳಲ್ಲಿ ಅನುಭವ ಇರುವ ತಲಾ ಒಬ್ಬರು (ಒಟ್ಟು ಮೂವರು) ಪ್ರಾಧಿಕಾರದ ಸದಸ್ಯರಾಗಿರುತ್ತಾರೆ ಎಂದೂ ಮಸೂದೆಯಲ್ಲಿದೆ.

₹5 ಲಕ್ಷದವರೆಗೆ ದಂಡ: ಅಕ್ರಮ ಬೆಟ್ಟಿಂಗ್‌ನಲ್ಲಿ ತೊಡಗಿರುವ ನೋಂದಾಯಿಸದ ಆನ್‌ಲೈನ್ ವೇದಿಕೆಗಳು ಮತ್ತು ವ್ಯಕ್ತಿಗಳಿಗೆ ಚಟುವಟಿಕೆ ಸ್ಥಗಿತಗೊಳಿಸುವಂತೆ ಪ್ರಾಧಿಕಾರವು ಆದೇಶ ಹೊರಡಿಸಬೇಕು. ಈ ಅಪರಾಧವನ್ನು ಪುನರಾವರ್ತನೆ ಮಾಡಿದರೆ ₹5 ಲಕ್ಷದವರೆಗೆ ದಂಡ ವಿಧಿಸಲಾಗುವುದು. ಪ್ರಾಧಿಕಾರವು ನ್ಯಾಯಾಲಯದಿಂದ ವಾರಂಟ್ ಪಡೆದು ಶಂಕಿತ ಅಕ್ರಮ ಬೆಟ್ಟಿಂಗ್ ನಿರ್ವಾಹಕರ ಸ್ಥಳಗಳು, ಸರ್ವರ್‌ಗಳು ಮತ್ತು ದಾಖಲೆಗಳ ಶೋಧ, ವಶಪಡಿಸಿಕೊಳ್ಳುವಿಕೆ ಮತ್ತು ಲೆಕ್ಕಪರಿಶೋಧನೆ ನಡೆಸಬಹುದು. ಪ್ರಾಧಿಕಾರದ ಆದೇಶಗಳ ವಿರುದ್ಧ ಶಂಕಿತ ಅಕ್ರಮ ಬೆಟ್ಟಿಂಗ್ ನಿರ್ವಾಹಕರು 30 ದಿನಗಳ ಒಳಗೆ ಮೇಲ್ಮನವಿಯನ್ನು ಮೇಲ್ಮನವಿ ನ್ಯಾಯಮಂಡಳಿಯ ಮುಂದೆ ಸಲ್ಲಿಸಬಹುದು. ರಾಜ್ಯ ಸರ್ಕಾರ ಇಂತಹ ಅಪರಾಧಗಳ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಲು ಕೂಡಾ ಈ ಮಸೂದೆ ಅವಕಾಶ ನೀಡಲಿದೆ.

2021ರಲ್ಲಿ ಅಂದಿನ ಬಿಜೆಪಿ ಸರ್ಕಾರ ಆನ್‌ಲೈನ್ ಬೆಟ್ಟಿಂಗ್ ಮತ್ತು ಬಾಜಿ ಕಟ್ಟುವುದನ್ನು ನಿಷೇಧಿಸಿತ್ತು. ಆದರೆ, ಆ ಆದೇಶವನ್ನು 2022ರಲ್ಲಿ ಹೈಕೋರ್ಟ್ ರದ್ದುಪಡಿಸಿತ್ತು. ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ರಿಯೋಡಿ ಜನ್ಯೆರೋದಲ್ಲಿ ನಡೆಯುತ್ತಿರುವ ಬ್ರಿಕ್ ಶೃಂಗಸಭೆಯಲ್ಲಿ ಕರೆ

ಅನಧಿಕೃತ ಎ.ಐ ಬಳಕೆ; ಡೇಟಾ ಸುರಕ್ಷತೆಗೆ ಕರೆ

ರಿಯೋ-ಡಿ-ಜನ್ಯೆರೋ (ರಾಯಿಟರ್ಸ್): ಕೃತಕ ಬುದ್ಧಿಮತ್ತೆಯ (ಎ.ಐ)) ಅನಧಿಕೃತ ಬಳಕೆಯ ವಿರುದ್ಧ ರಕ್ಷಣೆ ಹಾಗೂ ಅತಿಯಾದ ದತ್ತಾಂಶ ಸಂಗ್ರಹ ತಪ್ಪಿಸಿ, ನ್ಯಾಯಯುತವಾದ ಪಾವತಿ ಕಾರ್ಯವಿಧಾನ ಅಳವಡಿಸಿಕೊಳ್ಳಲು 'ಬ್ರಿಕ್ಸ್' ಸದಸ್ಯ ರಾಷ್ಟ್ರಗಳ ನಾಯಕರು ಕರೆ ನೀಡಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾನುವಾರ ಇಲ್ಲಿ ಆರಂಭಗೊಂಡಿರುವ ಎರಡು ದಿನಗಳ ಬ್ರಿಕ್ ಶೃಂಗಸಭೆಯಲ್ಲಿ ಎ.ಐ ಚರ್ಚೆಗೆ ಸಮಯ ನಿಗದಿಪಡಿಸಿದೆ. ಅಭಿವೃದ್ಧಿ ಹೊಂದಿದ ದೇಶಗಳ ಬೃಹತ್ ಟೆಕ್ ಸಂಸ್ಥೆಗಳು ಎ.ಐ ಮಾದರಿಗಳಿಗೆ ತರಬೇತಿ ನೀಡಲು ಬಳಸುವ ವಸ್ತುಗಳಿಗೆ ಹಕ್ಕುಸ್ವಾಮ್ಯ ಶುಲ್ಕ ವಿಧಿಸಲು ವಿರೋಧ ವ್ಯಕ್ತಪಡಿಸುತ್ತಿವೆ. ಈ ಕುರಿತು ಚರ್ಚೆ ನಡೆಸಲು ಸದಸ್ಯರಾಷ್ಟ್ರಗಳು ನಿರ್ಧರಿಸಿವೆ.

ಪ್ರಧಾನಿ ಮೋದಿ ಭಾಗಿ: 17ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸುವ ನಾಲ್ಕು ದಿನಗಳ ಪ್ರವಾಸಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಬ್ರೆಜಿಲ್‌ನ ರಿಯೋ ಡಿ ಜನ್ಯೆರೊಗೆ ಬಂದಿಳಿದರು.

ಶನಿವಾರ ಗೆಲಿಯೊ ವಿಮಾನ ನಿಲ್ದಾಣಕ್ಕೆ ಬಂದಿಳಿದ ಅವರನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.



ಬ್ರೆಜಿಲ್‌ನ ರಿಯೋ ಡಿ ಜನ್ಯೆರೋದಲ್ಲಿ ನಡೆದ 'ಬ್ರಿಕ್ಸ್' ಶೃಂಗಸಭೆಯಲ್ಲಿ (ಎಡದಿಂದ ಬಲಕ್ಕೆ) ರಷ್ಯಾ ವಿದೇಶಾಂಗ ಸಚಿವ ಸೆರ್ಗೆವ್ ಲಾವ್ರೊವ್, ಯುಎಇ ಅಧ್ಯಕ್ಷ ಶೇಕ್ ಮೊಹಮ್ಮದ್ ಬಿನ್ ಜಾಯೇದ್ ಅಲ್-ನಹ್ಯಾನ್, ಇಂಡೊನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ, ದಕ್ಷಿಣ ಆಫ್ರಿಕಾ ಅಧ್ಯಕ್ಷ ಸೈರಿಲ್ ರಾಮಫೋಸಾ, ಬ್ರೆಜಿಲ್ ಅಧ್ಯಕ್ಷ ಲುಯಿಜ್ ಇನಾಸಿಯೊ ಡಿ-ಸಿಲ್ವಾ, ಭಾರತದ ಪ್ರಧಾನಿ ನರೇಂದ್ರ ಮೋದಿ, ಚೀನಾ ಪ್ರಧಾನಿ ಲಿ ಕಿಯಾಂಗ್, ಇಥಿಯೋಪಿಯಾ ಅಬಿಯ್ ಅಹಮ್ಮದ್, ಈಜಿಪ್ಟ್ ಪ್ರಧಾನಿ ಮೊಸ್ತಾಫಾ ಮಡ್‌ಬೌಲಿ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗಾಚಿ ಅವರು ಫೋಟೋಗೆ ಪೋಸ್ ನೀಡಿದರು —ಎಎಫ್‌ಪಿ ಚಿತ್ರ

ಬ್ರಿಕ್ಸ್ ದೊಡ್ಡ ಶಕ್ತಿ: ಮೋದಿ

ಬ್ರಿಕ್ಸ್ ಒಕ್ಕೂಟವು ಆರ್ಥಿಕ ಸಹಕಾರ ಮತ್ತು ಜಾಗತಿಕ ಹಿತಕ್ಕೆ ಪ್ರಬಲ ಶಕ್ತಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಣ್ಣಿಸಿದ್ದಾರೆ. ರಿಯೋ ಡಿ ಜನ್ಯೆರೋದಲ್ಲಿ ಪ್ರಸಕ್ತ ಬ್ರಿಕ್ಸ್ ಶೃಂಗಸಭೆ ಹಮ್ಮಿಕೊಂಡಿದ್ದಕ್ಕಾಗಿ ಅಧ್ಯಕ್ಷ ಲುಲಾ ಅವರಿಗೆ ಆಭಾರಿಯಾಗಿದ್ದೇನೆ. ಲುಲಾ ಅವರ ಆಹ್ವಾನದ ಮೇರೆಗೆ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸುತ್ತಿದ್ದು, ಫಲಪ್ರದ ಮಾತುಕತೆ ನಡೆಯುವ ವಿಶ್ವಾಸವಿದೆ' ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ದೇಗುಲಗಳಲ್ಲಿ ಸಂಸ್ಕೃತಿಗೆ ತಕ್ಕ ಉಡುಪು ಧರಿಸಿ'

ಜಬಲ್ಪುರ (ಪಿಟಿಐ): 'ಮಧ್ಯಪ್ರದೇಶದ ಜಬಲ್ಪುರದಲ್ಲಿನ 40 ದೇಗುಲಗಳಲ್ಲಿ ಭಕ್ತರು ನಮ್ಮ ಸಂಸ್ಕೃತಿಗೆ ತಕ್ಕ ಉಡುಪುಗಳನ್ನು ಧರಿಸಬೇಕು' ಎಂಬ ಪೋಸ್ಟರ್‌ಗಳನ್ನು ಹಾಕಲಾಗಿದೆ.

'ದೇವಾಲಯಗಳಿಗೆ ಭೇಟಿ ನೀಡುವಾಗ ಜೀನ್ಸ್ ಪ್ಯಾಂಟ್, ಟಾಪ್ಸ್, ಮಿನಿ ಸ್ಕರ್ಟ್, ನೈಟ್ ಸ್ಕರ್ಟ್ ಮತ್ತು ಶಾರ್ಟ್ಸ್ ಧರಿಸುವಂತಿಲ್ಲ. ಮಹಿಳೆಯರು ಮತ್ತು ಯುವತಿಯರು ತಲೆಯನ್ನು ಮುಚ್ಚಿಕೊಳ್ಳಬೇಕು. ಆ ಮೂಲಕ ಭಾರತೀಯ ಸಂಸ್ಕೃತಿಯನ್ನು ಉಳಿಸುವುದು ನಮ್ಮ ಕೈಯಲ್ಲಿದೆ' ಎಂದು ಪೋಸ್ಟರ್‌ಗಳನ್ನು ಹಾಕಿರುವ ಮಹಾಕಾಳ ಸಂಘ ಅಂತರರಾಷ್ಟ್ರೀಯ ಬಜರಂಗ ದಳದ ವಕ್ತಾರರು ತಿಳಿಸಿದ್ದಾರೆ.

ಜೆಎನ್‌ಯು: ಪಿಎಚ್.ಡಿ ಪ್ರವೇಶಾತಿ

ನವದೆಹಲಿ (ಪಿಟಿಐ): '2025-26ನೇ ಸಾಲಿನಲ್ಲಿ ಎರಡನೇ ಆವೃತ್ತಿಯ ಪಿಎಚ್.ಡಿ ಪ್ರವೇಶಾತಿ ಪ್ರಕ್ರಿಯೆಯನ್ನು ಡಿಸೆಂಬರ್‌ನಲ್ಲಿ ನಡೆಸಲು ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯವು ಪ್ರಕಟಿಸಿದೆ. 'ಈ ಪ್ರಕ್ರಿಯೆಯನ್ನು ಯುಜಿಸಿ, ಸಿಎಸ್‌ಐಆರ್, ಜೆಆರ್‌ಎಫ್, ಎನ್‌ಇಟಿ, ಡಿಬಿಟಿ-ಜೆಆರ್‌ಎಫ್, ಐಸಿಎಂಆರ್-ಜೆಆರ್‌ಎಫ್ ಮೂಲಕ ನಡೆಸಲಾಗುವುದು' ಎಂದು ತಿಳಿಸಿದೆ.



ಈ ಚಿತ್ರದಲ್ಲಿ ಪಾತ್ರ ಸಂಪೂರ್ಣವಾಗಿ ಭಿನ್ನವಾಗಿದೆ. 'ಮ್ಯಾಕ್ಸ್' ನಾಯಕನ ಪಾತ್ರದಂತೆ ಇಲ್ಲ. ಇದರಲ್ಲಿ ಸ್ವಲ್ಪ ಮುತ್ತತ್ತಿ ಸತ್ಯರಾಜ್‌ನ ಛಾಯೆ ಕಾಣಿಸಬಹುದು. ಇದೊಂದು ವಿಭಿನ್ನ ಸಿನಿಮಾ.
ಸುದೀಪ್, ನಟ

ಮ್ಯಾಕ್ಸ್ ನಿರ್ದೇಶಕನ ಜತೆ ಸುದೀಪ್ ಹೊಸ ಚಿತ್ರ

ಕಿಚ್ಚ ಸುದೀಪ್ ಸುದೀಪ್ ನಟನೆಯ 'ಮ್ಯಾಕ್ಸ್' ಚಿತ್ರ ಹಿಟ್ ಆಗಿತ್ತು. ಇದೀಗ ಅದೇ ತಂಡದೊಂದಿಗೆ ಸುದೀಪ್ ಮತ್ತೊಂದು ಚಿತ್ರ ಘೋಷಿಸಿದ್ದಾರೆ. ಇದು ಅವರ 47ನೇ ಚಿತ್ರವಾಗಿದ್ದು, ಈ ವರ್ಷವೇ ಚಿತ್ರೀಕರಣ ಮುಗಿಸಿ ಚಿತ್ರವನ್ನು ತೆರೆಗೆ ತರುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ. ಈ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಅನೂಪ್ ಭಂಡಾರಿ ಜತೆ 'ಬಿಲ್ಲ ರಂಗ ಬಾಷಾ' ತಮ್ಮ ಮುಂದಿನ ಚಿತ್ರವೆಂದು ಸುದೀಪ್ ಈ ಹಿಂದೆ ಹೇಳಿದ್ದರು. ಚಿತ್ರ ಈಗಾಗಲೇ ಸೆಟ್ಟೇರಿದೆ ಕೂಡ. ಅದರ ನಡುವೆಯೇ ಸುದೀಪ್ 'ಮ್ಯಾಕ್ಸ್' ನಿರ್ದೇಶಕ ವಿಜಯ್ ಕಾರ್ತಿಕೇಯ ಜತೆ ಕೈ ಜೋಡಿಸಿದ್ದಾರೆ. ಈ ಜೋಡಿ ಮ್ಯಾಕ್ಸ್–2ಗಾಗಿ ಒಂದಾಗಲಿದ್ದಾರೆ ಎಂಬ ಸುದ್ದಿ ಇತ್ತು. ಆದರೆ ಇದೀಗ ಆ ಯೋಜನೆ ಪಕ್ಕಕ್ಕಿಟ್ಟು ಹೊಸ ಸಿನಿಮಾ ಘೋಷಣೆ ಮಾಡಿದ್ದಾರೆ.

'ಈ ತಿಂಗಳಿನಿಂದಲೇ ಸಿನಿಮಾ ಚಿತ್ರೀಕರಣಕ್ಕೆ ಎಲ್ಲ ಸಿದ್ಧತೆ ನಡೆದಿದೆ. ತಮಿಳಿನ ಸತ್ಯಜ್ಯೋತಿ ಫಿಲ್ಮ್ಸ್ ನಿರ್ಮಾಣ ಮಾಡುತ್ತಿದೆ. ಈ ಹಿಂದೆ ವಿಷ್ಣುವರ್ಧನ್ ಜತೆ 'ಸತ್ಯಜ್ಯೋತಿ' ಚಿತ್ರ ನಿರ್ಮಾಣ ಮಾಡಿದ್ದ ಸಂಸ್ಥೆ 39 ವರ್ಷಗಳ ನಂತರ ಮತ್ತೆ ಕನ್ನಡ ಚಿತ್ರನಿರ್ಮಾಣಕ್ಕೆ ಕೈಹಾಕಿದೆ. ಆ್ಯಕ್ಷನ್, ಮಾಸ್ ಕಥೆ ಹೊಂದಿರುವ ಚಿತ್ರ. ಹಂತಹಂತವಾಗಿ ಉಳಿದ ಮಾಹಿತಿ ನೀಡುತ್ತೇವೆ' ಎಂದರು ನಿರ್ದೇಶಕರು.

'ಮ್ಯಾಕ್ಸ್ ನಂತರ ನಾವು ಮತ್ತೆ ಒಂದಾಗಿದ್ದೇವೆ. 'ಮ್ಯಾಕ್ಸ್–2' ಚಿತ್ರಕ್ಕೆ ಪ್ರಯತ್ನ ನಡೆದಿತ್ತು. ಯಶಸ್ಸು ಬಂದಾಗ, ಅದೇ ಶೀರ್ಷಿಕೆ ಮುಂದುವರಿಕೆ ಕಮರ್ಷಿಯಲ್ ಮತ್ತು ಇತರ ದೃಷ್ಟಿಕೋನಗಳಿಂದ ಸಹಕಾರಿ. ಆ ನಿಟ್ಟಿನಲ್ಲಿ ಕಥೆಗೆ ಕುಳಿತಿದ್ದು ನಿಜ. ಆದರೆ ಕಥೆ ವಿಸ್ತರಣೆಯಾದಂತೆ ನಾವು ಬಲವಂತವಾಗಿ ಇಲ್ಲಿ 'ಮ್ಯಾಕ್ಸ್' ಎಂದು ಹೇಳಲು ಯತ್ನಿಸುತ್ತಿದ್ದೇವೆ ಅನ್ನಿಸಿತು. ಹಾಗಾಗಿ ಅದನ್ನು ಕೈಬಿಟ್ಟೆವು. 'ಬಿಲ್ಲ ರಂಗ ಬಾಷಾ' ಸಿನಿಮಾ ಈ ವರ್ಷ ಬಿಡುಗಡೆಯಾಗುವುದಿಲ್ಲ. ಇದು ಬೃಹತ್ ಬಜೆಟ್ ಸಿನಿಮಾ. ಮೊದಲೇ ಹೇಳಿದಂತೆ ಪೂರ್ಣಗೊಳ್ಳಲು ಒಂದೂವರೆ ವರ್ಷ ಬೇಕು. ಆದರೆ 47ನೇ ನನ್ನ ಸಿನಿಮಾವನ್ನು ಇದೇ ವರ್ಷ ಡಿಸೆಂಬರ್ 25ಕ್ಕೆ ರಿಲೀಸ್ ಮಾಡುತ್ತೇವೆ. ಸೆಪ್ಟೆಂಬರ್ ಕೊನೆಯಲ್ಲಿ ಬಿಗ್ ಬಾಸ್ ಕೂಡ ಶುರು ಆಗಲಿದೆ. ಎಲ್ಲವನ್ನೂ ಒಟ್ಟಿಗೆ ನಿಭಾಯಿಸಬೇಕಿದೆ' ಎಂದು ಕಿಚ್ಚ ಸುದೀಪ್ ಹೇಳಿದರು.



ಪ್ರಥಮ್



ಇದು 'ಫಸ್ಟ್ ನೈಟ್ ವಿತ್ ದೆವ್ವ'ದ ಹಾಡು

ಪ್ರಥಮ್ ಅಭಿನಯದ 'ಫಸ್ಟ್ ನೈಟ್ ವಿತ್ ದೆವ್ವ' ಚಿತ್ರದ 'ತುಂಟ ಮನದ ಮಾಯೆ ನೀನು' ಎಂಬ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪಿ.ವಿ.ಆರ್ ಸ್ವಾಮಿ ಗೂಗಾರೆದೊಡ್ಡಿ ನಿರ್ದೇಶನದ ಚಿತ್ರವಿದು. ಅದ್ವಿಕ್ ವರ್ಮ ಸಂಗೀತ ನಿರ್ದೇಶನದ ಈ ಹಾಡಿಗೆ ರಿಚ್ಚಿ ಧ್ವನಿಯಾಗಿದ್ದಾರೆ. 'ಮನರಂಜನೆ ಜತೆಗೆ ಹಾರರ್ ಕಥಾಹಂದರ ಹೊಂದಿರುವ ಚಿತ್ರವಿದು. ಸೆನ್ಸಾರ್ ಆಗಿದ್ದು, ನಮ್ಮ ಚಿತ್ರ ಕೆಲವೇ ದಿನಗಳಲ್ಲಿ ತೆರೆಗೆ ಬರಲಿದೆ. ನಾನೇ ಈ ಚಿತ್ರಕ್ಕೆ ಕಥೆ ಹಾಗೂ ಚಿತ್ರಕಥೆ ಬರೆದಿದ್ದೇನೆ' ಎಂದರು ಪ್ರಥಮ್. ನಿಖಿತಾ ಸ್ವಾಮಿ ನಾಯಕಿ. ಸುಶ್ಮಿತಾ, ಹರೀಶ್ ರಾಜ್, ಶ್ರೀನಿವಾಸಮೂರ್ತಿ, ರಮೇಶ್ ಭಟ್ ಮುಂತಾದವರು ತಾರಾಬಳಗದಲ್ಲಿದ್ದಾರೆ. 'ನಾನು ಛಾಯಾಚಿತ್ರಗ್ರಾಹಕನಾಗಿ ಬಹಳ ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿದ್ದೇನೆ. ಈ ಚಿತ್ರಕ್ಕೂ ನಾನೇ ಛಾಯಾಚಿತ್ರಗ್ರಹಣದ ಜತೆಗೆ ನಿರ್ದೇಶನವನ್ನೂ ಮಾಡಿದ್ದೇನೆ. ನನ್ನ ನಿರ್ದೇಶನದ ಐದನೇ ಚಿತ್ರ' ಎಂದು ನಿರ್ದೇಶಕ ಪಿ.ವಿ.ಆರ್ ಸ್ವಾಮಿ ಹೇಳಿದರು.

ಜು.25ಕ್ಕೆ 'ಸ್ವಪ್ನಮಂಟಪ'

ವಿಜಯರಾಘವೇಂದ್ರ ಮತ್ತು ರಂಜನಿ ರಾಘವನ್ ಮುಖ್ಯಭೂಮಿಕೆಯಲ್ಲಿರುವ 'ಸ್ವಪ್ನಮಂಟಪ' ಜುಲೈ 25ಕ್ಕೆ ತೆರೆಗೆ ಬರಲಿದೆ. ಬರಗೂರು ರಾಮಚಂದ್ರಪ್ಪ ನಿರ್ದೇಶನದ ಈ ಚಿತ್ರ ಈಗಾಗಲೇ ಕೆಲ ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಗೊಂಡು, ಪ್ರದರ್ಶನ ಕಂಡಿದೆ.

'ಸ್ವಪ್ನಮಂಟಪ'ವು ಬರಗೂರರ ಕಾದಂಬರಿಯನ್ನು ಆಧರಿಸಿದೆ. ಪಾರಂಪರಿಕ ಸ್ಥಳಗಳ ಸಂರಕ್ಷಣೆಯನ್ನು ಪ್ರತಿಪಾದಿಸುವ ಕಥೆ ಹೊಂದಿದೆ. ಒಂದು ಹಳ್ಳಿಯಲ್ಲಿ ರಾಜನೊಬ್ಬ ನಿರ್ಮಿಸಿದ 'ಸ್ವಪ್ನಮಂಟಪ'ವನ್ನು ಕೆಲವರು ಕೆಡವಿ ಅನ್ಯ ಕಾರ್ಯಗಳಿಗೆ ಬಳಸಲು ಯತ್ನಿಸಿದಾಗ ಕಥಾ ನಾಯಕ ಮತ್ತು ನಾಯಕಿ ಜನರಲ್ಲಿ ಜಾಗೃತಿ ಮೂಡಿಸಿ ಆ ಪಾರಂಪರಿಕ ಸ್ಥಳವನ್ನು ಉಳಿಸುವ ಕೆಲಸ ಮಾಡುತ್ತಾರೆ. ಅನೇಕ ತಿರುವುಗಳನ್ನು ಒಳಗೊಂಡಿರುವ ಕಥಾವಸ್ತು ಈ ಚಿತ್ರದಲ್ಲಿದೆ' ಎಂದಿದೆ ಚಿತ್ರತಂಡ.

ಮೈಸೂರಿನ ಬಾಬುನಾಯಕ್ ಮಲ್ಲೆ ಮಹಾದೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯಡಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ನಾಯಕ–ನಾಯಕಿ ಇಬ್ಬರೂ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಂದರರಾಜ್, ಶೋಭಾ ರಾಘವೇಂದ್ರ, ರಜನಿ, ಸುಂದರರಾಜ ಅರಸು ಮುಂತಾದವರು ತಾರಾಗಣದಲ್ಲಿದ್ದಾರೆ. ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ, ನಾಗರಾಜ ಆದವಾನಿ ಛಾಯಾಚಿತ್ರಗ್ರಹಣ, ಸುರೇಶ್ ಅರಸು ಸಂಕಲನ ಈ ಚಿತ್ರಕ್ಕಿದೆ.



ವಿಜಯ್ ರಾಘವೇಂದ್ರ, ರಂಜನಿ ರಾಘವನ್



ರಂಗಾಯಣ ರಘು, ಪ್ರಣಮ್ ದೇವರಾಜ್, ಖುಷಿ ರವಿ

ಆ.22ಕ್ಕೆ 'S\O ಮುತ್ತಣ್ಣ'

ಪ್ರಣಮ್ ದೇವರಾಜ್ ನಾಯಕನಾಗಿ ನಟಿಸಿರುವ 'S\O ಮುತ್ತಣ್ಣ' ಆಗಸ್ಟ್ 22ರಂದು ತೆರೆಗೆ ಬರಲಿದೆ. ಈ ಚಿತ್ರಕ್ಕೆ ಶ್ರೀಕಾಂತ್ ಹುಣಸೂರು ನಿರ್ದೇಶನವಿದೆ.

'ಅಪ್ಪ-ಮಗನ ಬಾಂಧವ್ಯದ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ರಂಗಾಯಣ ರಘು ಹಾಗೂ ಪ್ರಣಮ್ ದೇವರಾಜ್ ತಂದೆ-ಮಗನಾಗಿ ಕಾಣಿಸಿಕೊಂಡಿದ್ದಾರೆ. ಮನಸಿಗೆ ಹತ್ತಿರವಾಗುವ ಕೌಟುಂಬಿಕ ಕಥಾ ಹಂದರ ಹೊಂದಿರುವ ಚಿತ್ರವಿದು. 'ಕಮಂಗಿ ನನ್ನ ಮಗನೆ' ಹಾಡು ಈಗಾಗಲೇ ಜನಮನ ಗೆದ್ದಿದೆ. ಟೀಸರ್ ಕೂಡ ಮೆಚ್ಚುಗೆ ಪಡೆದಿದೆ. ಆಗಸ್ಟ್ ಮೊದಲ ವಾರದಲ್ಲಿ ಚಿತ್ರವನ್ನು ಅಮೆರಿಕ ಹಾಗೂ ದುಬೈನಲ್ಲಿ ಬಿಡುಗಡೆ ಮಾಡುವ ಸಿದ್ಧತೆ ನಡೆಸಿದ್ದೇವೆ' ಎಂದು ನಿರ್ದೇಶಕರು ತಿಳಿಸಿದ್ದಾರೆ.

ಪುರಾತನ ಫಿಲ್ಮ್ಸ್ ಬಂಡವಾಳ ಹೂಡಿದೆ. 'ದಿಯಾ' ಖ್ಯಾತಿಯ ಖುಷಿ ರವಿ ನಾಯಕಿ. ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಚಿನ್ ಬಸ್ರೂರು ಸಂಗೀತವಿರುವ ಹಾಡುಗಳನ್ನು ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ, ಪ್ರಮೋದ್ ಮರವಂತೆ ಬರೆದಿದ್ದಾರೆ. ಸ್ಕೇಟಿಂಗ್ ಕೃಷ್ಣ ಛಾಯಾಚಿತ್ರಗ್ರಹಣ ಹಾಗೂ ಹರೀಶ್ ಕೊಮ್ಮೆ ಸಂಕಲನವಿದೆ.

ರಾಯಿಟರ್ಸ್ 'ಎಕ್ಸ್' ಖಾತೆ ಸ್ಥಗಿತ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಸುದ್ದಿಸಂಸ್ಥೆ ರಾಯಿಟರ್ಸ್‌ನ 'ಎಕ್ಸ್' ಖಾತೆಯನ್ನು ಭಾರತದಲ್ಲಿ ತಡೆಹಿಡಿಯಲಾಗಿದೆ.

'ಆಪರೇಷನ್ ಸಿಂಧೂರ ಸಮಯದಲ್ಲಿ ಸಾಮಾಜಿಕ ಜಾಲತಾಣದಲ್ಲಿನ ಹಲವಾರು ಖಾತೆಗಳ ಜೊತೆಗೆ ರಾಯಿಟರ್ಸ್‌ನ ಎಕ್ಸ್ ಖಾತೆಯನ್ನು ಭಾರತದಲ್ಲಿ ನಿರ್ಬಂಧಿಸುವಂತೆ ಕೇಂದ್ರ ಸರ್ಕಾರವು ಬೇಡಿಕೆ ಸಲ್ಲಿಸಿತ್ತು' ಎಂದು ಮೂಲಗಳು ತಿಳಿಸಿವೆ.

ಈ ಬೇಡಿಕೆಯನ್ನು ಪುರಸ್ಕರಿಸಿದ್ದ 'ಎಕ್ಸ್'ನ ಆಡಳಿತ ಮಂಡಳಿ ಹಲವು ಖಾತೆಗಳನ್ನು ನಿರ್ಬಂಧಿಸಿತ್ತು. ಆದರೆ ರಾಯಿಟರ್ಸ್‌ನ ಖಾತೆಯನ್ನು ಆಗ ಸ್ಥಗಿತಗೊಳಿಸಿರಲಿಲ್ಲ.

ಇಲಾನ್ ಮಸ್ಕ್ ಒಡೆತನದ 'ಎಕ್ಸ್' ಇದೀಗ ಭಾರತದಲ್ಲಿ ರಾಯಿಟರ್ಸ್‌ನ ಸಾಮಾಜಿಕ ಜಾಲತಾಣದ ಖಾತೆಯನ್ನು ಸ್ಥಗಿತಗೊಳಿಸಿದೆ ಎನ್ನಲಾಗಿದೆ. 'ನಿರ್ಬಂಧವನ್ನು ತೆಗೆದುಹಾಕುವಂತೆ ಎಕ್ಸ್ ಅನ್ನು ಕೇಳಿಕೊಳ್ಳಲಾಗಿದೆ' ಎಂದು ಕೇಂದ್ರ ಸರ್ಕಾರದ ವಕ್ತಾರರು ತಿಳಿಸಿದ್ದಾರೆ.

ನಿಶ್ಚಿತಾರ್ಥವೂ ಅಪರಾಧ

ಒಂದನೇಪುಟದಿಂದ...

ಎರಡನ್ನೂ ವಿಧಿಸುವ ಪ್ರಸ್ತಾವ ತಿದ್ದುಪಡಿ ಮಸೂದೆಯಲ್ಲಿದೆ. ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ.

ಇದಕ್ಕೆ ಕಾರಣರಾಗುವ ಪೋಷಕರು ಮತ್ತು ಸಂಸ್ಥೆಯವರಿಗೆ 2 ವರ್ಷ ಸೆರೆಮನೆ ಮತ್ತು ₹1 ಲಕ್ಷ ದಂಡ ವಿಧಿಸುವ ಅವಕಾಶ ಈಗಾಗಲೇ ಜಾರಿಯಲ್ಲಿರುವ 'ಬಾಲ್ಯ ವಿವಾಹ ನಿಷೇಧ ಕಾಯ್ದೆ–2006'ರಲ್ಲಿದೆ. ಈ ಕಾಯ್ದೆಯ ಪ್ರಕಾರ, ವಿವಾಹವಾಗಲು ಹುಡುಗನಿಗೆ ಕನಿಷ್ಠ 21, ಹುಡುಗಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಬಾಲ್ಯ ವಿವಾಹ ಪ್ರಕರಣ ವರದಿಯಾದ ಬಳಿಕ ಈ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲು ಅವಕಾಶವಿದೆ.

ಆದರೆ, ಕೆಲವು ಸಮುದಾಯಗಳಲ್ಲಿ ಚಿಕ್ಕ ವಯಸ್ಸಿನ ಬಾಲಕ ಮತ್ತು ಬಾಲಕಿಯ ನಡುವೆ ವಿವಾಹ ಮಾಡುವ ಉದ್ದೇಶದಿಂದ 'ಒಪ್ಪಂದ' ಮಾಡಿಕೊಳ್ಳುವ ಪದ್ಧತಿ ಜಾರಿಯಲ್ಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಇತ್ತೀಚೆಗೆ ನಡೆಸಿದ ಸಭೆಯಲ್ಲಿ ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಕುರಿತು ಚರ್ಚೆ ನಡೆಸಿದ್ದರು.

ಬಾಲ್ಯ ವಿವಾಹ ನಡೆಯುವ ಹಂತವಷ್ಟೇ ಅಲ್ಲದೆ, ಅದರ ಸಿದ್ಧತೆಯ ಹಂತಗಳನ್ನೂ ತಡೆಯುವ ಗುರಿಯನ್ನು ಈ ಮಸೂದೆ ಹೊಂದಿದೆ. ಅಲ್ಲದೆ, ಚಿಕ್ಕ ಮಕ್ಕಳ ವಿವಾಹ ಸಿದ್ಧತೆ ಅಥವಾ ನಿಶ್ಚಿತಾರ್ಥದಲ್ಲಿ ತೊಡಗಿರುವವರನ್ನೂ ಶಿಕ್ಷೆಗೆ ಒಳಪಡಿಸುವ ಜೊತೆಗೆ, ಅಂತಹ ನಿಶ್ಚಿತಾರ್ಥಗಳನ್ನು ಅನೂರ್ಜಿತವೆಂದು ಘೋಷಿಸಲು ಮತ್ತು ಅಂತಹ ನಿಶ್ಚಿತಾರ್ಥಗಳಿಗೆ ನ್ಯಾಯಾಲಯಗಳು ತಡೆಯಾಜ್ಞೆ ಹೊರಡಿಸುವ ಆದೇಶ ನೀಡುವ ಅಧಿಕಾರವನ್ನು ಈ ಮಸೂದೆ ಕಲ್ಪಿಸಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಗಳು ತಿಳಿಸಿವೆ.

'ನನಗೆ ನೆರವಾಗಿದ್ದು ವ್ಯವಸ್ಥೆ ಅಲ್ಲ, ಜನರ ಒಳ್ಳೆಯತನ'

ದೃಷ್ಟಿ ದೋಷದೊಂದಿಗೆ ಹುಟ್ಟಿ, ನಂತರ ರೆಟಿನೊಪತಿಯಿಂದ (ಕಣ್ಣಿಗೆ ಸಂಬಂಧಿಸಿದ ಒಂದು ಕಾಯಿಲೆ) ತನ್ನ ಸಂಪೂರ್ಣ ದೃಷ್ಟಿಯನ್ನು ಕಳೆದುಕೊಂಡ ಅಂಚಲ್ ಭತೇಜಾ ಸುಪ್ರೀಂ ಕೋರ್ಟ್‌ನಲ್ಲಿ ಕಳೆದ ತಿಂಗಳು ವಾದ ಮಂಡಿಸಿದ್ದು ಒಂದು ಅಪೂರ್ವವಾದ ಗಳಿಗೆಯಾಗಿತ್ತು. ಒಬ್ಬ ಅಂಧ ಮಹಿಳೆಯಾಗಿ ತಾವು ಅನುಭವಿಸಿದ ಕಷ್ಟ, ಮಾಡಿದ ಸಾಧನೆಯ ಬಗ್ಗೆ ಅಂಚಲ್ ಭತೇಜಾ ಅವರು 'ಪ್ರಜಾವಾಣಿ'ಯ ಶಶಿಕಲಾ ಎಂ.ಎಸ್. ಅವರೊಂದಿಗೆ ಹಂಚಿಕೊಂಡ ಮಾಹಿತಿ ಇಲ್ಲಿದೆ

ಪ್ರಜಾವಾಣಿ ಸಂದರ್ಶನ



ಅಂಚಲ್ ಭತೇಜಾ, ಅಂಗವಿಕಲ ಹಕ್ಕುಗಳ ಹೋರಾಟಗಾರ್ತಿ

- **ನೀವು ಇತ್ತೀಚೆಗೆ ಸುಪ್ರೀಂ ಕೋರ್ಟ್‌ನಲ್ಲಿ ಅಂಗವಿಕಲರ ಹಕ್ಕುಗಳ ಬಗ್ಗೆ ವಾದ ಮಂಡಿಸಿದಿರಿ. ವೈಯಕ್ತಿಕವಾಗಿ ಮತ್ತು ವೃತ್ತಿಜೀವನದ ದೃಷ್ಟಿಯಿಂದ, ಅದು ಹೇಗಿತ್ತು?**

ನಾನು ಸಾಂಪ್ರದಾಯಿಕ, ಏಕಪೋಷಕ ಪಂಜಾಬಿ ಕುಟುಂಬದವಳು. ನನ್ನ ಕುಟುಂಬದಲ್ಲಿ ಅಂಗವೈಕಲ್ಯ ಇದ್ದುದು ನನಗೆ ಮಾತ್ರ. ಉನ್ನತ ವಿದ್ಯಾಭ್ಯಾಸಕ್ಕಾಗಿ ನಮ್ಮ ನಗರದಿಂದ ಹೊರಗೆ ಹೋದ ಕುಟುಂಬದ ಮೊದಲಿಗಳೂ ನಾನೇ. ಅದು ವೈಯಕ್ತಿಕವಾಗಿ ನನ್ನೊಬ್ಬಳ ಪ್ರಯಾಣ ಅಲ್ಲ; ಅದು ಹಲವು ಜನರ ನೆರವು, ಪ್ರಯಾಣ, ಪ್ರಯತ್ನಗಳು ಏಕೀಭವಿಸಿದ್ದರ ಫಲ. ಸುಪ್ರೀಂ ಕೋರ್ಟ್‌ನಲ್ಲಿ ಅಷ್ಟೇ ಅಲ್ಲ, ಯಾವುದೇ ನ್ಯಾಯಾಲಯದಲ್ಲೂ ಅದು ನನ್ನ ಮೊದಲ ವಾದ ಮಂಡನೆ.

- **ಬೆಂಗಳೂರಿನ ನ್ಯಾಷನಲ್ ಲಾ ಕಾಲೇಜಿನಲ್ಲಿ ನೀವು ಏಕಾಂಗಿಯಾಗಿ ಹೇಗೆ ನಿಭಾಯಿಸಿದಿರಿ?**

ಅದು ಸುಲಭದ ಕಾರ್ಯವೇನೂ ಆಗಿರಲಿಲ್ಲ. ಅದೊಂದು ಪ್ರತಿಷ್ಠಿತ ಕಾಲೇಜು ಆಗಿದ್ದರೂ, ಅಲ್ಲಿ ಅಂಧ ವಿದ್ಯಾರ್ಥಿಯ ವಿದ್ಯಾಭ್ಯಾಸದ ದೃಷ್ಟಿಯಿಂದ ಏನೇನು ವ್ಯವಸ್ಥೆ ಇರಬೇಕು ಎನ್ನುವುದರ ಪ್ರಮಾಣಿತ ಕಾರ್ಯವಿಧಾನವೇ (ಎಸ್‌ಒಪಿ) ಇರಲಿಲ್ಲ; ಇಂದಿಗೂ ಇಲ್ಲ. ನನ್ನ ನೆರವಿಗೆ ಬಂದದ್ದು, ಜನರ ಒಳ್ಳೆಯತನ–ವ್ಯವಸ್ಥೆ ಅಲ್ಲ.

- **ಅಂಗವಿಕಲರು, ಅದರಲ್ಲೂ ಮಹಿಳಾ ಅಂಗವಿಕಲರು, ಎಂಥ ಸವಾಲುಗಳನ್ನು ಎದುರಿಸುತ್ತಾರೆ?**

ಒಬ್ಬ ಅಂಧ ಮಹಿಳೆಯಾಗಿ ಸಾರ್ವಜನಿಕ ಸ್ಥಳಗಳಲ್ಲಿ ಕಿರುಕುಳ ಅನುಭವಿಸುವುದು ನನಗೆ ಸಾಮಾನ್ಯವಾಗಿಬಿಟ್ಟಿದೆ. ಅದಕ್ಕೆ ಪರಿಹಾರ ಹುಡುಕುವುದು ಕಷ್ಟ. ಕೆಲವೊಮ್ಮೆ ಪರಿಸ್ಥಿತಿ ನಮಗೆ ತಿರುಗುಬಾಣವಾದರೂ ಆಗಬಹುದು. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ (ಪಾಶ್) ಕಾಗದದ ಮೇಲೆ ಚೆನ್ನಾಗಿ ಕಾಣುತ್ತದೆ.

- **ಅಂಗವಿಕಲರ ಹಕ್ಕುಗಳ ಕಾಯ್ದೆ (ಆರ್‌ಪಿಡಬ್ಲ್ಯುಡಿ) ಅತ್ಯಂತ ಪ್ರಗತಿಪರ ಶಾಸನ ಎನ್ನಲಾಗುತ್ತದೆಯಲ್ಲ?**

ನ್ಯಾಯಾಲಯದ ತೀರ್ಪುಗಳು ನ್ಯಾಯಮೂರ್ತಿಗಳ ಪ್ರಗತಿಪರವಾದ ಹೇಳಿಕೆಗಳು ಮತ್ತು ಮಾರ್ಗಸೂಚಿಗಳನ್ನು ಒಳಗೊಂಡಿರುತ್ತವೆ. ಆದರೆ, ಅನುಷ್ಠಾನದಲ್ಲಿ ಅವು ಸೋಲುತ್ತಿವೆ. ಅನುಷ್ಠಾನದ ಪರಂಪರೆಯ ಕೊರತೆಯಿಂದ ನ್ಯಾಯಶಾಸ್ತ್ರವು ವಿಫಲಗೊಳ್ಳುವಂತಾಗಿದೆ. ಜತೆಗೆ, ಕಾಯ್ದೆ ಜಾರಿ ಬಗ್ಗೆ ವಿವಿಧ ಇಲಾಖೆ ಮತ್ತು ರಾಜ್ಯಗಳಲ್ಲಿ ಏಕರೂಪತೆ ಇಲ್ಲ.

- **ಕಾನೂನಿಗೆ ಅಂಗವಿಕಲ–ಸ್ತ್ರೀ ದೃಷ್ಟಿಕೋನದ ಸ್ಪರ್ಶ ನೀಡುವುದು ಹೇಗೆ?**

ಕ್ಯಾಥರೀನ್ ಟಿ. ಬಾರ್ಟ್‌ಲೆಟ್ ಅವರು ತಮ್ಮ ಸ್ತ್ರೀವಾದಿ ಕಾನೂನು ಮಾರ್ಗಗಳ ಬಗೆಗಿನ ಕ್ರಾಂತಿಕಾರಕ ಬರಹದಲ್ಲಿ ಮೂರು ಅಂಶಗಳ ಬಗ್ಗೆ ಪ್ರಸ್ತಾಪಿಸುತ್ತಾರೆ: ಮಹಿಳಾ ಪ್ರಶ್ನೆಯನ್ನು ಕೇಳುವುದು, ಕಾನೂನು ಪ್ರಕರಣಗಳ ವಿಶ್ಲೇಷಣೆಯಲ್ಲಿ ಸ್ತ್ರೀವಾದಿ ದೃಷ್ಟಿಕೋನ ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಮತ್ತು ತಿಳಿವಳಿಕೆ ಹೆಚ್ಚಿಸುವುದು. ಅಂಗವಿಕಲ ಮಹಿಳೆಯರ ವಿಚಾರಕ್ಕೂ ಇದು ಅನ್ವಯಿಸುತ್ತದೆ.

- **ನ್ಯಾಯಾಂಗದಲ್ಲಿ ಅಥವಾ ಸಾರ್ವಜನಿಕ ಜೀವನದಲ್ಲಿ ಅಂಗವಿಕಲ ಮಹಿಳೆ ನೆಲೆ ಕಂಡುಕೊಳ್ಳಬೇಕು ಎಂದರೆ, ಅದಕ್ಕೆ ಏನು ಮಾಡಬೇಕು?**

ಪ್ರತಿಯೊಬ್ಬ ಅಂಗವಿಕಲ ಮಗುವಿನೆಡೆಗಿನ ನಮ್ಮ ವರ್ತನೆ ಬದಲಾಗಬೇಕು. ಅದು ಪೋಷಕರಿಂದಲೇ ಆರಂಭವಾಗಬೇಕು. ಅದು ಸಹಜವಾಗಿಯೇ ಬಂದಿರುವಂಥದ್ದು, ಗುಣಪಡಿಸುವಂಥದ್ದು ಅಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

- **ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಾ, ಹಲವು ರೀತಿಯ ಸವಾಲುಗಳನ್ನು ಎದುರಿಸುತ್ತಿರುವ ಅಂಗವಿಕಲ ಬಾಲಕಿಯರಿಗೆ ನೀವು ಹೇಳುವುದೇನು?**

ಶಿಕ್ಷಣ ಬಹಳ ಮುಖ್ಯವಾದುದು. ಅದರಿಂದ ನಿಮಗೆ ಬೇಕಾದ ಭಾಷೆ ಮತ್ತು ಪ್ರಜ್ಞೆ ದಕ್ಕುವುದರಿಂದ, ಹೋರಾಟ ನಡೆಸಿ. ನೀವು ಅಂಗವಿಕಲ ಮಹಿಳೆಯಾಗಿರುವುದರಿಂದ ನಿಮ್ಮ ಬಾಯಿ ಮುಚ್ಚಿಸಲು ದುಪ್ಪಟ್ಟು ಒತ್ತಡ ಹೇರಲಾಗುತ್ತದೆ. ಮೌನವಾಗಿ ಇರಬೇಡಿ. ನಿಮ್ಮ ಹಕ್ಕುಗಳಿಗಾಗಿ ಗಟ್ಟಿಯಾದ ಧ್ವನಿಯೆತ್ತಿ ಹೋರಾಡಿ. ಇದೊಂದು ಯುದ್ಧ. ಆದರೆ, ಇಲ್ಲಿ ನೀವೇ ಹೋರಾಡಬೇಕು. ಮೊದಲು ಮುತ್ಸದ್ದಿತನದಿಂದ ವರ್ತಿಸಿ. ಆದರೆ, ಅಗತ್ಯ ಬಿದ್ದಾಗ ನಿರ್ಧಾರ ತಳೆಯಲು ಸಿದ್ಧರಾಗಿರಿ.

- **ನೀವೇಕೆ ವಕೀಲ ವೃತ್ತಿ ಆಯ್ಕೆ ಮಾಡಿಕೊಂಡಿರಿ?**

ಶಾಲೆಗಳಲ್ಲಿ ಮೊದಲು ನನಗೆ ಪ್ರವೇಶವನ್ನೇ ನೀಡಲಿಲ್ಲ; ನೀಡಿದ ನಂತರ ನನಗೆ ಅಗತ್ಯವಾದ ಸೌಲಭ್ಯಗಳನ್ನು, ಕಲಿಯುವ ವಾತಾವರಣವನ್ನು ಕಲ್ಪಿಸಲಿಲ್ಲ. ಬೋರ್ಡ್ ಪರೀಕ್ಷೆ ಇನ್ನು ಒಂದೆರಡು ತಿಂಗಳಿದೆ ಎನ್ನುವಾಗ, ನಾನು ನನ್ನ ದೃಷ್ಟಿಯನ್ನು ಸಂಪೂರ್ಣವಾಗಿ ಕಳೆದುಕೊಂಡು, ಲಿಪಿಕಾರನನ್ನು ಅವಲಂಬಿಸಬೇಕಾಯಿತು. ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾದರೂ, ಮುಖ್ಯವಾಹಿನಿಯ ಶಾಲೆಗಳು ನನಗೆ ಪ್ರವೇಶ ನಿರಾಕರಿಸಿದವು; ನಾನು ಕಂಗೆಟ್ಟುಹೋದೆ. ಅಂಗವಿಕಲ ಮಕ್ಕಳ ಶಿಕ್ಷಣದ ಹಕ್ಕಿಗಾಗಿ ಹೋರಾಡಲು ನಾನು ಮುಂದಾದೆ. ಆಸಕ್ತಿಕರ ವಿಚಾರ ಎಂದರೆ, ಅಂಗವಿಕಲರ ಹಕ್ಕುಗಳ ಕಾಯ್ದೆ 2016 ಜಾರಿಯಾಗುವ ಎರಡು ತಿಂಗಳ ಹಿಂದಷ್ಟೇ ನಾನು ಸಂಪೂರ್ಣವಾಗಿ ನನ್ನ ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದೆ. ಕಾನೂನು ಕ್ಷೇತ್ರ ಆಯ್ಕೆ ಮಾಡಿಕೊಳ್ಳಲು ಅದು ಮೊದಲ ಕಾರಣ. ಎರಡನೆಯ ಕಾರಣ, ಸುಮಾರು 300 ಅಂಧರು ಹಳ್ಳಿಗಳ ತಮ್ಮ ಮನೆಗಳಲ್ಲಿ ಮೂಲೆ ಸೇರಿದ್ದಾರೆ ಎಂಬುದು.

'ಜಾತ್ಯತೀತತೆ'ಯ ದುರುಪಯೋಗ ಚರ್ಚೆ ಅಗತ್ಯ: ಅಬ್ಬಾಸ್ ನಖ್ವಿ

ಪ್ರಯಾಗರಾಜ್ (ಪಿಟಿಐ): ಜಾತ್ಯತೀತತೆಯ 'ರಾಜಕೀಯ ದುರುಪಯೋಗ'ದ ಕುರಿತು ರಾಷ್ಟ್ರ ಮಟ್ಟದಲ್ಲಿ ಚರ್ಚೆ ನಡೆಯಬೇಕಾದ ಅಗತ್ಯವಿದೆ ಎಂದು ಕೇಂದ್ರದ ಮಾಜಿ ಸಚಿವ, ಬಿಜೆಪಿ ನಾಯಕ ಮುಖ್ತಾರ್ ಅಬ್ಬಾಸ್ ನಖ್ವಿ ಹೇಳಿದರು.

ಸಂವಿಧಾನದ ಮೂಲ ಪ್ರಸ್ತಾವನೆಯಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಎಂಬ ಪದಗಳು ಇರಲಿಲ್ಲ. ಆದರೂ ಭಾರತ ಯಾವಾಗಲೂ ಜಾತ್ಯತೀತ ಮತ್ತು ಸಮಾಜವಾದಿ ರಾಷ್ಟ್ರವಾಗಿಯೇ ಉಳಿದುಕೊಂಡಿದೆ ಎಂದರು.

ಮೊಹರಂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಭಾನುವಾರ ಪ್ರಯಾಗರಾಜ್‌ನ ತಮ್ಮ ಹುಟ್ಟೂರಿಗೆ ಬಂದಿದ್ದ ಅವರು, 'ಸ್ವಾತಂತ್ರ್ಯದ ನಂತರ ಪಾಕಿಸ್ತಾನವು ಇಸ್ಲಾಮಿಕ್ ಧ್ವಜವನ್ನು ಹಾರಿಸಿತು. ಆದರೆ ಭಾರತ 'ಸರ್ವ ಧರ್ಮ ಸಮಭಾವ'ದ ಮಾರ್ಗವನ್ನು ಆಯ್ಕೆ ಮಾಡಿಕೊಂಡಿತು. ಇದು ನಮ್ಮ ದೇಶದ ಬಹುಸಂಖ್ಯಾತ ಸಮುದಾಯದ ಮೌಲ್ಯಗಳು, ಸಂಸ್ಕೃತಿ ಮತ್ತು ಚಿಂತನೆಗೆ ಪುರಾವೆಯಾಗಿದೆ' ಎಂದು ತಿಳಿಸಿದರು.



ಮುಖ್ತಾರ್ ಅಬ್ಬಾಸ್ ನಖ್ವಿ

'1976ರ ತುರ್ತು ಪರಿಸ್ಥಿತಿಯ ಸಮಯದಲ್ಲಿ, ಜಾತ್ಯತೀತತೆ ಮತ್ತು ಸಮಾಜವಾದ ಪದಗಳನ್ನು ಸೇರಿಸುವ ಮೂಲಕ ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ಉಂಟುಮಾಡಲಾಯಿತು. ಇದರ ಹಿಂದೆ ರಾಜಕೀಯ ಸ್ವಾರ್ಥವಿತ್ತು' ಎಂದು ಆರೋಪಿಸಿದರು.

'ಜಾತ್ಯತೀತತೆಯನ್ನು ರಾಜಕೀಯವಾಗಿ ದುರುಪಯೋಗಪಡಿಸಲಾಗಿದ್ದು, ಈ ಬಗ್ಗೆ ಚರ್ಚೆ ನಡೆಯಬೇಕು' ಎಂದರು.

ಭಯೋತ್ಪಾದನೆಗೆ ಬೆಂಬಲ ನೀಡುತ್ತಿರುವುದಕ್ಕೆ ಪಾಕಿಸ್ತಾನದ ವಿರುದ್ಧ ಹರಿಹಾಯ್ದ ಅವರು, ತಾನು ಪೋಷಿಸುತ್ತಿರುವ ಭಯೋತ್ಪಾದಕರು ಇಸ್ಲಾಮ್‌ನ ತತ್ವಗಳಿಗೆ ಮತ್ತು ತನ್ನದೇ ದೇಶಕ್ಕೆ ದುರಂತವಾಗಿ ಪರಿಗಣಿಸಿದೆ ಎಂಬುದು ಪಾಕಿಸ್ತಾನಕ್ಕೆ ಮನವರಿಕೆಯಾಗಿದೆ ಎಂದು ಹೇಳಿದರು.

ಗೆಲುವಿನ ದೀಪ ಬೆಳಗಿಸಿದ ಆಕಾಶ್

ಶುಭಮನ್ ಗಿಲ್‌ಗೆ ನಾಯಕನಾದ ನಂತರ ಮೊದಲ ಜಯದ ರುಚಿ

• ಸಿಡ್ನಿ ಕಿರಣ್

ಬರ್ಮಿಂಗ್‌ಹ್ಯಾಮ್: ಎಜ್‌ಬಾಸ್ಟನ್‌ನಲ್ಲಿ ಟೆಸ್ಟ್ ಗೆಲುವು ಸಾಧಿಸುವ ಭಾರತದ ಆರು ದಶಕಗಳ ಕನಸು ಭಾನುವಾರ ನನಸಾಯಿತು. ಸಪಾಟಾದ ಪಿಚ್ ಮೇಲೆ ಛಲ ಮತ್ತು ಬಲದ ಪ್ರದರ್ಶನ ನೀಡಿದ ಬೌಲರ್‌ಗಳು ಅತಿಥೇಯ ಇಂಗ್ಲೆಂಡ್ ಬಳಗಕ್ಕೆ ಸೋಲಿನ ಕಹಿಯುಣಿಸಿದರು. ಐದು ಪಂದ್ಯಗಳ ಸರಣಿಯಲ್ಲಿ 1-1ರ ಸಮಬಲ ಸಾಧಿಸಿದರು.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳ ಸಮ್ಮುಖದಲ್ಲಿ ಆಕಾಶ್ ದೀಪ್ (21.1–2–99–6) ಅಮೋಘ ಬೌಲಿಂಗ್ ರಂಗೇರಿತು. ಭಾರತ ತಂಡವು 1967ರಲ್ಲಿ ಮೊದಲ ಬಾರಿಗೆ ಇಲ್ಲಿ ಟೆಸ್ಟ್ ಪಂದ್ಯ ಆಡಿತ್ತು. ಇಲ್ಲಿ ಒಟ್ಟು ಏಳು ಪಂದ್ಯ ಸೋತಿದ್ದು, ಒಂದರಲ್ಲಿ ಡ್ರಾ ಮಾಡಿಕೊಂಡಿತ್ತು. ಆದರೆ ಗೆಲುವಿನ ರುಚಿ ಸವಿದಿದ್ದು ಈಗಲೇ. ಈ ಪಂದ್ಯದ ನಾಲ್ಕು ದಿನಗಳ ಆಟದಲ್ಲಿಯೂ ಶುಭಮನ್ ಗಿಲ್ ಬಳಗವು ಮೇಲುಗೈ ಸಾಧಿಸಿತ್ತು. ಅಂತಿಮ ದಿನವಾದ ಭಾನುವಾರ ಉಭಯ ತಂಡಗಳಿಗೂ ಮಹತ್ವದ್ದಾಗಿತ್ತು. ಶನಿವಾರ ರಾತ್ರಿ ಮತ್ತು ಇಂದು ಬೆಳಿಗ್ಗೆ ಸುರಿದ ಮಳೆಯಿಂದಾಗಿ ಆಟಕ್ಕೆ ವ್ಯತ್ಯಯವಾಗುವ ಆತಂಕವಿತ್ತು. ಮಧ್ಯಾಹ್ನದ ಹೊತ್ತಿಗೆ ಆಗಸದಲ್ಲಿ ಸೂರ್ಯ ಬೆಳಗಿದ. ಕ್ರೀಡಾಂಗಣದಲ್ಲಿ ಆಕಾಶ್ ದೀಪ್ ಪ್ರಜ್ವಲಿಸಿದರು. 336 ರನ್‌ಗಳ ಬೃಹತ್ ಜಯ ಒಲಿಯಿತು.


ಶುಭಮನ್ ಗಿಲ್ ಸಂಭ್ರಮ

28 ವರ್ಷದ ಆಕಾಶ್ ಅವರನ್ನು ಜಸ್‌ಪ್ರೀತ್ ಬೂಮ್ರಾ ಅವರ ಬದಲಿಗೆ ಕಣಕ್ಕಿಳಿಸಲಾಗಿತ್ತು. ಬೂಮ್ರಾ ಅವರು ಈ ಪಂದ್ಯದಲ್ಲಿ ವಿಶ್ರಾಂತಿ ಪಡೆದಿದ್ದರು. ಆಕಾಶ್ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡ ಬಗೆ ಅಮೋಘ. ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ಮತ್ತು ಎರಡನೇಯದ್ದರಲ್ಲಿ ಆರು ವಿಕೆಟ್ ಕಿತ್ತು ತಮ್ಮ ಬುಟ್ಟಿಗೆ ಹಾಕಿಕೊಂಡರು. ಉಳಿದ ಬೌಲರ್‌ಗಳು ಪರಿಣಾಮಕಾರಿ ದಾಳಿ ನಡೆಸುತ್ತ, ಒಂದಿಷ್ಟು ಬೌಂಡರಿ, ಸಿಕ್ಸರ್ ಚಚ್ಚಿಸಿಕೊಳ್ಳುತ್ತ ಉಳಿದ ವಿಕೆಟ್‌ಗಳನ್ನು ಉರುಳಿಸಿದರು. 608 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ್ದ ಆತಿಥೇಯರ ಆಟ 271 ರನ್‌ಗಳಿಗೆ ಅಂತ್ಯವಾಯಿತು.

ನಾಲ್ಕನೇ ದಿನ ಸಂಜೆಯೇ ಗಿಲ್ ಪಡೆಯು ಎರಡನೇ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು. 'ಬಾಝ್‌ಬಾಲ್' ಶೈಲಿ ಖ್ಯಾತಿಯ ಇಂಗ್ಲೆಂಡ್ ದಿನದಾಟದ ಮುಕ್ತಾಯಕ್ಕೆ 72 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತ್ತು. ಹೀಗಾಗಿ ಕೊನೆಯ ದಿನದಾಟದಲ್ಲಿ ಜಯಿಸಲು 90 ಓವರ್‌ಗಳಲ್ಲಿ 536 ರನ್‌ಗಳ ಅಗತ್ಯವಿತ್ತು.

ಆಕಾಶ್ ಅಕ್ಷರಶಃ ಬೆಂಕಿಯ ಚೆಂಡುಗಳನ್ನು ಉರುಳಿಸಿದರು. ಸ್ವಿಂಗ್ ಎಸೆತಗಳ ವೈಭವ ಮೆರೆದರು. ಮೊಹಮ್ಮದ್ ಶಮಿ ಶೈಲಿಯ ಬೌಲಿಂಗ್ ಅನ್ನು ನೆನಪಿಸಿದರು. ಸಪಾಟಾದ ಪಿಚ್‌ನಲ್ಲಿ ಅತಿಥೇಯ ಬ್ಯಾಟರ್‌ಗಳು ಈ ಎಸೆತಗಳಿಗೆ ಒಂದಿಷ್ಟು ವಿಚಲಿತರಾದರು. ಇದರ ನಡುವೆಯ ಜೆಮಿ ಸ್ಮಿತ್ 88 ರನ್ ಗಳಿಸಿದರು. ಕೊನೆಯ ಹಂತದಲ್ಲಿ ಬ್ರೈಡನ್ ಕಾರ್ಸ್ ಮತ್ತು ಶೋಯಬ್ ಬಶೀರ್ ಅವರೂ ಸೋಲನ್ನು ಒಂದಿಷ್ಟು ಹೊತ್ತು ಮುಂದೂಡಿದರು. ಬೀಸಾಟವಾಡಿದ ಇಬ್ಬರೂ ಬೌಲರ್‌ಗಳಿಗೆ ಬಿಸಿ ಮುಟ್ಟಿಸುವ ಪ್ರಯತ್ನ ಮಾಡಿದರು. ಈ ಹಂತದಲ್ಲಿ ಫೀಲ್ಡರ್‌ಗಳೂ ಒಂದೆರಡು ಕ್ಯಾಚ್‌ಗಳನ್ನು ಕೈಚೆಲ್ಲಿದರು.

ಕೊನೆಗೂ ಆಕಾಶ್ ದೀಪ್ ಅವರ ಆರನೇ ವಿಕೆಟ್ ರೂಪದಲ್ಲಿ ಬ್ರೈಡನ್ ಔಟಾದರು. ಆಕಾಶ್ ಎಸೆತವನ್ನು ಆಡಿದ ಕಾರ್ಸ್ ಅವರು ಫೀಲ್ಡರ್ ಗಿಲ್‌ಗೆ ಕ್ಯಾಚಿತ್ತರು. ನಾಯಕತ್ವ ವಹಿಸಿಕೊಂಡ ನಂತರ ಆಡಿದ ಎರಡನೇ ಟೆಸ್ಟ್ ಮತ್ತು ಮೊದಲ ಗೆಲುವಿನ ಖುಷಿಯಲ್ಲಿ ಶುಭಮನ್ ಕುಣಿದಾಡಿದರು. ಅವರೊಂದಿಗೆ ಸಹ ಆಟಗಾರರೂ ಸೇರಿಕೊಂಡರು.


ಭಾರತ ತಂಡದ ಆಟಗಾರರ ಸಂಭ್ರಮ ಎಪಿ ಚಿತ್ರ

ವಿದೇಶದಲ್ಲಿ ದೊಡ್ಡ ಅಂತರದ ಜಯ (ರನ್‌ಗಳು)

ಅಂತರ	ಎದುರಾಳಿ	ಸ್ಥಳ	ವರ್ಷ
336	ಇಂಗ್ಲೆಂಡ್	ಬರ್ಮಿಂಗ್‌ಹ್ಯಾಮ್	2025
318	ವೆಸ್ಟ್‌ಇಂಡೀಸ್	ನಾರ್ತ್‌ಸೌಂಡ್	2016
304	ಶ್ರೀಲಂಕಾ	ಗಾಲೆ	2017

ಟೆಸ್ಟ್ ಪಂದ್ಯದಲ್ಲಿ ಭಾರತ ಗಳಿಸಿದ ಅತ್ಯಧಿಕ ಮೊತ್ತ

ಒಟ್ಟು ಮೊತ್ತ	ಎದುರಾಳಿ	ಸ್ಥಳ	ವರ್ಷ
1014	ಇಂಗ್ಲೆಂಡ್	ಬರ್ಮಿಂಗ್‌ಹ್ಯಾಮ್	2025
916	ಆಸ್ಟ್ರೇಲಿಯಾ	ಸಿಡ್ನಿ	2004
910	ಪಾಕಿಸ್ತಾನ	ಬೆಂಗಳೂರು	2007
875	ಇಂಗ್ಲೆಂಡ್	ರಾಜ್‌ಕೋಟ್	2024

ಸ್ಕೋರ್ ಕಾರ್ಡ್


ಮೊದಲ ಇನಿಂಗ್ಸ್:
ಭಾರತ: 587 (151 ಓವರ್)
ಇಂಗ್ಲೆಂಡ್: 407 (89.3 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್:
ಭಾರತ 6ಕ್ಕೆ 427 ಡಿ (83 ಓವರ್‌ಗಳಲ್ಲಿ)
ಇಂಗ್ಲೆಂಡ್: 271 (68.1 ಓವರ್‌ಗಳಲ್ಲಿ) (ಶನಿವಾರ 3 ವಿಕೆಟ್‌ಗೆ 72)
ಓಲಿ ಪೋಪ್ ಬಿ ಆಕಾಶ್‌ದೀಪ್ 24 (50ಎ, 4x3)
ಬ್ರೂಕ್ ಎಲ್‌ಬಿ ಆಕಾಶ್‌ದೀಪ್ 23 (31ಎ, 4x3)
ಸ್ಟೋಕ್ಸ್ ಎಲ್‌ಬಿ ವಾಷಿಂಗ್ಟನ್ 33 (73ಎ, 6x4)
ಸ್ಮಿತ್ ಸಿ ವಾಷಿಂಗ್ಟನ್ ಬಿ ಆಕಾಶ್‌ದೀಪ್ 88 (99ಎ, 9x4, 4x6)
ವೋಕ್ಸ್ ಸಿ ಸಿರಾಜ್ ಬಿ ಪ್ರಸಿದ್ಧ 7 (32ಎ, 1x4)
ಕಾರ್ಸ್ ಸಿ ಗಿಲ್ ಬಿ ಆಕಾಶ್‌ದೀಪ್ 38 (48ಎ, 5x4, 1x6)
ಟಂಗ್ ಸಿ ಸಿರಾಜ್ ಬಿ ಜಡೇಜ 2 (29ಎ)
ಬಶೀರ್ ಔಟಾಗದೇ 12 (12ಎ, 1x4, 1x6)
ಇತರೆ: 13 (ಬೈ 4, ಲೆಗ್‌ಬೈ 4, ನೋಬಾಲ್ 3, ವೈಡ್ 2)
ವಿಕೆಟ್ ಪತನ: 4–80 (ಓಲಿ ಪೋಪ್, 19.1), 5–83 (ಹ್ಯಾರಿ ಬ್ರೂಕ್, 21.3), 6–153 (ಬೆನ್ ಸ್ಟೋಕ್ಸ್, 40.3), 7–199 (ಕ್ರಿಸ್ ವೋಕ್ಸ್, 52.1), 8–226 (ಜೇಮಿ ಸ್ಮಿತ್, 55.4), 9–246 (ಜೋಶ್ ಟಂಗ್, 63.5), 10–271 (ಬ್ರೈಡನ್ ಕಾರ್ಸ್, 68.1)
ಬೌಲಿಂಗ್: ಆಕಾಶ್‌ದೀಪ್ 21.1–2–99–6, ಮೊಹಮ್ಮದ್ ಸಿರಾಜ್ 12–3–57–1, ಪ್ರಸಿದ್ಧ ಕೃಷ್ಣ 14–2–40–1, ರವೀಂದ್ರ ಜಡೇಜ 15–4–40–1, ವಾಷಿಂಗ್ಟನ್ ಸುಂದರ್ 6–2–28–1
ಪಂದ್ಯದ ಆಟಗಾರ: ಶುಭಮನ್ ಗಿಲ್

ಫಲಿತಾಂಶ: ಭಾರತಕ್ಕೆ 336 ರನ್‌ಗಳ ಗೆಲುವು, ಸರಣಿ 1–1 ಸಮಬಲ

ಇಂಗ್ಲೆಂಡ್‌ನಲ್ಲಿ ಭಾರತೀಯ ಬೌಲರ್ ಶ್ರೇಷ್ಠ ಸಾಧನೆ (ಒಟ್ಟು)

ವಿಕೆಟ್	ಬೌಲರ್	ಸ್ಥಳ	ವರ್ಷ
187ಕ್ಕೆ10	ಆಕಾಶ್‌ದೀಪ್	ಬರ್ಮಿಂಗ್‌ಹ್ಯಾಮ್	2025
188ಕ್ಕೆ10	ಚೇತನ್ ಶರ್ಮಾ	ಬರ್ಮಿಂಗ್‌ಹ್ಯಾಮ್	1986
110ಕ್ಕೆ9	ಜಸ್‌ಪ್ರೀತ್ ಬೂಮ್ರಾ	ಟ್ರೆಂಟ್‌ಬ್ರಿಜ್	2021
134ಕ್ಕೆ9	ಜಹೀರ್‌ಖಾನ್	ಟ್ರೆಂಟ್ ಬ್ರಿಜ್	2007

ಅಂಧ ಬಾಲಕನಿಗೆ ಬ್ಯಾಟ್ ಉಡುಗೊರೆ ನೀಡಿದ ಜೈಸ್ವಾಲ್



ಬರ್ಮಿಂಗ್‌ಹ್ಯಾಮ್ (ಪಿಟಿಐ): ಎಜ್‌ಬಾಸ್ಟನ್ ಕ್ರೀಡಾಂಗಣ ಶನಿವಾರ ಸಂಜೆ ಹೃದಯಸ್ಪರ್ಶಿ ಕ್ಷಣಗಳಿಗೆ ಸಾಕ್ಷಿಯಾಯಿತು. ಭಾರತ ತಂಡದ ಯುವತಾರೆ ಯಶಸ್ವಿ ಜೈಸ್ವಾಲ್ ಅವರು ತಮ್ಮ ಅಭಿಮಾನಿ, ಅಂಧ ಬಾಲಕ ರವಿ ಅವರಿಗೆ ಹಸ್ತಾಕ್ಷರವಿರುವ ಬ್ಯಾಟ್ ಅನ್ನು ಕೊಡುಗೆಯಾಗಿ ನೀಡಿದರು.

ಜೈಸ್ವಾಲ್ ಅವರ ಕಟ್ಟಾ ಅಭಿಮಾನಿ ಆಗಿರುವ ರವಿ ಅವರು ಲೀಡ್ಸ್ ಟೆಸ್ಟ್‌ನಿಂದಲೇ ತಮ್ಮ ನೆಚ್ಚಿನ ಆಟಗಾರರನ್ನು ಭೇಟಿಯಾಗುವ ವಿಶ್ವಾಸದಲ್ಲಿದ್ದರು. ಆದರೆ ಎರಡನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ಅವರ ಕನಸು ಸಾಕಾರಗೊಂಡಿತು.

ಆಟದ ಬಗ್ಗೆ ರವಿ ಅವರ ಪ್ರೇಮ ಕಂಡು ಮಿಡಿದ ಜೈಸ್ವಾಲ್ 'ವಿದ್ ಬೆಸ್ಟ್ ವಿಷಸ್ ಟು ರವಿ ವಿದ್ ಕೇರ್ ಆ್ಯಂಡ್ ಲವ್' ಎಂದು ಹಸ್ತಾಕ್ಷರ ಸಹಿತ ಬ್ಯಾಟ್ ಕೊಡುಗೆಯಾಗಿ ನೀಡಿದರು.

'ಹಲೋ ರವಿ, ನೀನು ಹೇಗಿದ್ದಿ. ನಾನು ಯಶಸ್ವಿ. ನಿನ್ನನ್ನು ಭೇಟಿಯಾಗಲು ಸಂತಸವಾಗುತ್ತಿದೆ. ನೀನು ದೊಡ್ಡ ಕ್ರಿಕೆಟ್ ಅಭಿಮಾನಿಯೆಂದು ತಿಳಿದುಭೇಟಿಗೆ ಕಾತರನಾಗಿದ್ದೆ. ನಿನ್ನನ್ನು ಭೇಟಿಯಾಗಲು ಯಾಕೆ ಇಷ್ಟೊಂದು ನರ್ವಸ್ ಆಗುತ್ತಿದೆ ಗೊತ್ತಾಗುತ್ತಿಲ್ಲ' ಎಂದು ಜೈಸ್ವಾಲ್ ಅವರು ರವಿಗೆ ಹೇಳಿರುವ ವಿಡಿಯೊವನ್ನು ಬಿಸಿಸಿಐ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ.

'ನನ್ನ ಕಡೆಯಿಂದ ನಿನಗೊಂದು ಉಡುಗೊರೆಯಿದೆ.... ನನ್ನ ಬ್ಯಾಟ್. ನನ್ನ ನೆನಪಿನಲ್ಲಿ ಇದನ್ನು ತೆಗೆದಿಡು' ಎಂದು ಜೈಸ್ವಾಲ್ ಹೇಳಿದ್ದಾರೆ.

'2029, 2031ರ ವಿಶ್ವ ಅಥ್ಲೆಟಿಕ್ಸ್ ಆತಿಥ್ಯಕ್ಕೆ ಭಾರತ ಬಿಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತವು 2029 ಮತ್ತು 2031ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್‌ಗಳ ಆತಿಥ್ಯದ ಹಕ್ಕು ಪಡೆಯಲು ಬಿಡ್ ಸಲ್ಲಿಸಲು ಸಿದ್ಧತೆ ನಡೆಸಿದೆ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ವಕ್ತಾರ ಅದಿಲ್ ಸುಮರಿವಾಲಾ ಹೇಳಿದ್ದಾರೆ.


ಆದಿಲ್ ಸುಮರಿವಾಲಾ

2029 ಮತ್ತು 2031ರ ಕೂಟಗಳ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸುವ ಪ್ರಕ್ರಿಯೆ ಇದೇ ವರ್ಷ ಆರಂಭವಾಗಲಿದೆ. ಬಿಡ್ ಸಲ್ಲಿಗೆ ಇದೇ ಅಕ್ಟೋಬರ್ 1 ಕೊನೆಯ ದಿನವಾಗಿದೆ. ಮುಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಆಯೋಜನೆಯ ಹಕ್ಕು ಪಡೆದ ದೇಶಗಳನ್ನು ವಿಶ್ವ ಅಥ್ಲೆಟಿಕ್ಸ್ (ಡಬ್ಲ್ಯುಎ) ಪ್ರಕಟಿಸಲಿದೆ.

'ನಾವು ಈ ಎರಡೂ ವರ್ಷಗಳ ಕೂಟಕ್ಕಾಗಿ ಬಿಡ್ ಸಲ್ಲಿಸಲಿದ್ದೇವೆ. ಎರಡೂ ಕೂಟಗಳ ಆಯೋಜನೆ ಅಥವಾ ಯಾವುದಾದರೂ ಒಂದನ್ನು ಕೊಟ್ಟರೂ ಸಾಕು' ಎಂದು ಶನಿವಾರ ಹೇಳಿದರು.

ಎಎಫ್‌ಐ ಉಪಾಧ್ಯಕ್ಷರೂ ಆಗಿರುವ ಅವರು ಕಂಠೀರವ ಕ್ರೀಡಾಂಗಣದಲ್ಲಿ ನಡೆದ ನೀರಜ್ ಚೋಪ್ರಾ ಕ್ಲಾಸಿಕ್ ಅಂತರ ರಾಷ್ಟ್ರೀಯ ಜಾವೆಲಿನ್ ಥ್ರೋ ಕೂಟವನ್ನು ವೀಕ್ಷಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'2028ರ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್ ಆತಿಥ್ಯಕ್ಕಾಗಿ ನಾವು ಈಗಾಗಲೇ ಬಿಡ್ ಸಲ್ಲಿಸಿದ್ದೇವೆ' ಎಂದೂ ಸ್ಪಷ್ಟಪಡಿಸಿದರು.

'ವಿಶ್ವ ಅಥ್ಲೆಟಿಕ್ಸ್ ರಿಲೆ ಕೂಟದ ಆಯೋಜನೆಗೂ ಬಿಡ್ ಸಲ್ಲಿಸುತ್ತಿದ್ದೇವೆ. ಮುಂಬರುವ ಎರಡು ಕೂಟಗಳ ಆಯೋಜನೆ ಮಾಡುವ ದೇಶಗಳ ಹೆಸರುಗಳನ್ನು ಪ್ರಕಟಿಸಲಾಗಿದೆ. ಅದರ ನಂತರದ ಕೂಟವನ್ನು ಪಡೆಯಲು ನಾವು ಉತ್ಸುಕರಾಗಿದ್ದೇವೆ' ಎಂದು ಹೇಳಿದರು.

ಬೋತ್ಸವಾನಾ ಮತ್ತು ಬಹಮಾಸ್ ದೇಶಗಳು ಕ್ರಮವಾಗಿ 2026 ಹಾಗೂ 2028ರ ವಿಶ್ವ ರಿಲೆ ಕೂಟಗಳನ್ನು ಆಯೋಜಿಸಲಿವೆ.

ಶ್ರೀನಾಥ ಕುಲಕರ್ಣಿ, ಸಂದೀಪ್ ಈಗ ಬಿಸಿಸಿಐ ಅಂಪೈರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯ ಶ್ರೀನಾಥ ಕುಲಕರ್ಣಿ ಮತ್ತು ಶಿವಮೊಗ್ಗದ ಜೆ. ಸಂದೀಪ್ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಂಪೈರ್ ಆಗಿ ಅರ್ಹತೆ ಗಳಿಸಿದ್ದಾರೆ.

ಈಚೆಗೆ ಅಹಮದಾಬಾದಿನಲ್ಲಿ ನಡೆದಿದ್ದ ಬಿಸಿಸಿಐ ಅಂಪೈರಿಂಗ್ ಪರೀಕ್ಷೆಯಲ್ಲಿ ಶ್ರೀನಾಥ ಮತ್ತು ಸಂದೀಪ್ ಅವರು ಉತ್ತೀರ್ಣರಾಗಿದ್ದಾರೆ. ಈ ಪರೀಕ್ಷೆಯಲ್ಲಿ ಒಟ್ಟು 26 ಮಂದಿ ಪಾಸಾಗಿದ್ದಾರೆ. ಬಿಸಿಸಿಐ ಟೂರ್ನಿಗಳ ಪಂದ್ಯಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸುವ ಅವಕಾಶ ಅವರಿಗೆ ಲಭಿಸಲಿದೆ.


ಶ್ರೀನಾಥ


ಜೆ. ಸಂದೀಪ್

ಕ್ವಾರ್ಟರ್ ಫೈನಲ್‌ಗೆ ಫ್ರಿಟ್ಜ್

ಪುರುಷರ ಡಬಲ್ಸ್: ಮೂರನೇ ಸುತ್ತಿಗೆ ಭಾಂಬ್ರಿ ಜೋಡಿ

ಲಂಡನ್ (ಎಎಫ್‌ಪಿ): ಅಮೆರಿಕ ಓಪನ್ ರನ್ನರ್ ಅಪ್ ಟೇಲರ್ ಫ್ರಿಟ್ಜ್, ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಕ್ವಾರ್ಟರ್ ಫೈನಲ್ ತಲುಪಿದರು. ರಷ್ಯಾದ ಕರೆನ್ ಕಚನೋವ್ ಅವರೂ ಹೆಚ್ಚಿನ ಪ್ರಯಾಸವಿಲ್ಲದೆ ಎಂಟರ ಘಟ್ಟಕ್ಕೆ ಮುನ್ನಡೆದರು.

ಪುರುಷರ ಸಿಂಗಲ್ಸ್‌ನಲ್ಲಿ ಐದನೇ ಶ್ರೇಯಾಂಕದ ಫ್ರಿಟ್ಜ್ 6-1, 3-0ಯಿಂದ ಮುನ್ನಡೆಯಲ್ಲಿದ್ದಾಗ ಎದುರಾಳಿ ಆಟಗಾರ ಜೋರ್ಡಾನ್ ಥಾಂಪ್ಸನ್ (ಆಸ್ಟ್ರೇಲಿಯಾ) ಗಾಯದಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿದರು. ಇದರಿಂದಾಗಿ ವಾಕ್‌ಓವರ್ ಪಡೆದ ಅಮೆರಿಕದ 27 ವರ್ಷ ವಯಸ್ಸಿನ ಫ್ರಿಟ್ಜ್, ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ನಾಲ್ಕು ವರ್ಷಗಳಲ್ಲಿ ಮೂರನೇ ಬಾರಿ ಎಂಟರ ಘಟ್ಟ ಪ್ರವೇಶಿಸಿದಂತಾಗಿದೆ.

ವಿಶ್ವ ಕ್ರಮಾಂಕದಲ್ಲಿ 44ನೇ ಸ್ಥಾನದಲ್ಲಿರುವ ಥಾಂಪ್ಸನ್ ಇದೇ ಮೊದಲ ಬಾರಿ ವಿಂಬಲ್ಡನ್‌ನಲ್ಲಿ ನಾಲ್ಕನೇ ಸುತ್ತು ಪ್ರವೇಶಿಸಿದ್ದರು. 31 ವರ್ಷ ವಯಸ್ಸಿನ ಅವರು, ಶನಿವಾರ ಫ್ರಾನ್ಸ್‌ನ ಪಿಯರ್ ಹ್ಯೂಸ್ ಹರ್ಬರ್ಟ್ ಜೊತೆಗೂಡಿ ದೀರ್ಘ ಡಬಲ್ಸ್ ಪಂದ್ಯ ಆಡಿದ್ದರು. ಬೆನ್ನು ಮತ್ತು ಕಾಲು ನೋವಿನೊಂದಿಗೆ ಸಿಂಗಲ್ಸ್ ಸ್ಪರ್ಧೆಗೆ ಇಳಿದಿದ್ದ ಅವರು, 41 ನಿಮಿಷ ಹೋರಾಟ ನಡೆಸಿ ನಂತರ ಹೊರನಡೆದರು.



ಅಮೆರಿಕದ ಟೇಲರ್ ಫ್ರಿಟ್ಜ್ ಎಎಫ್‌ಪಿ ಚಿತ್ರ


ವಿಂಬಲ್ಡನ್‌ನಲ್ಲಿ ಮೊದಲ ಬಾರಿ ಸೆಮಿಫೈನಲ್ ತಲುಪುವ ಗುರಿ ಹೊಂದಿರುವ ಫ್ರಿಟ್ಜ್ ಅವರಿಗೆ ಮುಂದಿನ ಸುತ್ತಿನಲ್ಲಿ 17ನೇ ಶ್ರೇಯಾಂಕದ ಕಚನೋವ್ ಎದುರಾಳಿಯಾಗಿದ್ದಾರೆ. ರಷ್ಯಾದ ಅನುಭವಿ ಆಟಗಾರ 6-4, 6-2, 6-3ರ ನೇರ ಸೆಟ್‌ಗಳಿಂದ ಪೋಲೆಂಡ್‌ನ ಕಮಿಲ್ ಮಜ್‌ರ್ಜಾಕ್ ಅವರನ್ನು ಮಣಿಸಿದರು.

2022ರ ಅಮೆರಿಕ ಓಪನ್ ಮತ್ತು 2023ರ ಆಸ್ಟ್ರೇಲಿಯಾ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಕಚನೋವ್, ಇಲ್ಲಿ 2021ರ ಬಳಿಕ ಎರಡನೇ ಬಾರಿ ಎಂಟರ ಘಟ್ಟ ಪ್ರವೇಶಿಸಿದರು. 109ನೇ ಕ್ರಮಾಂಕದ ಮಜ್‌ರ್ಜಾಕ್ ಇದೇ ಮೊದಲ ಬಾರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ನಾಲ್ಕನೇ ಸುತ್ತಿನ ಪಂದ್ಯ ಆಡಿದರು.

ಯುಕಿ– ಗ್ಯಾಲವೆ ಜೋಡಿಗೆ ಮುನ್ನಡೆ: ಭಾರತದ ಯುಕಿ ಭಾಂಬ್ರಿ ಮತ್ತು ಅಮೆರಿಕದ ರಾಬರ್ಟ್ ಗ್ಯಾಲವೆ ಜೋಡಿಯು ಪುರುಷರ ಡಬಲ್ಸ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿತು.

16ನೇ ಶ್ರೇಯಾಂಕದ ಭಾಂಬ್ರಿ–ಗ್ಯಾಲವೆ ಜೋಡಿ 6-3, 7-6 (8-6)ರಿಂದ ಪೋರ್ಚುಗಲ್‌ನ ನುನೊ ಬೋರ್ಗೆಸ್ ಮತ್ತು ಮಾರ್ಕೋಸ್ ಗಿರಾನ್ ಅವರನ್ನು ಮಣಿಸಿತು. ಈ ಜೋಡಿ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸ್ಪೇನ್‌ನ ಮಾರ್ಸೆಲ್ಲೊ ಗ್ರಾನೊಲ್ಲರ್ಸ್ ಮತ್ತು ಅರ್ಜೆಂಟೀನಾದ ಹೊರಾಸಿಯೊ ಜೆಬೆಲ್ಲೊಸ್ ಅವರನ್ನು ಎದುರಿಸಲಿದ್ದಾರೆ.

ಸಬಲೆಂಕಾ ಗೆಲುವಿನ ಓಟ



ಗೆಲುವಿನ ಓಟ ಮುಂದುವರಿಸಿದ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಒಂದೂ ಸೆಟ್ ಕಳೆದುಕೊಳ್ಳದೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಎಂಟರ ಘಟ್ಟಕ್ಕೆ ಲಗ್ಗೆ ಹಾಕಿದರು. ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಬೆಲರೂಸ್‌ನ ಆಟಗಾರ್ತಿ 6-4, 7-6 (7/4)ರಿಂದ ಎಲಿಸ್ ಮರ್ಟೆನ್ಸ್ (ಬೆಲ್ಜಿಯಂ) ಅವರನ್ನು ಮಣಿಸಿದರು.

27 ವರ್ಷ ವಯಸ್ಸಿನ ಸಬಲೆಂಕಾ ಅವರು ವಿಂಬಲ್ಡನ್‌ನಲ್ಲಿ ಈತನಕ ಫೈನಲ್ ತಲುಪಿಲ್ಲ. ಎರಡನೇ ಶ್ರೇಯಾಂಕದಿಂದ ಆರನೇ ಶ್ರೇಯಾಂಕದವರೆಗಿನ ಆಟಗಾರ್ತಿಯರು ಈಗಾಗಲೇ ಟೂರ್ನಿಯಿಂದ ಹೊರಬಿದ್ದಿರುವುದರಿಂದ ಇಲ್ಲಿ ಪ್ರಶಸ್ತಿ ಗೆಲ್ಲುವ ಉತ್ತಮ ಅವಕಾಶ ಅವರ ಮುಂದಿದೆ.

ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಸಬಲೆಂಕಾ ಅವರು ಮಂಗಳವಾರ ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ ಜರ್ಮನಿಯ ಲಾರಾ ಸಿಗ್ಮೆಂಡ್ ಅವರನ್ನು ಎದುರಿಸಲಿದ್ದಾರೆ. ಶ್ರೇಯಾಂಕರಹಿತ ಸಿಗ್ಮೆಂಡ್ 6-3, 6-2ರಿಂದ ಸೋಲಾನಾ ಸಿಯೆರಾ (ಅರ್ಜೆಂಟೀನಾ) ವಿರುದ್ಧ ಗೆಲುವು ಸಾಧಿಸಿದರು.

ವಿಶ್ವ ಬಾಕ್ಸಿಂಗ್ ಕಪ್: ಜುಗನು, ಪೂಜಾರಾಣಿಗೆ ರಜತ

ಸಾಕ್ಷಿ, ಜಾಸ್ಮಿನ್, ನೂಪುರ್‌ಗೆ ಚಿನ್ನ

ಅಸ್ತಾನ (ಕಜಕಸ್ತಾನ) (ಪಿಟಿಐ): ಭಾರತದ ಬಾಕ್ಸರ್‌ಗಳಾದ ಸಾಕ್ಷಿ, ಜಾಸ್ಮಿನ್ ಹಾಗೂ ನೂಪುರ್ ಇಲ್ಲಿ ಇಲ್ಲಿ ನಡೆದ ಎರಡನೇ ವಿಶ್ವ ಬಾಕ್ಸಿಂಗ್ ಕಪ್‌ನಲ್ಲಿ ಚಿನ್ನ ಗೆದ್ದರು.

ಇದರೊಂದಿಗೆ, ಟೂರ್ನಿಯ ವಿವಿಧ ವಿಭಾಗಗಳಲ್ಲಿ ಭಾರತವು 11 ಪದಕಗಳನ್ನು (3 ಚಿನ್ನ, 5 ಬೆಳ್ಳಿ ಹಾಗೂ 3 ಕಂಚು) ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿತು. ಈ ಟೂರ್ನಿಯ ಮೊದಲ ಆವೃತ್ತಿಯು ಬ್ರೆಜಿಲ್‌ನಲ್ಲಿ ನಡೆದ ಸಂದರ್ಭದಲ್ಲಿ ಭಾರತ ತಂಡವು ಒಂದು ಚಿನ್ನ ಮತ್ತು ಬೆಳ್ಳಿ ಸೇರಿದಂತೆ ಆರು ಪದಕಗಳನ್ನು ಗೆದ್ದಿತ್ತು.

ಈ ಹಿಂದೆ ಎರಡು ಬಾರಿ ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್ ಕೂಡ ಆಗಿರುವ 24 ವರ್ಷದ ಸಾಕ್ಷಿ 54 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದರು. ನಿರ್ಣಾಯಕ ಬೌಟ್‌ನಲ್ಲಿ ಅವರು ಅಮೆರಿಕದ ಯೊಸಲಿನ್ ಪೆರೆಜ್ ವಿರುದ್ಧ ಜಯಿಸಿದರು. ಎದುರಾಳಿ ಮೇಲೆ ವೇಗ ಮತ್ತು ನಿಖರತೆ ಮೇಳೈಸಿದ್ದ ಪಂಚ್‌ಗಳ ಸುರಿಮಳೆ ಮಾಡಿದ ಸಾಕ್ಷಿ ಗೆದ್ದರು.

ಮಹಿಳೆಯರ 57 ಕೆ.ಜಿ ವಿಭಾಗದಲ್ಲಿ ಜಾಸ್ಮಿನ್ ಅವರು ಬ್ರೆಜಿಲ್‌ನ ಜೂಸಿಎಲೆನ್ ಸಿಕ್ವೆರಿಯಾ ಎದುರು 4–1ರಿಂದ ಗೆಲುವು ಸಾಧಿಸಿದರು. 80+ ಕೆ.ಜಿ. ವಿಭಾಗದಲ್ಲಿ ಭಾರತದ ನೂಪುರ್ ಅವರು ಆತಿಥೇಯ ಕಜಕಸ್ತಾನದ ಯೆಲ್ದಾನ ತಾಲಿಪೋವ ಅವರನ್ನು 5–0ರಿಂದ ಮಣಿಸಿದರು.

ಇದಕ್ಕೂ ಮುನ್ನ ಭಾರತದ ಮೀನಾಕ್ಷಿ ಅವರು 48 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಸ್ಥಳೀಯ ಸ್ಪರ್ಧಿ ನಜೀಂ ಕೈಝ್ಯುಬೆ ಅವರಿಂದ ಕಠಿಣ ಪೈಪೋಟಿ ಎದುರಿಸಿದರು. ಸ್ಥಳೀಯ ಬಾಕ್ಸರ್ 3–2ರಿಂದ ಗೆದ್ದರು. ಮೀನಾಕ್ಷಿ ಬೆಳ್ಳಿ ಗಳಿಸಿದರು.

ಪುರುಷರ 65 ಕೆ.ಜಿ ವಿಭಾಗದಲ್ಲಿ ಅಭಿನಾಶ್ ಜಾಮವಾಲ್, 70 ಕೆ.ಜಿ ವಿಭಾಗದಲ್ಲಿ ಹಿತೇಶ್ ಗುಲಿಯಾ, 85 ಕೆ.ಜಿ ವಿಭಾಗದಲ್ಲಿ ಜುಗನು ಮತ್ತು ಮಹಿಳೆಯರ 80 ಕೆ.ಜಿ ವಿಭಾಗದಲ್ಲಿ ಪೂಜಾರಾಣಿ ಅವರೂ ಬೆಳ್ಳಿಪದಕ ಜಯಿಸಿದರು.


ಭಾರತದ ಬಾಕ್ಸಿಂಗ್ ಸ್ಪರ್ಧಿ ಸಾಕ್ಷಿ

ಜುಗನು ಅವರು ಫೈನಲ್ ಬೌಟ್‌ನಲ್ಲಿ 0–5ರಿಂದ ಕಜಕಸ್ತಾನದ ಬೆಕ್ಝಾದ್ ನುರ್ದುಲೆಟೋವ್ ವಿರುದ್ಧ ಸೋತರು. ಪೂಜಾ 0–5ರಿಂದ ಆಸ್ಟ್ರೇಲಿಯಾದ ಎಸೆಟಾ ಫ್ಲಿಂಟ್ ಎದುರು ಪರಾಭವಗೊಂಡರು.

ಮಹಿಳಾ ಕ್ರಿಕೆಟ್ ತಂಡಕ್ಕೆ ಅದ್ದೂರಿ ಸ್ವಾಗತ

ಲಂಡನ್ (ಪಿಟಿಐ): ಏಕದಿನ ಹಾಗೂ ಟಿ20 ಕ್ರಿಕೆಟ್ ಸರಣಿಗಳಲ್ಲಿ ಆಡಲು ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತ ಮಹಿಳಾ ತಂಡಕ್ಕೆ ಶನಿವಾರ ಇಲ್ಲಿನ 'ಇಂಡಿಯಾ ಹೌಸ್'ನಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು.

ಮುಖ್ಯ ಕೋಚ್ ಅಮೋಲ್ ಮಜುಂದಾರ್ ನೇತೃತ್ವದಲ್ಲಿ ಮಹಿಳಾ ತಂಡ ಹಾಗೂ ಸಹಾಯಕ ಸಿಬ್ಬಂದಿ ಕಾರ್ಯಕ್ರಮದಲ್ಲಿ ಹಾಜರಿದ್ದರು. ಇಂಗ್ಲೆಂಡ್‌ಗೆ ಭಾರತದ ಹೈಕಮಿಷನರ್ ಆಗಿರುವ ವಿಕ್ರಂ ದೊರೆಸ್ವಾಮಿ ಅವರು ಆಟಗಾರ್ತಿಯರು ಹಾಗೂ ಕೋಚ್ ಸಿಬ್ಬಂದಿಯನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಲಂಡನ್‌ನಲ್ಲಿ ನೆಲಸಿರುವ ಭಾರತೀಯ ಸಮುದಾಯದವರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಆಲ್‌ರೌಂಡರ್ ಜೆಮಿಮಾ ರಾಡ್ರಿಗಸ್ ಅವರು 'ಶೋಲೆ' ಹಿಂದಿ ಚಿತ್ರದ 'ಯೇ ದೋಸ್ತಿ..ಹಮ್ ನಹೀ ತೋಡೆಂಗೆ..' ಗೀತೆಯನ್ನು ಹಾಡಿ, ಅಭಿಮಾನಿಗಳನ್ನು ರಂಜಿಸಿದರು.

ಭಾರತ– ಇಂಗ್ಲೆಂಡ್ ನಡುವಣ ಟಿ20 ಸರಣಿಯ ನಾಲ್ಕನೇ ಪಂದ್ಯವು ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಬುಧವಾರ ನಡೆಯಲಿದೆ.

ಕಾರ್ಲ್‌ಸನ್‌ಗೆ ಪ್ರಶಸ್ತಿ

ಝಾಗ್ರೆಬ್ (ಕ್ರೊವೇಷ್ಯಾ) (ಪಿಟಿಐ): ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಸೂಪರ್ ಯುನೈಟೆಡ್ ರ‍್ಯಾಪಿಡ್ ಮತ್ತು ಬ್ಲಿಟ್ಝ್ ಟೂರ್ನಿಯಲ್ಲಿ ಒಂದು ಸುತ್ತು ಉಳಿದಿರುವಂತೆ ಪ್ರಶಸ್ತಿ ಗೆದ್ದುಕೊಂಡರು.

ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಮೂರನೇ ಸ್ಥಾನ ಪಡೆದರು. ರ‍್ಯಾಪಿಡ್ ವಿಭಾಗದಲ್ಲಿ 14 ಅಂಕ ಗಳಿಸಿ ಮಿಂಚಿದ್ದ ಗುಕೇಶ್ ಬ್ಲಿಟ್ಝ್‌ನಲ್ಲಿ ಅಷ್ಟೇನೂ ಉತ್ತಮ ಸಾಧನೆ ತೋರಲಿಲ್ಲ.

ನಾರ್ವೆಯ ಕಾರ್ಲ್‌ಸನ್ ಒಟ್ಟು 22.5 ಅಂಕ ಕಲೆಹಾಕಿದರು.

'ಮ್ಯಾಜಿಕ್ ಸ್ಕಿಲ್ ಪ್ರಶಸ್ತಿ' ರೇಸ್‌ನಲ್ಲಿ ದೀಪಿಕಾ ಗೋಲು

ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದ ಆಟಗಾರ್ತಿ ದೀಪಿಕಾ ಅವರು ವಿಶ್ವದ ಅಗ್ರಮಾನ್ಯ ತಂಡ ನೆದರ್ಲೆಂಡ್ಸ್ ವಿರುದ್ಧ 2024–25ರ ಸಾಲಿನ ಪ್ರೊ ಲೀಗ್ ಪಂದ್ಯದ ವೇಳೆ ಗಳಿಸಿದ ಅಮೋಘ ಫೀಲ್ಡ್ ಗೋಲು 'ಪಾಲಿಗ್ರಾಸ್ ಮ್ಯಾಜಿಕ್ ಸ್ಕಿಲ್' ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದೆ.


ದೀಪಿಕಾ

ಚಮತ್ಕಾರಿಕ ಗೋಲು ಹೊಡೆಯುವ ಆಟಗಾರ್ತಿಯರಿಗೆ ಈ ಪುರಸ್ಕಾರ ನೀಡಲಾಗುತ್ತಿದೆ. ಪಾಲಿಗ್ರಾಸ್ ಮ್ಯಾಜಿಕ್ ಸ್ಕಿಲ್ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಶುಕ್ರವಾರ ಪ್ರಕಟಿಸಲಾಗಿದೆ. ಜುಲೈ 14ರ ಬೆಳಿಗ್ಗೆ 3.29ರವರೆಗೆ (ಭಾರತೀಯ ಕಾಲಮಾನ) ಮತದಾನಕ್ಕೆ ಗಡುವು ಇದೆ.

ನಾಮನಿರ್ದೇಶನಗೊಂಡ ಗೋಲುಗಳಲ್ಲಿ ಯಾವುದು ಇಷ್ಟವಾಗಿದೆ ಎಂದು ಮತಹಾಕಲು ವಿಶ್ವದೆಲ್ಲೆಡೆಯ ಹಾಕಿ ಅಭಿಮಾನಿಗಳಿಗೆ ಅವಕಾಶ ಇದೆ.

ಫೆಬ್ರುವರಿಯಲ್ಲಿ ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪ್ರೊ ಲೀಗ್ ಪಂದ್ಯದಲ್ಲಿ ದೀಪಿಕಾ ಅವರು ನೆದರ್ಲೆಂಡ್ಸ್ ವಿರುದ್ಧ ಈ ಗೋಲು ಗಳಿಸಿದ್ದರು. ಪಂದ್ಯ ನಿಗದಿತ ಅವಧಿಯಲ್ಲಿ 2–2 ಡ್ರಾ ಆದ ನಂತರ ವಿಜೇತರ ನಿರ್ಧಾರಕ್ಕೆ ನಡೆದ ಶೂಟೌಟ್‌ನಲ್ಲಿ ಭಾರತ ತಂಡ ಜಯಗಳಿಸಿತ್ತು.

ಭಾರತ ಎರಡು ಗೋಲುಗಳಿಂದ ಹಿಂದೆಯಿದ್ದಾಗ ದೀಪಿಕಾ ಅವರು ಆ ಅತ್ಯಾಕರ್ಷಕ ಫೀಲ್ಡ್ ಗೋಲು ಗಳಿಸಿದ್ದರು. ಎಡಭಾಗದಿಂದ ಚೆಂಡನ್ನು ಡ್ರಿಬಲ್ ಮಾಡುತ್ತ ಎದುರಾಳಿ ರಕ್ಷಣೆ ಆಟಗಾರ್ತಿಯ ಸ್ಟಿಕ್ ಮೇಲಿಂದ ಚೆಂಡನ್ನು ದಾಟಿಸಿ, ಗೋಲ್ ಕೀಪರ್ ಅವರನ್ನು ತಪ್ಪಿಸಿ ಗಳಿಸಿದ ಆ ಗೋಲು ಗಮನ ಸೆಳೆದಿತ್ತು.

'ನೆದರ್ಲೆಂಡ್ಸ್ ಎದುರಿನ ಆ ಗೋಲು ನನ್ನ ಹಾಕಿ ಜೀವನದ ಅತ್ಯಂತ ವಿಶೇಷ ಕ್ಷಣಗಳಲ್ಲಿ ಒಂದು. ಎಲ್ಲವೂ ನಿರೀಕ್ಷೆಗೆ ತಕ್ಕಂತೆ ಸಾಗಿತು. ಆ ಗೋಲಿನಿಂದ ನಮಗೆ ಸ್ಕೋರ್ ಸಮಮಾಡಲು ಸಾಧ್ಯವಾಯಿತು. ಈ ಪ್ರಶಸ್ತಿ ನಾಮನಿರ್ದೇಶನ ಮಾಡಿದ್ದು ನನಗೆ ಗೌರವದ ಸಂಗತಿ' ಎಂದಿದ್ದಾರೆ ದೀಪಿಕಾ.

ಸ್ಪೇನಿನ ಪೆಟ್ರೀಷಿಯಾ ಅಲ್ವಾರೆಝ್ (ಆಸ್ಟ್ರೇಲಿಯಾ ವಿರುದ್ಧ) ಮತ್ತು ಆಸ್ಟ್ರೇಲಿಯಾ ಆಟಗಾರ್ತಿಯರ ಸಾಂಘಿಕ ಗೋಲು (ಇಂಗ್ಲೆಂಡ್ ವಿರುದ್ಧ) ಸಹ ಈ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದೆ.

ಟೇಬಲ್ ಟೆನಿಸ್ ಟೂರ್ನಿ 10ರಿಂದ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಟೇಬಲ್ ಟೆನಿಸ್ ಸಂಸ್ಥೆಯು 3ನೇ ಆವೃತ್ತಿಯ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯನ್ನು ಇದೇ 10ರಿಂದ 13ರವರೆಗೆ ಆಯೋಜಿಸಿದೆ. ಮಂಗಳೂರಿನ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಸ್ಪರ್ಧಿಗಳು ತಮ್ಮ ಹೆಸರು ನೋಂದಾಯಿಸಲು ಸೋಮವಾರ ಅಂತಿಮ ದಿನವಾಗಿದ್ದು, https://karnatakatabletennisಗೆ ಭೇಟಿ ನೀಡಬಹುದು.